ಪುಸ್ತಕ ಪ್ರಪಂಚ

ಸಂಪುಟ ೩೮   ೧೯೮೪ ಫೆಬ್ರವರಿ   ಸಂಚಿಕೆ ೭



ವಿಷಯ ಸೂಚಿ

ಮುಖಚಿತ್ರ : ಶ್ರೀ ಯಶವಂತ ಚಿತ್ತಾಲ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಫೆಬ್ರವರಿ ೧೯೮೪ ಸಂಚಿಕೆ ೭

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಯಶವಂತ ಚಿತ್ತಾಲ

ಕನ್ನಡ ಸಣ್ಣಕತೆಗಳ ಜನಕ ಮಾಸ್ತಿಯವರ ಅನಂತರದಲ್ಲಿ ಅಗ್ರಪಂಕ್ತಿಗೆ ಸೇರಿದ ಕತೆಗಾರರೂ ಆಧುನಿಕ ಕನ್ನಡ ಸಾಹಿತ್ಯ ಪ್ರತಿಭಾನ್ವಿತ ಸೃಜನಶೀಲ ಗದ್ಯ ಲೇಖಕರೂ ಆದ ಯಶವಂತ ಚಿತ್ತಾಲರ 'ಕತೆಯಾದಳು ಹುಡುಗಿ' ಕಥಾಸಂಕಲನಕ್ಕೆ ೧೯೮೩ನೆಯ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭ್ಯವಾಗಿದೆ. ಇದು ಚಿತ್ತಾಲರ ಐದನೆಯ ಕಥಾಸಂಕಲನ. ನವೋದಯ ಮತ್ತು ನವ್ಯಕತೆಗಳ ಸಂಧ್ಯಾಕಾಲದಲ್ಲಿ ಹೊಸ ಹಾದಿಯ ಸ್ಫೂರ್ತಿಯೊಂದಿಗೆ ಕಥಾಸೃಷ್ಟಿಗೆ ತೊಡಗಿದ ಚಿತ್ತಾಲರು ಈವರೆಗೆ ಸಂದರ್ಶನ (೧೯೫೭) ಆಬೋಲಿನ (೧೯೬೦) ಆಟ (೧೯೬೯) ಆಯ್ದ ಕಥೆಗಳು (೧೯೭೬) ಕತೆಯಾದಳು ಹುಡುಗಿ (೧೯೮೦) ಚೀನ್ಯಾ (೧೯೮೨) ಕಥಾಸಂಕಲನಗಳನ್ನೂ ಮೂರು ದಾರಿಗಳು (೧೯೬೪) ಶಿಕಾರಿ (೧೯೭೯) ಎಂಬ ಎರಡು ಕಾದಂಬರಿಗಳನ್ನೂ ರಚಿಸಿ, ಕನ್ನಡ ಸಾರಸ್ವತ ಲೋಕದಲ್ಲಿ ಗಟ್ಟಿಯಾಗಿ ನೆಲೆನಿಂತ ಸಾರಸ್ವತರಾಗಿದ್ದಾರೆ.

ಕಳೆದ ಮೂವತ್ತಾರು ವರ್ಷಗಳಿಂದ ಮುಂಬಯಿ ಮಹಾನಗರದಲ್ಲಿ ವಾಸವಾಗಿರುವ ಅವರು, ಹುಟ್ಟಿ ಬೆಳೆದದ್ದು ಮಲೆನಾಡಿನ ತೊಟ್ಟಿಲಾದ ಉತ್ತರ ಕನ್ನಡದಲ್ಲಿ. ಸ್ತನ್ಯಪಾನ ಹನೇಹಳ್ಳಿಯಲ್ಲಿ. ಮುಂಬಯಿಯ ಬೇಕಲೈಟ್ ಹೈಲಂ ಲಿಮಿಟೆಡ್ ಸಂಸ್ಥೆಯಲ್ಲಿ, ಮಾರ್ಕೆಟಿಂಗ್ ವಿಭಾಗದಲ್ಲಿ ಡೈರೆಕ್ಟರ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಪ್ಲಾಸ್ಟಿಕ್ ಅಂಡ್ ರಬ್ಬರ್ ಸಂಸ್ಥೆಗಳಲ್ಲಿ ಸಂದರ್ಶನ ಪ್ರಾಧ್ಯಾಪಕ ವೃತ್ತಿಯಾದರೆ, ಪ್ರವೃತ್ತಿ ಕನ್ನಡ ಸಾಹಿತ್ಯ ಸೃಷ್ಟಿ. ಟೆಂಡರ್, ಕೊಟೇಶನ್ಸ್, ಆರ್ಡರ್ಸ್‌ಗಳ ಸುಳಿಯಲ್ಲಿರುವ

ಚಿತ್ತಾಲರ ಸಾಹಿತ್ಯ ಸೃಷ್ಟಿಯಲ್ಲಿ, ಭಾವ ಪ್ರಪಂಚದಲ್ಲಿ, ಆಂತರಿಕ ಬೆಳವಣಿಗೆಯಲ್ಲಿ ಹನೇಹಳ್ಳಿಯಲ್ಲಿ ಮಣ್ಣಿನ ವಾಸನೆ ಮಹತ್ವದ ಪಾತ್ರ ವಹಿಸಿದ್ದರೆ, ಮುಂಬಯಿ ಮಹಾನಗರದ ವಾಸ, ಯುರೋಪು, ಇಂಗ್ಲೆಂಡು, ಅಮೆರಿಕ, ಜಪಾನ್ ಹಾಗೂ ಮಧ್ಯಪೂರ್ವ ದೇಶಗಳ ಹಲವುಬಾರಿಯ ಪ್ರವಾಸಗಳು ಪಾಶ್ಚಾತ್ಯ-ಪೌರ್ವಾತ್ಯ ದೇಶಗಳ ಸಾಹಿತ್ಯ, ವಿಚಾರಧಾರೆ, ಸಂಸ್ಕೃತಿ, ಜನಜೀವನ, ಮೌಲ್ಯಗಳ, ಒಲವು-ನಿಲವುಗಳ ತೌಲನಿಕ ಪರಿಚಯ ಮಾಡಿಸಿ, ಅವರ ಸಾಹಿತ್ಯ ಸೃಷ್ಟಿ, ಸೃಜನ ಪ್ರಕ್ರಿಯೆ, ಆಶಯ, ನಿಲವುಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ; ಅವರನ್ನು ನಮ್ಮ ಗಟ್ಟಿ ಲೇಖಕರಲ್ಲಿ ಒಬ್ಬರನ್ನಾಗಿಸಿದೆ. ಡಾ|| ಹಾ. ಮಾ. ನಾಯಕರು ಕಂಡುಕೊಂಡಂತೆ, "ಒಂದು ಉದಾರವಾದ ಸೃಜನಶೀಲ ಮನಸ್ಸು ವ್ಯಾಪಿಸಿಕೊಳ್ಳುವ ಬಗೆ ಯಶವಂತ ಚಿತ್ತಾಲರ ಸಾಹಿತ್ಯ." ಅವರು ಬದುಕನ್ನು ಕುತೂಹಲದ ಕಣ್ಣುಗಳಿಂದ ನೋಡುವಂತೆಯೇ, ಬೇರೆಬೇರೆ ವಿಚಾರಧಾರೆಗಳಿಗೆ, ಶಾಸ್ತ್ರ ವಿಷಯಗಳಿಗೆ ಮನಸ್ಸನ್ನು ತೆರೆದಿದ್ದಾರೆ. ಇದರಿಂದ ಅವರ ಸೃಷ್ಟಿಗೆ ಬಲ ಬಂದಿದೆ. ಇಂದಿನ ಲೇಖಕರಲ್ಲಿ ಅಷ್ಟಾಗಿ ಕಾಣದ ಸಂಯಮವನ್ನು ನಾವು ಚಿತ್ತಾಲರಲ್ಲಿ ಕಾಣಬಹುದು. ಇದರಿಂದಲೂ ಅವರ ಸಾಹಿತ್ಯಕ್ಕೆ ಶಕ್ತಿ ಬಂದಿವೆ."

ಅತ್ಯಂತ ಸೂಕ್ಷ್ಮ ಸಂವೇದನೆಯ ಲೇಖಕರಾದ ಚಿತ್ತಾಲರ ಸಾಹಿತ್ಯ ಸೃಷ್ಟಿಯನ್ನು ಅರ್ಥೈಸಿಕೊಳ್ಳುವಲ್ಲಿ 'ಸಾಹಿತ್ಯ ಸೃಜನಶೀಲತೆ ಮತ್ತು ನಾನು' (೧೯೮೧) ಎಂಬ ಅವರ ಪ್ರಬಂಧ ಸಂಕಲನ ಮತ್ತು ೧೯೮೩ರಲ್ಲಿ ಪ್ರಕಟವಾದ 'ಚಿತ್ತಾಲರ ಕತೆಗಳು' ಪುಸ್ತಕಕ್ಕೆ ಮುನ್ನುಡಿಯಾಗಿ 'ಹೃದಯವುಳ್ಳ ಹಾದಿಯಲ್ಲಿ' ಎಂಬ ಶೀರ್ಷಿಕೆಯಡಿಯಲ್ಲಿ 'ನಾನು ಲೇಖಕನಾಗಿ ಬೆಳೆದು ಬಂದ ರೀತಿ' ಎಂಬ ಸುದೀರ್ಘ ಲೇಖನ ಉತ್ತಮ ಮಾರ್ಗದರ್ಶಿಗಳು. ಈ ಬರೆಹಗಳಲ್ಲಿ ಒಬ್ಬ ಸೃಜನಶೀಲ ಲೇಖಕನಲ್ಲಿ ಸೃಷ್ಟಿಕ್ರಿಯೆ ಮತ್ತು ಅವನ ಮಾನಸಿಕ ಪ್ರಕ್ರಿಯೆಗಳು ಹೇಗೆ ನಡೆಯುತ್ತವೆ? ಅವನ ಸಾಹಿತ್ಯದ ಧೋರಣೆ ನಂಬಿಕೆಗಳೇನು? ಕತೆಗಳಿಗೆ ವಸ್ತುಗಳಾದ ವ್ಯಕ್ತಿಗಳು, ಘಟನೆಗಳು, ಇವುಗಳ ಮೂಲ ಆಕರ ಯಾವುದು? ಅದರಲ್ಲಿ ಆತ್ಮ ವೃತ್ತವೆಷ್ಟು? ಅಮುದಾವದ್ದೆಷ್ಟು? ಎಂಬೆಲ್ಲ ಒಳವಿವರಗಳ, ಒಳಪದರಗಳ ಪರಿಚಯ ಓದುಗನಿಗೆ ವ್ಯವಸ್ಥಿತವಾಗಿ ಸಿಗುತ್ತದೆ. ಅವರ ಪ್ರಬಂಧ ಮತ್ತು ಮುನ್ನುಡಿಯಿಂದ ಚಿತ್ತಾಲರ ಚಿತ್ರವಿಕಾಸದ ವಿವರಣೆ ದೊರೆತು ಅವರ ಸಾಹಿತ್ಯ ಸೃಷ್ಟಿಯ ಮೇಲೆ ವಿಶೇಷ ಬೆಳಕು ಚೆಲ್ಲಲು ಸಹಾಯವಾಗಿದೆ.

ಉದಾಹರಣೆಗೆ, ಅವರ ಪ್ರಪ್ರಥಮ ಕಥಾಸಂಕಲವಾದ 'ಸಂದರ್ಶನ'ದ 'ಉತ್ತಮಿ' ಕತೆ. ಸಮಾಜದ ಸಾಂಪ್ರದಾಯಿಕ ಮೌಲ್ಯವನ್ನು ತುಂಬ ಕಾಳಜಿಯಿಂದ, ಶ್ರದ್ಧಾ-ನಿಷ್ಠೆಗಳಿಂದ ಮನ್ನಿಸಿ, ಅದೇ ಸಮಾಜದಲ್ಲಿ ತಲೆ ದೋರುವ ಒತ್ತಡ, ತಾಕಲಾಟಗಳ ಸುತ್ತ ಮೂಡಿ ಬಂದ ಈ ಕಥೆ ಅವರ ಬದುಕಿನಲ್ಲಿ ನಡೆದ ಒಂದು ನೈಜ ಘಟನೆಯ ಚಿತ್ರಣ. ಉತ್ತಮಿಯ ಮಗಳಾದ ಕಲ್ಯಾಣಿಯ ಪಾತ್ರವೊಂದನ್ನುಳಿದು, ಉಳಿದ ಪಾತ್ರಗಳ ಹೆಸರನ್ನೂ ಬದಲಿಸದೆ ಹಾಗೆಯೇ ಬಳಸಿಕೊಂಡಿದ್ದಾರೆ. ಕತೆಯೊಳಗಿನ ಕಲ್ಯಾಣಿಯ ನಿಜವಾದ ಹೆಸರು ಪಾರೂ. ಈ ಪಾರೂ ಅವರ ಕೃತಿಗಳಲ್ಲಿ ಮತ್ತೆಮತ್ತೆ ಮೈತಾಳಿ; ಮರೆಯಲಾಗದ ಅನುಭವವಾಗಿ ಮುಖಾಮುಖಿಯಾಗಿರುವುದನ್ನು, ಲೇಖಕರು 'ಪಾರೂ ನನ್ನ ಕತೆಯೊಳಗಿನ ಕಲ್ಯಾಣಿ' ಎಂಬ ಲೇಖನದಲ್ಲಿ ಹೀಗೆ ವಿವರಿಸುತ್ತಾರೆ: "ಚಿಕ್ಕಂದಿನ ಅನೇಕ ನೆನಪುಗಳ ಹಾಗೇ ನಮ್ಮ ಬಾಲ್ಯವನ್ನು ಶ್ರೀಮಂತಗೊಳಿಸಿದ ಸಂಗತಿಗಳಲ್ಲೊಂದಾಗಿ ಮಾತ್ರ ಉಳಿದ ಘಟನೆಯಾದರೂ ನನ್ನ ಸಾಹಿತ್ಯದ ಅನೇಕ ಸ್ತ್ರೀಪಾತ್ರಗಳ ಮುಖಾಂತರ ಹೆಚ್ಚುಹೆಚ್ಚು ಸ್ಪಷ್ಟವಾದ, ಹೆಚ್ಚುಹೆಚ್ಚು ಜೀವಂತವಾದ ರೂಪ ಪಡೆಯಲು ಹವಣಿಸುತ್ತಿದ್ದ ಪ್ರತಿಮೆ ಮಾತ್ರ ನಾಲ್ವತ್ತು ವರ್ಷಗಳ ಹಿಂದೆ ಪಾರೂ ನಮ್ಮ ದಣಪೆ ದಾಟಿ ಓಣಿಯಲ್ಲಿ ನನ್ನ ಕಡೆಗೆ ಬೆನ್ನುಮಾಡಿ ಹೋಗುತ್ತಿರುವಾಗಿನ ತಬ್ಬಲಿ ಪ್ರತಿಮೆಯಲ್ಲಿ ಮೂಡಿದ್ದಾಗಿದೆಯೆಂದು ಈಗ ಹೊಳೆಯುತ್ತಿದೆ. ಸಪುರವಾದ ಸೊಂಟ. ಪಾದಗಳನ್ನು ಸಂಪೂರ್ಣವಾಗಿ ಮುಚ್ಚುವಷ್ಟು ಉದ್ದವಾದ ಬಿಳಿಯ ಕಿರುಗಣಿ, ಖಣದ ರವಕೆ, ಮೊಣಕಾಲು ಮುಟ್ಟುವಷ್ಟು ಉದ್ದವಾದ ಕಪ್ಪು ಕೂದಲ ಜಡೆ, ನನಗೆ ಮೋರೆ, ಕಣ್ಣು, ಮೂಗು, ತುಟಿಗಳನ್ನು ಮೂಡಿಸು ಎನ್ನುವಂತೆ ಆಹ್ವಾನಿಸುತ್ತ ನನ್ನ ಸಾಹಿತ್ಯದಲ್ಲಿ ಮತ್ತೆಮತ್ತೆ ಬಂದವಳು ಇತ್ತೀಚಿನ ಕತೆಯಾದ "ಕತೆಯಾದಳು ಹುಡುಗಿ"ಯಲ್ಲಿ ಹೊಟ್ಟೆಯ ಮಗಳಾಗಿ ಬಂದ ಜಾನಕಿಯಲ್ಲೂ ಪ್ರಕಟವಾಗಿದ್ದಾಳೆ!" ಈ ರೀತಿ ಒಂದು ಕತೆಗೆ ಪ್ರೇರಣೆ, ಕತೆಯ ಪ್ರತಿಮೆ, ಅದು ಮೈದಳೆದದ್ದರ ಸೊಗಸಾದ ನಿರೂಪಣೆ, ಓದುಗನಿಗೆ ಒದಗಿ, ನಡೆದ ಘಟನೆಯೇ ಕತೆಯಾಗಿ ಬಂದರೂ ಕತೆಗೂ ಘಟನೆಗೂ ಸಾಮ್ಯವಿದ್ದರೂ ಕಲಾತ್ಮಕ ಅಂಶಗಳಿಂದ ಕಂಗೊಳಿಸುವಾಗ ಅವು ಹೇಗೆ ತೀರ ಭಿನ್ನವಾಗಿರುತ್ತವೆ; ಪ್ರಾದೇಶಿಕತೆ, ವೈಯಕ್ತಿಕತೆಗಳು ಹೇಗೆ ಸಾರ್ವತ್ರೀಕರಣಗೊಳ್ಳುತ್ತವೆ ಎಂಬುದರ ಸೂಚನೆ ಈ ಪ್ರಬಂಧಗಳಲ್ಲಿ ದೊರಕುತ್ತದೆ.

ಚಿತ್ತಾಲರ ಕತೆಗಳನ್ನು ಓದುವಾಗ, ವಿಮರ್ಶಿಸುವಾಗ ಇರಬೇಕಾದ ಹಿನ್ನೆಲೆಯನ್ನು ಜಿ.ಎಸ್. ಆಮೂರರು ಈ ರೀತಿ ಗುರುತಿಸಿದ್ದಾರೆ. ಮೊದಲನೆಯದಾಗಿ, ಅವರ ಭಾವನೆ ವಿಚಾರಗಳ ಉಗಮಸ್ಥಾನವಾದ, ಅವರು ಹುಟ್ಟಿಬೆಳೆದ ಪರಿಸರವಾದ ಉತ್ತರಕನ್ನಡ ಜಿಲ್ಲೆ. ಅದರಲ್ಲಿಯೂ ಹುಟ್ಟೂರಾದ ಹನೇಹಳ್ಳಿಯೊಡನೆ ಅವರು ಹೊಂದಿರುವ ಗಾಢವಾದ ಸಂಬಂಧ. ಎರಡನೆಯದು ಚಿತ್ತಾಲರ ಬೌದ್ಧಿಕ ವಿಕಾಸಕ್ರಮ. ಇದರ ಬಗ್ಗೆ ಅವರೇ ಬರೆದಿದ್ದಾರೆ. ಒಟ್ಟಿನಲ್ಲಿ ಅವರಿಗೆ ಸ್ವಂತದ ಭಾವಪ್ರಪಂಚವಿದ್ದಂತೆ ವೈಚಾರಿಕ ಪ್ರಪಂಚವೂ ಇದೆ. ಆದರೆ ಅವರ ಬೌದ್ಧಿಕ ಅಥವಾ ತಾತ್ತ್ವಿಕ ಕಾಳಜಿಗಳು ಕತೆಯ ಚೌಕಟ್ಟನ್ನು ಬಿಟ್ಟು ಎಂದೂ ಹೊರಚೆಲ್ಲುವುದಿಲ್ಲ. ಇದು ಅವರ ಸಾಹಿತ್ಯದ ವೈಶಿಷ್ಟ್ಯಗಳಲ್ಲೊಂದು. ಈ ಮೇಲಿನ ಎರಡು ಅಂಶಗಳು ಎಷ್ಟು ಮಹತ್ವವಾದ ಪಾತ್ರ ವಹಿಸಿವೆ, ಎಂಬುದನ್ನು ಚಿತ್ತಾಲರ ಮಾತುಗಳು ಸ್ಪಷ್ಟಪಡಿಸುತ್ತವೆ. "ನನ್ನ ಭಾವಪ್ರಪಂಚದಲ್ಲಿ, ನನ್ನ ಆಂತರಿಕ ವಿಕಾಸದಲ್ಲಿ ಹನೇಹಳ್ಳಿ ಒಂದು ಮಹತ್ವದ ಪಾತ್ರವಹಿಸಿದೆ ಎಂದು ನನಗನ್ನಿಸುತ್ತದೆ. ಬದುಕಿನ ಬಗ್ಗೆ ನನಗೆ ಇಂದಿಗಿರುವ ಭಾವಭಾವನೆಗಳು, ಸಂವೇದನೆಗಳು ಇವೆಲ್ಲವುಗಳ ರೂಪ ನಿಶ್ಚಿತವಾದದ್ದೇ ಈ ನನ್ನ ಬಾಲ್ಯದ ತೊಟ್ಟಿಲಲ್ಲಿ ಎಂತಲೇ ಮುಂಬಯಿಯಲ್ಲೇ ಕುಳಿತು ಇಂದು ಹಳ್ಳಿಬಿಟ್ಟು ಇಪ್ಪತ್ತೈದು ವರ್ಷಗಳಾದ ಮೇಲೂ ಬರೆದ ನನ್ನೆಲ್ಲ ಕತೆಗಳಲ್ಲಿ ಕಾದಂಬರಿಯಲ್ಲಿ ಕೂಡ ಹನೇಹಳ್ಳಿ ತಿರುತಿರುಗಿ ಪ್ರಕಟವಾಗುತ್ತದೆ, ನನ್ನ ಭಾವವಿಶ್ವದ ಮೂರ್ತರೂಪವಾಗಿ." "ಬರೆದ ನಂತರ-ಬರೆಯುವ ಅನುಭವ, ಸೃಷ್ಟಿಸುವ ಅನುಭವ ನನ್ನ ಬದುಕಿಗೆ ಅರ್ಥಪೂರ್ಣತೆಯನ್ನು ತಂದುಕೊಟ್ಟ ಅನುಭವಗಳಲ್ಲೇ ಅತ್ಯಂತ ಮಹತ್ವದೆಂದು ಅನ್ನಿಸಿದ್ದುಂಟು. ನನ್ನ ಹುಟ್ಟನ್ನು ಅಸ್ತಿತ್ವವನ್ನು ಅಲ್ಲಗಳೆಯುವಷ್ಟರ ಮಟ್ಟಿಗೆ ಅವುಗಳಿಗೆ ನಿರಾಸಕ್ತವಾದ ಈ ವಿಶಾಲ ವಿಶ್ವಕ್ರಮದಲ್ಲಿ ಅಮೂರ್ತವಾದ ಸಮಾಜದಲ್ಲಿ ನನ್ನ ವೈಯಕ್ತಿಕ ಇರವಿನ ಪ್ರಸ್ತುತತೆಯನ್ನು ಕಂಡುಕೊಳ್ಳುವ ಹಾಗೂ ಆ ಮೂಲಕ ನನ್ನ ಸಮಾಜವನ್ನು, ಈ ವಿಶ್ವವನ್ನು ನನಗೆ ಜೀವಂತವಾಗಿಸುವ ಅರ್ಥಪೂರ್ಣವಾಗಿಸುವ ಕ್ರಿಯೆಯಲ್ಲಿ ನನ್ನ ಸೃಷ್ಟಿಕಾರ್ಯ ಮಹತ್ವಪೂರ್ಣವಾದ ಭಾಗವಹಿಸಿದೆ."

ಚಿತ್ತಾಲರ ಕಥಾಸಾಹಿತ್ಯವನ್ನು ೧) ಹನೇಹಳ್ಳಿಯ ಪ್ರಾದೇಶಿಕ ಹಿನ್ನೆಲೆಯುಳ್ಳ ಸಾಂಪ್ರದಾಯಿಕ ಪ್ರಜ್ಞೆಯ ಆವಿಷ್ಕಾರಗಳಾದ ಕತೆಗಳು, ೨) ನಗರ ಜೀವನದ ಹಿನ್ನೆಲೆಯಲ್ಲಿ ಬರೆದ ನವ್ಯಪ್ರಜ್ಞೆಯ ಅಭಿವ್ಯಕ್ತಿಯನ್ನು ಸಾಧಿಸಲೆತ್ನಿಸುವ ಕತೆಗಳು, ೩) ವಿಶಿಷ್ಟ ಸಾಕಾರ ಅನುಭವದ ಮೇಲೆ ನಿಂತಿದ್ದು ಸಾರ್ವತ್ರಿ

ಕತೆಯತ್ತ ಮುಖ ತಿರುಗಿಸಿದ ಕತೆಗಳು ಎಂದು ಮೂರು ತೆರನಾಗಿ ಅಮೂರರು ವಿಂಗಡಿಸಿದ್ದಾರೆ. ಇವುಗಳಲ್ಲಿ ಬೊಮ್ಮಿಯ ಹುಲ್ಲುಹೊರೆ, ಕಳ್ಳಗಿರಿಯಣ್ಣ, ಮುದಿಹುಚ್ಚು, ಉತ್ತಮಿ ಗುಂಡಾಭಟ್ಟರಮಡಿ, ಆಬೋಲಿನ ಮುಂತಾದ ಕತೆಗಳು ಮೊದಲ ಗುಂಪಿಗೆ ಸೇರಿದವು. ಕಾರಣ, ಈ ಕತೆಗಳ ಸಾಮಾಜಿಕ ಆವರಣ ಸಾಂಪ್ರದಾಯಿಕವಾದದ್ದು. ಪ್ರಾದೇಶಿಕ ಜೀವನ ಚಿತ್ರಗಳು ಇವುಗಳ ಜೀವಾಳ. ಬಡವೇಶ್ಯೆಯಾದರೂ ಮಾತೃವಾತ್ಸಲ್ಯ ಮತ್ತು ತಾಯ್ತನದ ಪಾವಿತ್ರ್ಯವನ್ನು ಪಡೆದು, ಸಾಮಾಜಿಕ ಮೌಲ್ಯವನ್ನು ಒಪ್ಪಿಕೊಂಡ ಉತ್ತಮಿ, ಮಾತೃದೇವೋಭವವಾಗಿ ಸಾಮಾಜಿಕ ತಳಹದಿಯ ಭಕ್ತಿ, ಗೌರವ, ನಂಬಿಕೆ ಯಿಂದ ಹೃದಯ ಪರಿವರ್ತನೆ ಪಡೆದ ಕಳ್ಳಗಿರಿಯಣ್ಣ, ಮಡಿ-ಮಡಿಯೆಂದು ಅಡಿಗಡಿಗ್ಹಾರುವ ಗುಂಡಾಭಟ್ಟರು ಇವರೆಲ್ಲ ಸಾಂಪ್ರದಾಯಿಕ ಆವರಣದಲ್ಲಿ ಮೈದಳೆದುಬಂದ ಶಿಲ್ಪಗಳು.

ನಿರಪರಾಧಿ ಆಬೋಲಿನಳು ಸಮಾಜದ ನಿಂದೆಗೆ ಹೆದರಿ ಅಪ್ಪಿದ ದುರಂತ ವೈಯಕ್ತಿಕ ಸ್ವರೂಪದ್ದಾಗಿರದೆ; ಮನವೇಲನ ಮೋಸಗಾರಿಕೆ, ಅಂತೆ–ಕಂತೆಯ ಸುದಿ, ಸಮಾಜ ಕುರಿತ ಅಂತರಂಗದ ಭಯ, ಕಾಣದ ದೈವದ ಭೀತಿ ಮುಂತಾದ ಒಂದೊಂದು ಎಳೆಯೂ ಒಂದರೊಡನೊಂದು ಹಾಸುಹೊಕ್ಕಾಗಿ, ಸಾಂಪ್ರದಾಯಿಕ ಸಮಾಜಪ್ರಜ್ಞೆ ಕೇಂದ್ರವಾಗುಳ್ಳ ಸುಂದರ ಪ್ರಾದೇಶಿಕ ಚಿತ್ರಣದ ಅಪರೂಪದ ಕತೆಯಾಗಿ 'ಆಬೋಲಿನ' ಮೂಡಿಬಂದಿದೆ. ಒಕ್ಕಲು–ಒಡೆಯ ವರ್ಗವ್ಯವಸ್ಥೆಯ ಮಡಿವಂತಿಕೆ ಬೊಮ್ಮಿಯ ಹುಲ್ಲು ಹೊರೆಯಲ್ಲಿ ಮನೋಜ್ಞವಾಗಿ ದಾಖಲಾಗಿದೆ. ಒಟ್ಟಿನಲ್ಲಿ ಈ ಎಲ್ಲ ಕತೆಗಳೂ ಹನೇಹಳ್ಳಿಯ ನೆಲಕ್ಕೆ ಹತ್ತಿರದವುಗಳಾಗಿದ್ದು, ಲೇಖಕರ ಬಾಲ್ಯಜಗತ್ತಿಗೆ ಸಂಬಂಧಿಸಿದ ನೆನಪು, ಸಹಾನುಭೂತಿ ಎದ್ದು ಕಾಣುತ್ತಿವೆ. ಮಾನವೀಯ ದೃಷ್ಟಿಕೋನ, ಸಾಂಪ್ರದಾಯಿಕ ಮೌಲ್ಯಗಳ ಗೌರವ, ಹೋರಾಟದಲ್ಲಿ ಸೋತು ಕುಸಿಯುವ ಚಿತ್ರ ಇವೇ ಈ ಪ್ರಾರಂಭಿಕ ಕತೆಗಳ ಪ್ರಮುಖವಾದ ಅಂಶಗಳು. ಇಲ್ಲಿಯ ಹೆಚ್ಚಿನ ಕತೆಗಳು ಮಾಸ್ತಿಯವರ ಪರಂಪರೆಗೆ ಸೇರಿದ್ದು.

ಪೀಜಿ, ಸಂದರ್ಶನ, ಮುಕುಂದನ ದಾಕ್ಷಿಣ್ಯ, ಅಡ್ಡಬಿದ್ದಮರ, ಖಾಲಿಕೋಣೆ, ಅಪರಿಚಿತರು ಮುಂತಾದವು ಎರಡನೇ ಗುಂಪಿಗೆ ಸೇರಿದ ಕತೆಗಳು.

ವಸ್ತು, ತಂತ್ರ, ಅರ್ಥಪೂರ್ಣ ಮಾನಸಕ್ರಿಯೆ, ಕುಶಲಕಲೆಗಾರಿಕೆಯಿಂದಾಗಿ 'ಪೀಜಿ' ನವೀನ ಪ್ರಜ್ಞೆಯ ಮೊದಲ ಕತೆ. ಈ ಕತೆಯ ಕೇಂದ್ರಪ್ರಜ್ಞೆಯಾದ ಅನಂತನ ಕ್ರಿಯೆಗಳೆಲ್ಲ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದವಾದರೂ ಇದನ್ನು ಅಭಿ

ವ್ಯಕ್ತಿಸಿದ ಕುಶಲಕಲೆಗಾರಿಕೆ ತಲೆದೂಗಿಸುವಂಥದು. 'ಅಪರಿಚಿತರು' ಅವರೇ ಹೇಳುವಂತೆ "ಈ ಕತೆಗೆ ಬೀಜನೆಟ್ಟ ಪ್ರತಿಮೆ ಕಾರ್ಲ್ ಯೂಂಗ್‌ನನ್ನು ಓದುವಾಗ ಮೂಡಿದ್ದು.... ಅಪರಿಚಿತರು ಕತೆ ಬರೆಯುವ ಹೊತ್ತಿಗೆ ಅನೇಕ ಪಾಶ್ಚಾತ್ಯ ಕತೆಗಾರರ, ಕಾದಂಬರಿಕಾರರ ಕೃತಿಗಳ ಪರಿಚಯ ನನಗೆ ಆಗಲೇ ಆಗಿತ್ತು. ಅವರಲ್ಲಿ ಮೊಸಾಪಾ, ಚೆಕಾವ್, ಹೆಮ್ಮಿಂಗ್‌ವೇ, ಸ್ಟೀಫಾನ್ ರಿಫ್ಟಿಂಗ್, ಸ್ಟ್ಯಾಲನ್‌ಚೆಕ್, ದಾಸ್ತಾವಿಸ್ಕೀ ಇವರು ಮುಖ್ಯ." ಮುಂಬಯಿಯಂಥ ನಗರದಲ್ಲಿ 'ಅತಿಥಿದೇವೋಭವ'ರಾದ ನವದಂಪತಿ ರಾಮಕೃಷ್ಣ, ಜಾನಕಿಯವರು ಸಿಕ್ಕ ಮೂರುದಿನದ ರಜೆಯನ್ನು ಹೇಗೆ ಕಳೆಯಬೇಕೆನ್ನುವ ವಿಚಾರದಲ್ಲಿದ್ದಾಗ 'ಅಪರಿಚಿತರ' ಆಗಮನವಾಗಿ ಅವರ ಅಸ್ತಿತ್ವದ ಮೇಲೆ ಆಕ್ರಮಣ ನಡೆದು, ಆ ದಿನದ ಮಟ್ಟಿಗೆ ಹತ್ತಿಕ್ಕಲ್ಪಡುತ್ತಾರೆ. ಮನಶ್ಶಾಸ್ತ್ರದ ಪಾತಳಿಯ ಮೇಲೆ ಮೂಡಿಬಂದ ಈ ಕತೆ ವಾಸ್ತವದ ದಾಖಲೆಯಾಗಿ ಇಡಿಯಲ್ಲಿ ಸುಂದರವಾದ ರೂಪಕ ಪಡೆದು ಇಬ್ಬಗೆಯ ಬದುಕನ್ನು ಪರಿಚಯಿಸುತ್ತದೆ. ಸಾಂಕೇತಿಕತೆಯೇ ಜೀವಾಳವಾಗಿ ಬಂದಿರುವ 'ಖಾಲಿಕೋಣೆ' ಅಣ್ಣನ ಮೇಲಿನ ಅಪಾರ ಮಮತೆ, ಉದ್ಯೋಗದ ಅನಿವಾರ್ಯತೆಯಿಂದಾಗಿ ಸಂದರ್ಶನಕ್ಕೆ ಸಿದ್ಧನಾಗುವ ಮತ್ತು ತನ್ನತನ ಉಳಿಸಿಕೊಳ್ಳಬಯಸುವ ಮಾಧವನ ಮನಸ್ಸಿನ ಪ್ರವೃತ್ತಿ ಒಂದರೊಡನೊಂದು ಮಾರ್ಮಿಕವಾಗಿ ಹೆಣೆದು ತಂತ್ರ, ಸಾಂಕೇತಿಕತೆಯಿಂದ, ನವ್ಯಪ್ರಜ್ಞೆಯ ಸತ್ವ, ಸೊಬಗಿನಿಂದ ಕೂಡಿದ 'ಸಂದರ್ಶನ', ಮೃತ್ಯುಪ್ರಜ್ಞೆಯ ಆವಿಷ್ಕಾರವಾಗಿರುವ 'ಅಡ್ಡಬಿದ್ದಮರ' ಮುಂತಾದ ಕತೆಗಳಲ್ಲಿ ವಾಸ್ತವಿಕ ಘಟನೆ, ಹೇಳಿಕೆಗಳು ಕಲಾವಂತಿಕೆಯಿಂದ ಧ್ವನಿಪೂರ್ಣತೆ ಪಡೆದು, ಮನೋವೈಜ್ಞಾನಿಕ ಆಸೆಗಳಿಗೆ ಅನಿವಾರ್ಯ ಅಭಿವ್ಯಕ್ತಿ ದೊರಕಿದೆ.

'ಆಟ' ಮತ್ತು ಅದರ ಅನಂತರ ಬಂದ 'ಕತೆಯಾದಳು ಹುಡುಗಿ' ಯಲ್ಲಿಯ ಕತೆಗಳು ಮೂರನೆಯ ಗುಂಪಿಗೆ ಸೇರುವ ಕತೆಗಳು. ಈ ಬೆಳವಣಿಗೆಯನ್ನು ಎಂ. ಗೋಪಾಲಕೃಷ್ಣ ಅಡಿಗರು 'ಆಟ' ಸಂಕಲನದ ಮುನ್ನುಡಿಯಲ್ಲಿ "ಈ ಸಾಹಿತಿಯಲ್ಲಿ ಆಗಿರುವ ಬೆಳವಣಿಗೆ ವಿಸ್ಮಯಕರವಾದದ್ದು. ಅನುಭವಗಳ ಕ್ರೋಢೀಕರಣದಲ್ಲಿ, ಮಿತವ್ಯಯದಲ್ಲಿ, ಪ್ರತಿಮೆ ರೂಪಕಗಳ ರಚನೆಯಲ್ಲಿ, ಬಳಸುವಿಕೆಯಲ್ಲಿ, ಒಟ್ಟು ಕತೆಯ ಪೂರ್ವಚಿಂತನದಲ್ಲಿ, ಚಿತ್ರಣದಲ್ಲಿ, ಭಾವ ಭಾಷೆಗಳ ಮೇಲಿನ ಹಿಡಿತದಲ್ಲಿ, ಅವುಗಳ ವಿನ್ಯಾಸದಲ್ಲಿ ಉತ್ತಮ ವರ್ಗದ ಪ್ರತಿಭೆ ಇಲ್ಲಿ ಕಾರ್ಯಪ್ರವೃತ್ತವಾಗಿದೆ. ಕೃತಾರ್ಥವಾಗಿದೆ" ಎಂದಿದ್ದಾರೆ. ನರಸಿಂಹ ಹಾವು ಕಡಿದು ಸಾಯುವ ದುರಂತ ಘಟನೆಯೊಂದಿಗೆ ಕೊನೆ

ಯಾಗುವ 'ಆಟ' ಬೆಳಕು-ಕತ್ತಲಿನ ಆಟವಾಗಿ, ಮೃತ್ಯುಪ್ರಜ್ಞೆ ತನ್ನ ಎಲ್ಲ ಸಂಕೀರ್ಣತೆಯೊಂದಿಗೆ ಅಭಿವ್ಯಕ್ತಿ ಪಡೆದ ಮಹತ್ವಪೂರ್ಣ ಕತೆಯಾಗಿದೆ. 'ಸೆರೆ' ಯ 'ಸಣ್ಣ ಒಡದೀರು' ಮತ್ತು 'ದೇವಿ' ಬದ್ಧರಾದರೂ ತಮ್ಮಿಂದ ಅತೀತ ವಾದ ಇಚ್ಛಾಶಕ್ತಿಗೆ ಮತ್ತು ಪ್ರಕೃತಿಗೆ ಸಂಕೇತವಾಗಿ ನಿಲ್ಲುತ್ತಾರೆ. ಇಲ್ಲಿಯ ವಸ್ತು ಕಾಮಕ್ಕೆ ಸಂಬಂಧಿಸಿದ್ದು ಬದುಕು ಸಾವಿನ ಸೆಣಸಾಟ ಮುಖ್ಯವಾಗಿ ತನ್ನನ್ನೇ ಸೆರೆಯಲ್ಲಿ ಇಟ್ಟುಕೊಂಡ ಪುರುಷನಿಗೆ ಪ್ರಕೃತಿಯಿಂದ ಬಿಡುತಿ ಸಿಗುತ್ತದೆ. 'ಹಾವು' ಕತೆಯಲ್ಲಿ ಕಾಮವೇ ಕೇಂದ್ರವಾಗಿ ಬದುಕಿನ ಸೋಲಿನ ಧೋರಣೆ ಧ್ವನಿತವಾದರೆ 'ಅದೃಷ್ಟ' ಮತ್ತು 'ಪಯಣ' ದಲ್ಲಿ ಮನುಷ್ಯ ಮತ್ತು ಸಾವಿನ ಸಂಬಂಧದ ನಿಗೂಢ ತತ್ತ್ವದ ನಿರೂಪಣೆ ಚಿಂತನೆಗೆ ಹಚ್ಚುತ್ತದೆ.

'ಆಟ' ಸಂಕಲನ ಪ್ರಕಟವಾದ ಹನ್ನೊಂದು ವರ್ಷಗಳ ಅನಂತರ ಹೊರ ಬಂದ 'ಕತೆಯಾದಳು ಹುಡುಗಿ' ಕಥಾಸಂಕಲನದಲ್ಲಿ ಚಿತ್ತಾಲರ ಬರವಣಿಗೆ ಯಲ್ಲಿಯ ವಿವಿಧ ಮಜಲುಗಳ ಮಹತ್ತರ ಬೆಳವಣಿಗೆಯನ್ನು ಎತ್ತಿತೋರಿಸುವ ಎಂಟು ಕತೆಗಳಿವೆ. ಇದಕ್ಕೆ ಎಸ್. ದಿವಾಕರ್ ಅವರ ವಿದ್ವತ್ಪೂರ್ಣ ಮುನ್ನುಡಿ ಇದೆ. ಇಲ್ಲಿಯ ಕತೆಗಳು ಭಾರತೀಯ ಸುಸಂಸ್ಕೃತ ಮನಸ್ಸು, ಪಾಶ್ಚಾತ್ಯ ತತ್ತ್ವವೇತ್ತರ ವಿಚಾರಗಳಿಂದ ಪ್ರಭಾವಿತವಾಗಿ ವಾಗಿ, ವೈಚಾರಿಕ ನೆಲೆಯ ಮೇಲೆ ನಿಂತು, ಸೂಕ್ಷ್ಮ ಸಂವೇದನೆಯ ಕ್ರಿಯಾಶೀಲ ಮಿಡಿತಕ್ಕೆ ಸಾಕ್ಷಿಯಾಗಿ ವೈಯಕ್ತಿಕ ದಾಖಲೆ, ಕಲಾತ್ಮಕ ಹಚ್ಚಡ ಹೊದೆದು ಸಾರ್ವತ್ರೀಕೃತವಾದವು.

ಈ ಸಂಕಲನದ ಮೊದಲ ಕತೆ 'ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ'. ನಾಗರೀಕತೆಯ ನಾಗಾಲೋಟದಲ್ಲಿಯ ನಗರಜೀವನದ ವರ್ತಮಾನ ಸಮಸ್ಯೆಯೊಂದನ್ನು ಕ್ರಾಂತಿಯ ಕತೆಯಾಗಿ ನೇಯ್ದು, ನಾಯಕ ಪ್ರೇಮು ವನ್ನು ವರ್ತಮಾನದ ಪ್ರತಿಮೆಯಾಗಿ ನಿಲ್ಲಿಸಿ, ದಲಿತ ಜಾಗೃತಿ ಸವಾಲಾಗಿ ಎದ್ದುನಿಲ್ಲುವಂತೆ ಮಾಡಿದ್ದಾರೆ. ಇಲ್ಲಿಯ ಬಂಡಾಯಗಾರ. ಹೆಸರೇ ಸೂಚಿಸು ವಂತೆ ಕತೆಯೊಂದರ ಹುಟ್ಟಿಗೆ ಕಾರಣನಾಗಿ, ಕತೆಯಿಂದ ಎದ್ದು, ಮನೆಗೆ ಬಂದು, ಮತ್ತೆ ಕತೆಯಾಗಿ ಬಿಡುವ ಈತ ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ಸಾಮೂಹಿಕ ಪ್ರತಿಕ್ರಿಯೆಯೂ ಆಗಿ ನಿಲ್ಲುತ್ತಾನೆ. ಉತ್ತಮವಾದ ಕಥಾತಂತ್ರ, ನಿರೂಪಣೆ ಆಶಯಗಳೊಂದಿಗೆ ಯಾರೊಬ್ಬರ ಬದುಕಿನಲ್ಲಿ ಬರುವ, ನಡೆಯುವ, ಅನುಭವವೊಂದನ್ನು ಅನನ್ಯ ಸಾಧಾರಣ ಕತೆಯಾಗಿಸಿದ್ದಾರೆ. ಭೋಪಡಾ ಪಟ್ಟಿಯಲ್ಲಿ ವಾಸಿಸುತ್ತಿದ್ದ ಜಾನಕಿ, ರಕ್ತದ ಕ್ಯಾನ್ಸರಿನಿಂದ ಹದಿಹರೆಯದಲ್ಲೇ ಬಾಳಿನ ಅಸ್ತಮಾನ ಅಪ್ಪುವ ಮುನ್ನ 'ನನ್ನನ್ನು ಕತೆಯಲ್ಲಿ ಹಾಕು' ಎಂಬ

ಕೋರಿಕೆಯನ್ನಿಡುತ್ತಾಳೆ. ಅದನ್ನು ನೆರವೇರಿಸಹೊರಟಿದ್ದೇ 'ಕತೆಯಾದಳು ಹುಡುಗಿ ಕತೆ'. ಅಮಾನುಷವಾದ ಜಾನಕಿಯ ಅತ್ಯಾಚಾರದ ದುರಂತದಿಂದ ಮೊದಲಾಗುವ ಈ ಕತೆ ಕತೆಗಾರ ಮತ್ತು ಆತನ ಹೆಂಡತಿ ಅನಾಥಾಶ್ರಮಕ್ಕೆ ಹೋಗಿ ಒಂದು ಹೆಣ್ಣು ಮಗು ತಂದು 'ಜಾನಕಿ' ಎಂದು ಹೆಸರಿಡುವಲ್ಲಿಗೆ ಮುಕ್ತಾಯವಾಗುತ್ತದೆ. ಘಟನೆಗಳ ಚತುರ ಸಂಯೋಜನೆಯೊಂದಿಗೆ ನೋವಿನ ನೆಲೆ ಅರಸುವ, ಸಂವೇದನಾಶೀಲ ಲೇಖಕನ ತೊಳಲಾಟದ ನವುರಾದ ಚಿತ್ರಣ ಈ ಕತೆಯಲ್ಲಿದೆ. ತ್ರಯೋದಶವನ್ನು ಸಾಂಕೇತಿಕವಾಗಿ ಬಳಸಿಕೊಂಡ ಖೇಮ ರಾಜ ಭವನದಲ್ಲಿ ಮಾಣಿಯಾಗಿರುವ ಬ್ರಾಹ್ಮಣ ಹುಡುಗ ನಿರಪರಾಧಿ ಗಣೇಶನ ದುರಂತಕತೆ, 'ತ್ರಯೋದಶ ಪುರಾಣ'. ತನಗೇ ಗೊತ್ತಿಲ್ಲದೆ ನಿರ್ಧಾರವಾದ ಹುಟ್ಟಿಗೂ, ಅದರ ಹಿಂದಿನ ಪುರಾಣಕ್ಕೂ ತಾನು ಬಾಧ್ಯನಲ್ಲದಿದ್ದರೂ ಶಾಮೀ ಲಾಗಿಸಿದ ಗಣೇಶನ ದುರಂತ, ವ್ಯವಸ್ಥೆಯ ಕಪಿಮುಷ್ಟಿ, ಕ್ರೌರ್ಯದ ಆಟ, ತುಳಿತ,ರಾವಣತ್ವದ ಸಾಕ್ಷಾತ್ಕಾರ ಅರ್ಥವತ್ತಾಗಿ ಸಶಕ್ತವಾಗಿ ಮೂಡಿ ಬಂದಿದೆ.

ಉದ್ಧಾರ, ಚಕ್ರವ್ಯೂಹ ಮತ್ತು ಅಶ್ವತ್ಥಾಮ ಕತೆಗಳು, ಪುರಾಣ ಪರಿಕಲ್ಪನೆ, ಪ್ರತಿಮೆಗಳ ಮೂಲಕ ಬದುಕಿನ ನಿಗೂಢಗಳನ್ನು ಅನುಭವದ ಸೊಡರಿನಲ್ಲಿ ಹುಡುಕುವ ಪ್ರಯತ್ನಗಳಾಗಿವೆ. ಮದುವೆಯಾದ ದಿನವೇ ಗಂಡ ಓಡಿ ಹೋದ ಮೊದಲ ದುರಂತದೊಂದಿಗೆ, ಆತ ಬಾವಾಜಿಯಾಗಿ ಅಲೆಯುತ್ತಿದ್ದಾನೆಂಬ ವದಂತಿ ನಂಬಿ ಬದುಕುತ್ತಿರುವ ಅಹಲ್ಯೆಯ ಬದುಕಿನಲ್ಲಿ ಎರಡನೇ ದುರಂತ, ಕೀರ್ತನಕಾರನೊಬ್ಬ ಸಂಧಿಸಿ ಮರುದಿನ ಓಡಿಹೋಗುವುದಾಗುತ್ತದೆ. ಈ ಎರಡೂ ದುರಂತದ ಹಿಂದೆ ಸಂಕೇತವಾಗಿ ಬಂದ ಮಳೆ, ಕಪ್ಪು ನಾಯಿ, ರಾತ್ರಿಗಳು, ದುರದೃಷ್ಟಕ್ಕೆ ಮುನ್ಸೂಚನೆಯಾಗಿ ಬಂದು ಭೂತದಂವ ಭೀತಳಾದ ಅಹಲ್ಯೆ ಮತ್ತೆ ಕಪ್ಪುನಾಯಿ ಕೆದರುವ ಸದ್ದಿನಿಂದ ಆತ್ಮಹತ್ಯೆಮಾಡಿಕೊಳ್ಳುವ ಕತೆ ನಾಲ್ಕು ಮಕ್ಕಳ ತಂದೆಯಾದ ನಾಯರ್ ಹರೆಯದ ಲೂಯಿಸಾಳೊಡನೆ ಬೆಳೆಸುವ ಸಂಬಂಧವೇ 'ಚಕ್ರವ್ಯೂಹ.' ಈ ಕತೆಯ ಹಿನ್ನೆಲೆಯಾಗಿ ಬಂದ ನ್ಯೂಯಾರ್ಕ್ ನಗರ, ಇಂದು-ಅಂದಿನೊಡನೆ ಕಟ್ಟುವ ನೋವಿನ ಸೇತುವೆ, ಲೈಂಗಿಕ ಸಂಬಂಧ, ಲೂಯಿಸಾಳ ಆಗಮನ,ಎಲ್ಲವೂ ಚಕ್ರವ್ಯೂಹವಾಗುತ್ತದೆ.ನೋವಿನ ಒಳಹೋಗು ವುದನ್ನು ಮಾತ್ರ ಅರಿತ ನಾಯರ್ ಮಹಾಭಾರತದ ಅಭಿಮನ್ಯುವಿನಂತಾಗು ತ್ತಾನೆ. ಸಾಮಾಜಿಕ ಚೌಕಟ್ಟಿನಲ್ಲಿ ಪೌರಾಣಿಕ ಪ್ರತಿಮೆ, ಪ್ರತೀಕಗಳು ಸಮಕಾಲೀನ ಸಂವೇದನೆಯೊಂದಿಗೆ ಅಭಿವ್ಯಕ್ತಿ ಪಡೆದ ಬಗೆ ಅನನ್ಯವಾಗಿದೆ.

ಕಥಾವಸ್ತು, ತಂತ್ರ, ನಿರೂಪಣೆಯಲ್ಲಿ ಗಮನಾರ್ಹ ತಿರುವು ಪಡೆದ ಕತೆ

ಮುಖಾಮುಖಿ.' ಕತೆಗಾರನಿಗೆ ಬಾಲ್ಯದಲ್ಲಿ ತುಂಬಾ ಪ್ರಭಾವ ಬೀರಿದ್ದ ಇಂದಿರಕ್ಕನನ್ನು ತನಗೆ ಗೊತ್ತಿಲ್ಲದೇ ಎಸಗಬಹುದಾಗಿದ್ದ ಪಾಪದಿಂದ ತಪ್ಪಿಸಿದೆ ನೆಂದಿದ್ದ. ಆದರೆ ಮುಂದೆ ಇಂದಿರಕ್ಕ ವಿಧವೆಯಾದಾಗ, ಮರಣಾಸನ್ನಳಾದಾಗ, ಅವನಿಗರಿವಿಲ್ಲದಂತೆ ಸುಡುವ ಪಾಪಪ್ರಜ್ಞೆ—ಇಂದಿರಕ್ಕನ ಇತಿಹಾಸವನ್ನೇ ಬದಲಿಸಬಹುದಾದ ಬೇಟೆ ಹರಿದದ್ದರಿಂದ ಬಂದ ಕೊರಗು—ಮುಖಾಮುಖಿ ಯಲ್ಲಿ ನಿರಾಧಾರವಾಗಿ ಅದಕ್ಕೆ ಅನಿವಾರ್ಯ ಅಭಿವ್ಯಕ್ತಿ ನೀಡಬೇಕಾಗಿ ಬಂದಾಗ ಈ ಕತೆ ಮೂಡಿ ಬರುತ್ತದೆ. ಇಂದಿರಕ್ಕನ ಮುಖಾಮುಖಿಯಿಂದ ಕೇಂದ್ರ ವ್ಯಕ್ತಿಯಾದ ಕತೆಗಾರ ಕೊನೆಯಿಲ್ಲದ ಯಾತನೆಯಿಂದ ತೊಳಲುವವ ನಾಗುತ್ತಾನೆ. 'ನೋಡಿ ನನ್ನ ಕೀಲಿಕೈ ಕಳೆದಿವೆ. ಈ ಬೀಗ ತೆರೆಯಲಾಗದಲ್ಲ' ಎಂಬ ಇದ್ದೂ ಸತ್ತಂತಿರುವ ಕೇಶವನ ಅಳಲು ಸಾಂಕೇತಿಕ ಜಗತ್ತನ್ನು ಸೃಷ್ಟಿಸಿ, ಅವನ ಆತ್ಮವಿಶ್ವಾಸದ ಪ್ರತೀಕವಾದ 'ಬೀಗದ ಕೈ' ಕಳೆದುಹೋದಾಗ ಸಾವು ಬರಿ ಬೀಸುವ ಘಟನೆ, ವರ್ಣನೆ, ಪಾತ್ರ ಚಿತ್ರಣ, ಒಟ್ಟಿಗೆ ಸೇರಿ ರೂಪಕ ವಾಗಿ 'ಬೀಗ ಮತ್ತು ಬೀಗಕೈ' ಕತೆಯಾಗಿ ಬಂದಿದೆ.

ಒಟ್ಟಿನಲ್ಲಿ ವೈಯಕ್ತಿಕ ಬದುಕಿನ ಘಟನೆಗಳನ್ನು ಸಮಾಜೀಕರಣಗೊಳಿಸುವ ರೀತಿ, ಘಟನೆಗಳ ಚತುರ ಸಂಯೋಜನೆ, ಸಮಸ್ಯೆಗಳು ಸಹಜವಾಗಿ ಮೂಡಿ, ಸಹಜವಾಗಿಯೇ ಎದುರಿಸಲ್ಪಟ್ಟು, ಬದುಕಿಗೊಂದು ಅರ್ಥವಿಟ್ಟು ನಿಲ್ಲುವ ಪರಿ, ಬದುಕಿನ ನಿಗೂಢ ಸತ್ಯಗಳನ್ನು ಅರಸುವ, ಹೊಳೆಯಿಸುವ ಬಗೆ, ಸೂಕ್ಷ್ಮ ಸಂವೇದನಾದೃಷ್ಟಿ, ಪಾತ್ರಗಳ ಒಳ ವಿವರಗಳನ್ನು ಕಡೆಯುವ ನಿರೂಪಣಾಶೈಲಿ. ಸೃಜನಶೀಲತೆಯ ಹಿಂದಿರುವ ಮನೋವಿಜ್ಞಾನದ ಪ್ರಮೇಯ ಮತ್ತು ಪ್ರಮಾಣದ ಪರಿಕಲ್ಪನೆಗಳು ಇವೆಲ್ಲ ಅವರ ಕತೆಯ ಪೂರಣಗಳು. ಆತ್ಮೀಯತೆ. ಸಹಜತೆ, ಉತ್ತರಕನ್ನಡದ ಆಡುಮಾತಿನ ಸೊಗಡು, ಸೃಜನಶೀಲತೆಯಿಂದ ಅವನ್ನು ಕಲಾತ್ಮಕ ಹೊದಿಕೆಯಲ್ಲಿಡುವುದೇ ಚಿತ್ತಾಲರತ್ವ. ಆ ಮುದ್ರೆಯೊತ್ತಿ ಹೊರ ಬಂದ ಅವರ ಕತೆಗಳು ಕನ್ನಡ ಸಣ್ಣ ಕತೆಗಳ ಇತಿಹಾಸಕ್ಕೆ ಹೊಸ ಆಯಾಮನನ್ನಿತ್ತಿವೆ.

ಕಾದಂಬರಿಕಾರರಾಗಿ ಚಿತ್ತಾಲರು ಮೂರುದಾರಿಗಳು (೧೯೬೪) ಮತ್ತು ಶಿಕಾರಿ (೧೯೭೯) ಎಂಬ ಎರಡು ಗಮನಾರ್ಹ ಕೃತಿಗಳನ್ನು ನೀಡಿದ್ದಾರೆ. ಅದರಲ್ಲಿ 'ಶಿಕಾರಿ' ಕಾದಂಬರಿಗೆ ೧೯೭೯ರ ಶ್ರೇಷ್ಠ ಸೃಜನಶೀಲ ಸಾಹಿತ್ಯ ಕೃತಿಯೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿಶೇಷ ಪುರಸ್ಕಾರ ವನ್ನಿತ್ತು ಗೌರವಿಸಿದೆ.

ರಾಮಕೃಷ್ಣ ಜೋಶಿ

ಅಮೆರಿಕದ ನಗರಗಳ ವೈಭವ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಟ್ರಾಯ್: ಈ ಮಧ್ಯೆ ಒಂದು ವಾರ ನಮ್ಮ ಹಿರಿಯ ಮಗ ದಿವಾಕರನು ಬಿಂಘಾಮ್ಟನ್ನಿಗೆ ಸಂಸಾರ ಸಮೇತ ಬಂದು ನಮ್ಮನ್ನು ಟ್ರಾಯ್ ನಗರಕ್ಕೆ ಅವನ ಕಾರಲ್ಲಿ ಕರೆದುಕೊಂಡು ಹೋದನು. ಟ್ರಾಯಿಯಲ್ಲಿರುವ ಆರ್. ಪಿ. ಇನ್ಸ್ಟಿಟ್ಯೂಟ್ ಎಂಬ ಉಚ್ಚ ಶಿಕ್ಷಣ ಸಂಸ್ಥೆಯಲ್ಲಿ ಅವನಿದ್ದಾನೆ. ಆತ ಕಂಪ್ಯೂಟರ್ ಸೈನ್ಸ್‌ನಲ್ಲಿ ಯಂ. ಎಸ್. ಪದವಿಗಾಗಿ ಅಭ್ಯಾಸ ಮಾಡುತ್ತಿದ್ದಾನೆ. ಆ ತರಬೇತಿ ಅಂತಿಮಘಟ್ಟಕ್ಕೆ ಬಂದಿದ್ದು ಇನ್ನು ಒಂದೆರಡು ತಿಂಗಳಲ್ಲಿ ಆತನ ಆ ಡಿಗ್ರಿ ಪರೀಕ್ಷೆ ಮುಗಿಯಲಿದೆ. ಇಷ್ಟರಲ್ಲಿಯೇ ಆತನಿಗೆ, ಅಮೆರಿಕಾದ ಬೇರೆಬೇರೆ ಕಂಪೆನಿಗಳಿಂದ ಉದ್ಯೋಗಕ್ಕಾಗಿ 'ಇಂಟರ್‌ವ್ಯೂ' ಪತ್ರ ಬರುತ್ತಿದೆ. ಅದರ ಉಪಯೋಗ ಪಡೆದುಕೊಂಡು ಅಮೆರಿಕಾದಲ್ಲೇ ಉದ್ಯೋಗಸ್ಥನಾಗಿರಲು ಬಯಸುತ್ತಿದ್ದಾನೆ. ಆತನಿಗೆ ರಾಂಚಿಯ C.M. P.D.I.ಯಲ್ಲಿ ಉಚ್ಚಮಟ್ಟದ ಉದ್ಯೋಗವಿದ್ದರೂ ಭಾರತಕ್ಕೆ ಹಿಂದೆ ಬರಲು ಇಷ್ಟವಿಲ್ಲ. ಇಲ್ಲಿಯ ಉದ್ಯೋಗದಲ್ಲಿ ಸಂತೃಪ್ತಿಯಿಲ್ಲ; ಪ್ರತಿಭೆಗೆ ನಮ್ಮ ದೇಶದಲ್ಲಿ ಬೆಲೆ ಇಲ್ಲ–ಎಂದು ಮೊದಲಾದುವು ಆತ ಹೇಳುವ ಕಾರಣಗಳು. ಅಮೆರಿಕಾದಲ್ಲಿರುವ ನಮ್ಮವರೆಲ್ಲ ಈ ಮಾತನ್ನೇ ಹೇಳುತ್ತಿದ್ದಾರೆ.

ಅಂತು ನಾವು ಹೋಗುವಾಗ ಸುಮಾರು ೧೩೦ ಮೈಲಿನುದ್ದಕ್ಕೂ ರಸ್ತೆಯ ಇಕ್ಕೆಲದಲ್ಲಿರುವ–ಹಸಿರು ತುಂಬಿದ ಮರಗಿಡ ಬಳ್ಳಿಗಳ, ಕಂಗೊಳಿಸುವ ಕಾಡು ಮೇಡುಗಳ ನಿಸರ್ಗ ಸೌಂದರ್ಯ ನೋಡುತ್ತ ಹೋದೆವು. ಎರಡುವರೆ ಗಂಟೆಯ ಪ್ರಯಾಣದ ನಂತರ ಟ್ರಾಯ್ ಸೇರಿ ಅಲ್ಲಿರುವ ವಿಶಾಲ ಸುಂದರ ವಿದ್ಯಾ ಸಂಸ್ಥೆಯ ವಾತಾವರಣ ನೋಡಿ ಬೆರಗಾದೆವು. ಉಚ್ಚಶಿಕ್ಷಣಕ್ಕಾಗಿ ದೇಶ ವಿದೇಶಗಳಿಂದ ಬಂದು, ಸಂಸಾರ ಸಹಿತ ಇರುವ ವಿದ್ಯಾರ್ಥಿಗಳಿಗಾಗಿ ಸುಸಜ್ಜಿತವಾದ ಮನೆಗಳನ್ನು ಒದಗಿಸಿದ್ದಾರೆ. ಅವಕ್ಕೆ ಬಾಡಿಗೆ ಸಹ ತುಂಬಾ ಕಡಿಮೆಯಂತೆ. ಅಂತಹ ಮನೆಗಳ ಸಾಲು ಸಾಲುಗಳೇ ಇದ್ದು ಓದಲನುಕೂಲವಾದ ಶಾಂತವಾತಾವರಣಇದೆ.ವಿದ್ಯಾಸಂಸ್ಥೆಯ ಒಳಗೆ ಸಹ ವಿಶಾಲ ಪುಸ್ತಕ ಭಂಡಾರ, ಪ್ರಯೋಗಾಲಯ, ಗ್ಯಾಲರೀಹಾಲ್‌ಗಳು, ಆಟದ ಮೈದಾನ, ಆಕರ್ಷಕ ಉಪವನಗಳು, ಬಹು ಅಂತಸ್ತಿನ ಕಟ್ಟಡಗಳು—ಇವೆಲ್ಲ ಬಹಳ ಮೇಲ್ಮಟ್ಟದವುಗಳಾಗಿವೆ. ರಾತ್ರಿಹಗಲೆನ್ನದೆ ಅಭ್ಯಾಸಗೈಯಲು ತಕ್ಕ ವಾತಾವರಣ

ಅಲ್ಲಿ ನಿರ್ಮಿತವಾಗಿದೆ. ಕಂಪ್ಯೂಟರ್ ವಿಜ್ಞಾನದಲ್ಲಿ ಬಹಳ ಮುಂದುವರಿದ, ಪ್ರಾಚೀನ ಸಂಸ್ಥೆ ಇದಾದ್ದರಿಂದ ಇಲ್ಲಿಯ ಪದವಿಗೆ ತುಂಬಾ ಗೌರವ ಇದೆಯಂತೆ. ಅದರಿಂದಾಗಿಯೇ ವಿದ್ಯಾರ್ಥಿಗಳ ಸಂಖ್ಯೆಯೂ ಸಾಕಷ್ಟಿದೆ. ಸುಮಾರು ನೂರು ಮಂದಿ ಭಾರತೀಯ ವಿದ್ಯಾರ್ಥಿಗಳೂ ಅಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದಾರೆ.

ಅಲ್ಲಿಂದ ಎಳೆಂಟು ಮೈಲು ದೂರದಲ್ಲಿ ಆಲ್ಬನಿ ನಗರ ಇದೆ. ಅದು ನ್ಯೂಯಾರ್ಕ್ ಸ್ಟೇಟಿನ ರಾಜಧಾನಿ. ನ್ಯೂಯಾರ್ಕ್ ಮಹಾನಗರವಾದರೂ ಆ ರಾಜ್ಯದ ರಾಜಧಾನಿ ೧೬೦ ಮೈಲು ದೂರದಲ್ಲಿರುವ ಆಲ್ಬನಿ. ಅಲ್ಲಿ ಸರ್ಕಾರೀ ಕಛೇರಿಗಳಿರುವ ಗಗನಚುಂಬೀ ಕಟ್ಟಡಗಳು ಬೆಳೆದುಬಂದಿವೆ. ಅಲ್ಲೇ ಅಮೆರಿಕಾದ ಸರ್ವತೋಮುಖ ಪ್ರಗತಿಯನ್ನು ತೋರಿಸುವ ವಸ್ತುಪ್ರದರ್ಶನಾಲಯವೂ ಇದೆ. ನಾನಾತರದ ಚಾರಿತ್ರಿಕ, ಸಾಂಸ್ಕೃತಿಕ ಪ್ರಗತಿಯನ್ನು ಪ್ರಕಟಿಸುವ ವಿಸ್ತಾರವಾದ ಆ ವಸ್ತುಪ್ರದರ್ಶನ ತುಂಬ ಬೋಧಪ್ರದವಾಗಿದೆ. ಒಳಹೊಕ್ಕ ಕೂಡಲೇ ೨೦ ನಿಮಿಷ ನಡೆಯುವ ಸಿನೆಮಾ ತೋರಿಸುತ್ತಾರೆ. ಜಗತ್ತಿನ ಆದಿಯಿಂದ ಹಿಡಿದು, ಇಂದಿನ ಮುಂದುವರಿದ ಅಮೆರಿಕಾವರೆಗಿನ ಬೆಳವಣಿಗೆಯ ಕಥೆಯನ್ನು ತೋರಿಸಿಕೊಡುತ್ತಾರೆ. ಆ ಕಾರಣ ಈ ವಸ್ತುಪ್ರದರ್ಶನವು ಸಂದರ್ಶಕರಿಂದ ಸದಾ ತುಂಬಿರುತ್ತದೆ.

ಇವನ್ನೆಲ್ಲ ಒಂದು ದಿನ ನೋಡಿ, ನಂತರ ಅಲ್ಲಿಯ ಸಿನೆಮಾಗೃಹ ನೋಡ ಹೋದೆವು. 'ಟೂಟ್ಸಿ'–ಎಂಬ ಸುಪ್ರಸಿದ್ಧ ಸಿನೆಮಾ ನಡೆಯುತ್ತಿದ್ದರೂ ಸಿನೆಮಾ ಗೃಹವಲ್ಲಿ ೩೦–೪೦ ಜನರಿಂದ ಹೆಚ್ಚು ಇರಲಿಲ್ಲ. ಮುಂದುವರಿದ ಅಮೆರಿಕಾದಲ್ಲಿ ಆಕರ್ಷಕ ಟಿ. ವಿ. ಕಾರ್ಯಕ್ರಮಗಳಿರುವುದರಿಂದಾಗಿ ದಿನದಿನಕ್ಕೆ ಸಿನೆಮಾದ ಜನಪ್ರಿಯತೆ ಕಡಿಮೆಯಾಗುತ್ತಿದೆಯಂತೆ. ಅಷ್ಟೇ ಅಲ್ಲದೆ, ಇತ್ತೀಚೆ, ವೀಡಿಯೋ ಕ್ಯಾಸೆಟ್‌ಗಳ ಮೂಲಕ ಮನೆಯ ಟಿ. ವಿ.ಯಲ್ಲೇ ನಮಗೆ ಬೇಕಾದ ಸಿನೆಮಾ ನೋಡಬಹುದು. ಹೀಗಿರುತ್ತ ದೂರದ ಸಿನೆಮಾ ಮಂದಿರಕ್ಕೆ ಹೋಗಿ, ಅಲ್ಲಿ ಕ್ಯೂ ನಿಂತು, ಹೆಚ್ಚು ಹಣತೆತ್ತು ಸಿನೆಮಾ ನೋಡುವ ತಲೆನೋವು ಏಕೆಂದು ಜನ ದೂರವಿರುತ್ತಾರೆ.

ಈ ಪರಿಸ್ಥಿತಿ ಭಾರತದಲ್ಲಿ ಸಹ ದೊಡ್ಡ ದೊಡ್ಡ ನಗರಗಳಲ್ಲಿ ಬರಲಾರಂಭಿಸಿದೆ. ಎಲ್ಲಿಡೆಗೆ ಹರಡಲು ಹೆಚ್ಚು ಸಮಯ ಬೇಕಾಗಲಾರದೆಂದೂ ತೋರುತ್ತದೆ.

ಟ್ರಾಯಿಂದ ಸಾಮಾನ್ಯ ೨೦–೨೫ ಮೈಲು ದೂರದ ವೆರ್ಮೊಂಟ್ ಎಂಬ ಇತಿಹಾಸ ಪ್ರಸಿದ್ಧ ಊರಿಗೆ ಒಂದು ದಿನ ಸಾಯಂಕಾಲ ಹೊರಟೆವು. ಅಲ್ಲಿಗೆ ಹೋಗುವ ದಾರಿ, ಹಳ್ಳಿಗಳ ಮಧ್ಯದ ೨–೩ ಲೇನ್‌ಗಳಿರುವ ದ್ವಿಮುಖವಾದ

ರಸ್ತೆ. ದಾರಿಯಲ್ಲಿ–ಹೊಲಗದ್ದೆಗಳು, ಟ್ರ್ಯಾಕ್ಟರುಗಳ ಮೂಲಕ ಅವನ್ನು ಉತ್ತುಬಿತ್ತುವ ರೈತರು, ಪಶುಪಾಲನೆಯಲ್ಲಿ ನಿರತರಾದ ಕಾರ್ಮಿಕರು, ಸಣ್ಣ ಸಣ್ಣ ಅಂಗಡಿ ಮನೆಗಳು—ಇವನ್ನೆಲ್ಲ ನೋಡಿಕೊಂಡು ಹೋದೆವು.

ವೆರ್ಮೆಂಟ್ ನಗರ ಸಮೀಪದ ಎತ್ತರ ಮೈದಾನದಲ್ಲಿ ಬಹುದೊಡ್ಡದಾದ ಯುದ್ಧಸ್ಮಾರಕ ಸ್ತೂಪ ಇದೆ. ಸಾಮಾನ್ಯ ೬೦೦ ಅಡಿ ಎತ್ತರದ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿ ಬೆಳೆಸಿದ ಆ ಸ್ತೂಪವು, ಅಮೆರಿಕಾದ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಯೋಧರ ನೆನಪಿಗಾಗಿ ನಿರ್ಮಿಸಿದ್ದಾಗಿದೆ. ೧೭೭೭ರಲ್ಲಿ, ಇಂಗ್ಲಿಷ್ ಸೇನೆಯನ್ನು ತಡೆಗಟ್ಟುವಲ್ಲಿ ಅಮೆರಿಕನ್ ಯೋಧರು ಇಲ್ಲಿ ಜಯಶೀಲರಾಗಿದ್ದರಂತೆ. ಆ ದೊಡ್ಡ ಹೋರಾಟದಲ್ಲಿ ಅನೇಕಾನೇಕ ವೀರಭಟರು ಪ್ರಾಣವನ್ನು ತೆತ್ತಿದ್ದರಂತೆ. ಅವರಿಗೆಲ್ಲ ಗೌರವ ಸೂಚಕವಾಗಿ ೧೮೮೭ರಲ್ಲಿ ಈ ಸ್ಮಾರಕವನ್ನು ಸುಂದರವಾಗಿ ಕಟ್ಟಿ ಮುಗಿಸಿದ್ದರಂತೆ. ಸುಂದರವಾದ ಆ ಸ್ತೂಪದ ಮೇಲೇರಿ ಹೋಗಿ ಸುತ್ತಣ ಭೂಮಂಡಲವನ್ನು ಕಂಡು ಆನಂದಿಸಲೂ ಅವಕಾಶವಿದೆ.

ಇವನ್ನೆಲ್ಲ ನೋಡಿಕೊಂಡು ರಾತ್ರಿ ಮನೆಸೇರಿದೆವು. ಮನೆ ಸೇರುವಾಗ ತಡವಾಗಿತ್ತು. ಹಾಗಾಗಿ ಅತ್ತೆ ಮತ್ತು ಸೊಸೆ ಸೇರಿ, ಎರಡು ವಿದ್ಯುದೊಲೆಗಳಲ್ಲಿ ಚಪಾತಿ ಮಾಡತೊಡಗಿದರು. ಅವರ ಕೆಲಸದ ವೇಗಕ್ಕನುಗುಣವಾಗಿ ಒಲೆಯಿಂದ ಹೊಗೆಯೂ ಎದ್ದು ಬರುತಿತ್ತು. ಸ್ವಲ್ಪ ಸಮಯದಲ್ಲಿ ಮನೆಯ ಗೋಡೆಯಲ್ಲಿರುವ ಎಚ್ಚರ ಘಂಟೆಯಿಂದ (Alram system) ಒಂದೇ ಸಮನೆ ಘಂಟಾನಾದ ಶುರುವಾಯಿತು. ೨-೩ ನಿಮಿಷಗಳಲ್ಲೇ ಸಂರಕ್ಷರ (Watch and ward) ವಾಹನ ಬಂತೇ ಬಂತು. ಸಂರಕ್ಷಕರು ಬಂದು ನೋಡಿ, ಇದು ಅಡಿಗೆ ಮನೆಯ ಹೊಗೆಯಲ್ಲದೆ ಬೆಂಕಿಯ ಅನಾಹುತವಲ್ಲವೆಂದು ನಿರ್ಧಾರ ಮಾಡಿಕೊಂಡರು. ಕಿಟಕಿ ಬಾಗಿಲುಗಳನ್ನೆಲ್ಲ ತೆರೆದು ಹೊಗೆ ಹೊರಹೋಗು ವಂತೆ ಮಾಡಿದರು. ನಂತರ ಕೈಯಲ್ಲಿರುವ ವಾಕೀ-ಟಾಕೀ (Walki-talki)ಯ ಮೂಲಕ ಕೇಂದ್ರ ಕಛೇರಿಗೆ ಬೆಂಕಿಯ ಅಪಘಾತವಿಲ್ಲವೆಂದು ತಿಳಿಸಿದರು. ಆಮೇಲೆ ಮನೆಯ ನಿರಂತರ ಘಂಟಾನಾದ ನಿಂತಿತು. ಅಮೇರಿಕಾ ನಗರಗಳ ಮನೆಗಳಲ್ಲೆಲ್ಲ ಸ್ವಯಂಚಾಲಿತ 'ಬೆಂಕಿಯ ಎಚ್ಚರಿಕೆ' ಕೊಡುವ ಘಂಟಾನಾದ ವ್ಯವಸ್ಥೆ ಇದೆಯಂತೆ. ಯಾವ ಮೂಲೆಯ ಮನೆಯಲ್ಲಿ ಬೆಂಕಿ ಉರಿದುಬಂದರೂ ಸರಿ. ಕೆಲವೇ ನಿಮಿಷಗಳಲ್ಲಿ ಅಗ್ನಿ ಶಾಮಕದಳ ಮನೆ ಮುಂದೆ ಬಂದು ನಿಲ್ಲುತ್ತದೆ.

ಅಲ್ಲಿಯ ಮನೆಗಳು ಹೆಚ್ಚಿನಂಶ ಒಳಭಾಗದಲ್ಲಿ ಮರದ ಹಲಗೆಗಳ ಗೋಡೆಗಳಿಂದ ಕೂಡಿವೆ. ಆದ್ದರಿಂದ ಬೆಂಕಿ ಆಕಸ್ಮಿಕದ ಅಪಾಯ ಹೆಚ್ಚು. ಅದಕ್ಕೊಪ್ಪುವ ಸುವ್ಯವಸ್ಥೆ ಇದ್ದುದರಿಂದ ಅಗ್ನಿಗಾಹುತಿಯಾಗುವ ಸಂಪತ್ತು ಕಡಿಮೆಯಾಗಿದೆ.

ಹೀಗೆ ನಾಲ್ಕೈದು ದಿನಗಳ ಕಿರುಪ್ರವಾಸ ಮುಗಿಸಿಕೊಂಡು ಬಿಂಘೂಂಟನ್ನಿಗೆ ಹಿಂದಿರುಗಿದೆವು. ಬರುವಾಗ ಬಸ್ ಪ್ರಯಾಣದ ಅನುಭವ ಪಡೆಯುವುದಕ್ಕಾಗಿ ಸಾರ್ವಜನಿಕ ಬಸ್ಸಿನ ಮೂಲಕ ಅಲ್ಬನಿಯಿಂದ ಹೊರಟೆವು. ಬೆಳಗ್ಗೆ ೯-೧೫ಕ್ಕೆ ನಿಶ್ಚಿತ ಘಂಟೆ, ನಿಶ್ಚಿತ ನಿಮಿಷದಲ್ಲಿ ಸುಸಜ್ಜಿತವಾದ, ಸುಂದರ ಸುಖಾಸನಗಳುಳ್ಳ ಬಸ್ಸು ಅಲ್ಬನಿಯಿಂದ ಹೊರಟಿತು. ವಿಮಾನ ನಿಲ್ದಾಣದಿಂದ ಪ್ರಯಾಣಿಕರು ಹೊರಡುವ ರೀತಿಯಲ್ಲೇ, ಬೇರೆ ಬೇರೆ ಕಾಯುವ ಕೋಣೆಗಳಿಂದ, ಬೇರೆ ಬೇರೆ ದ್ವಾರಗಳ ಮೂಲಕ ನಿಗದಿತ ಬಸ್ಸನ್ನೇರಿಸಿ ಪಯಣಿಗರನ್ನು ಕಳಿಸುತ್ತಾರೆ. ೧೬೦ ಮೈಲು ದೂರದ ದಾರಿಯನ್ನು ಮೂರೂವರೆ ಘಂಟೆಗಳಲ್ಲಿ ಸಾಗಿ ಮುಗಿಸುವ ಸುಖಮಯ ಸಂಚಾರದ ವ್ಯವಸ್ಥೆಗೈದಿದ್ದಾರೆ. ನಾಲ್ಕೈದು ಊರುಗಳಲ್ಲಿ ಐದು ನಿಮಿಷಗಳಂತೆ ನಿಲ್ಲಿಸಿ ಪಯಣಿಗರಿದ್ದರೆ ಅವರನ್ನೇರಿಸಿಕೊಂಡು ಬಸ್ಸು ಮುಂದೆ ಹೋಗುತ್ತದೆ. ಕಂಡಕ್ಟರ್ ಎಂಬವನಿಲ್ಲ. ಬಸ್ಸಿನ ಚಾಲಕನೇ ಎಲ್ಲ ವ್ಯವಸ್ಥೆ ನೋಡಿಕೊಳ್ಳುತ್ತಾನೆ. ೪೦ ಜನ ಕೂರಬಹುದಾದ ಬಸ್ಸಿನಲ್ಲಿ ೨೦-೨೫ಕ್ಕಿಂತ ಹೆಚ್ಚು ಜನರಿದ್ದಿಲ್ಲ. ಚಾಲಕನು ಅವನ ಸಮೀಪವೇ ಇರುವ ಗುಂಡಿಯನ್ನೊತ್ತಿ, ಮುಂಭಾಗದಲ್ಲೇ ಇರುವ ಬಾಗಿಲನ್ನು ಬೇಕಾದಾಗ ತೆರೆದು ಮುಚ್ಚುತ್ತಾನೆ. ಪ್ರಯಾಣದ ವಿವರಗಳನ್ನು ತನ್ನ ಮುಂದಿರುವ ಕಿರುಮೈಕಿನ ಮೂಲಕ ಎಲ್ಲ ಪಯಣಿಗರಿಗೂ ಕೇಳುವಂತೆ ಹೇಳುತ್ತಾನೆ. ಬಸ್ಸಿನೊಳಗೇ, ಹಿಂಭಾಗದಲ್ಲಿ ಶೌಚಗೃಹದ ವ್ಯವಸ್ಥೆಯೂ ಇದೆ. ಬಸ್ಸಿನ ಅಡಿಭಾಗದಲ್ಲಿ ಪಯಣಿಗರ ಸರಕುಸರಂಜಾಮುಗಳನ್ನಿಟ್ಟು ಭದ್ರಪಡಿಸುವ ಏರ್ಪಾಡೂ ಇದೆ. ಅಮೆರಿಕಾದ ಜನರೆಲ್ಲ ಕಾರು ಪ್ರಿಯರು ಅಥವಾ 'ಕಾರುಗಾರರು'. ಆದ ಕಾರಣ ಬಸ್ಸಿನಲ್ಲಿ ಪಯಣಗೈವವರ ಸಂಖ್ಯೆ ಕಡಿಮೆ. ವೃದ್ಧರಿಗೆ ಪ್ರಯಾಣ ದರದಲ್ಲಿ ಶೇಕಡಾ ೧೦% ರಿಯಾಯಿತಿ ಸಹ ಇದೆ. ಬಸ್ಸಿನ ಚಾಲಕನು ಸಹ ವಿಮಾನ ಚಾಲಕನಂತೆ ಉತ್ತಮ ಮಟ್ಟದ ವೇಷಟೋಪಿಗಳನ್ನು ಹಾಕಿಕೊಂಡು ಠೀವಿಯಿಂದ ತನ್ನ ಕೆಲಸ ನಡೆಸುತ್ತ ಹೋಗುತ್ತಾನೆ. ಬಸ್ಸು ಹೋಗುವುದಕ್ಕೂ 'ಹೈವೇ' ಬಿಟ್ಟು ಹೆಚ್ಚಿನೆಡೆ ರಸ್ತೆ ಬೇರೆಯೇ ಇದೆ. ಹಾಗಾಗಿ ಟ್ರಾಯಿಂದ ಬಿಂಘೂಂಟನ್‌ವರೆಗಿನ ಮೂರುವರೆ ಘಂಟೆಗಳ

ಪಯಣ ಅನಾಯಾಸವಾಗಿ ಅಥವಾ ಸುಖಮಯವಾಗಿ ಸಾಗಿಹೋಯಿತು.

ಆಗ,—ನಮ್ಮಲ್ಲಿಯ ಬಸ್ಸು ಸಂಚಾರ ವ್ಯವಸ್ಥೆಯನ್ನು, ಅದರಲ್ಲೂ ಮಲೆನಾಡಿನ ಪಯಣದ ಸಂಕಟಗಳನ್ನು ನೆನೆದುಕೊಂಡೆ. ಅಯ್ಯೋ! ನಾವೀ ಮಟ್ಟಕ್ಕೆ ಬರಬೇಕಾದರೆ ಇನ್ನೆಷ್ಟು ಶತಮಾನಗಳು ಉರುಳಬೇಕೋ—ಎಂದು ದುಃಖಮಯ ಯೋಚನೆಯೂ ಬಂತು.

ಕಾರ್ನಿಂಗ್ ಕಾರ್ಖಾನೆ: ಮತ್ತೊಂದು ವಾರ್‍ಯಾಂತ ಬಿಂಘೂಮ್ಟನ್ನಿಂದ ೬೦ ಮೈಲು ದೂರದ ಕಾರ್ನಿಂಗ್ ಗ್ಲಾಸ್ ಕಾರ್ಖಾನೆ ನೋಡಹೊರಟೆವು. ಅದೊಂದು ಜಗದ್ವಿಖ್ಯಾತ ಬಹುದೊಡ್ಡ ಗಾಜು ಹಾಗೂ ಪಿಂಗಾಣಿಯ ವಸ್ತುಗಳನ್ನು ತಯಾರಿಸುವ ಕಾರ್ಖಾನೆ. ಅದಕ್ಕೆ ಹೊಂದಿಕೊಂಡು ಒಂದು ವಿಶಾಲ ವಸ್ತು ಪ್ರದರ್ಶನವಿದೆ. ಅದು, ಆರಂಭದ ಸ್ಥೂಲರೂಪದ ಗಾಜಿನ ವಸ್ತುಗಳಿಂದ ಹಿಡಿದು, ಇಂದಿನ ಗುಂಡಿಗೂ ಒಡೆಯದ ಗಾಜಿನ ವಸ್ತುಗಳ (Bullet proof glass) ವರೆಗಿನ ಎಲ್ಲ ವಿಚಾರಗಳನ್ನು ವಿವರವಾಗಿ ತೋರಿಸುವ ಆಕರ್ಷಕ ವಸ್ತು ಪ್ರದರ್ಶನವಾಗಿದೆ. ವಾರಾಂತ್ಯದಲ್ಲಿ ಸಾವಿರಾರು ಜನರನ್ನು ಅದು ಆಕರ್ಷಿಸುತ್ತದೆ. ಬಿಕಾನೇರ ಮಹಾರಾಜರಿಗೆ ೧೯೩೪ರಲ್ಲಿ ನಡೆದ ವಿವಾಹ ಸಂದರ್ಭದಲ್ಲಿ ಉಡುಗೊರೆಯಾಗಿ ಕೊಟ್ಟ ಗಾಜಿನ ಸುಂದರ ದೋಣಿಯ ಪ್ರತಿಕೃತಿ ಸಹ ಆ ವಸ್ತುಪ್ರದರ್ಶನದಲ್ಲಿದೆ. ವಿವಿಧಾಕಾರದ ವಿವಿಧ ಗುಣಮಟ್ಟದ ಗಾಜಿನ ವಸ್ತುಗಳ ತಯಾರಿಯನ್ನು ನಾವು ಕಣ್ಣಾರೆ ಕಾಣಬಹುದಾಗಿದೆ. ಪಿಂಗಾಣಿಯ ವಿವಿಧ ಗುಣಮಟ್ಟದ ಸುಂದರ ಪಾತ್ರೆ ಪದಾರ್ಥಗಳ ತಯಾರಿಯೂ ಈ ಕಾರ್ಖಾನೆಯಲ್ಲಾಗುತ್ತಿದೆ. ಅವನ್ನೆಲ್ಲ ನೋಡಿದ ನಂತರ ಅವರದೇ ಶೋರೂಮಿ (Show) ನಲ್ಲಿ ರಿಯಾಯತಿ ದರದಲ್ಲಿ ಆ ವಸ್ತುಗಳ ಮಾರಾಟ ವ್ಯವಸ್ಥೆಯೂ ಇದೆ. ಹೀಗೆ ಆಕರ್ಷಕ ವಸ್ತುಪ್ರದರ್ಶನದ ಮೂಲಕ ಜನರನ್ನಾಕರ್ಷಿಸಿ, ಅವರಿಗೆ ಕಾರ್ಖಾನೆಯ ವೈಶಿಷ್ಟ್ಯಗಳನ್ನೆಲ್ಲ ತೋರಿಸಿ, ಕೊನೆಗೆ ಅವರ ಅಂಗಡಿಯಿಂದ ಧಾರಾಳವಾದ ವ್ಯಾಪಾರವೂ ನಡೆದುಹೋಗುವಂತೆ ವ್ಯವಸ್ಥೆ ಗೈದಿದ್ದಾರೆ. ನಗುಮುಖದ ಹೆಂಗಳೆಯರು ಅಲ್ಲಿಯ ಮಾರಾಟಗಾರ್ತಿಯರು.

ನಮ್ಮಲ್ಲಿಯ ಕಾರ್ಖಾನೆಗಳವರೂ ಹೀಗೇಕೆ ಮಾಡಬಾರದು—ಎಂದು ತೋರಿಬಂತು. ಅದರಲ್ಲಿಯೂ ಹೆಚ್ಚಿನಂಶ ನಷ್ಟದಲ್ಲೇ ನಡೆಯುತ್ತಿರುವ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು, ಈ ತರದಲ್ಲಿ ಜನರನ್ನಾಕರ್ಷಿಸಿ ವ್ಯಾಪಾರ, ವ್ಯವಹಾರ ವೃದ್ಧಿಪಡಿಸುವ ಕಾರ್ಯಕ್ರಮ ಏಕೆ ಕೈಗೊಳ್ಳಬಾರದು.?

ನಮ್ಮ ಕಾರ್ಖಾನೆಗಳವರು ಜನಸಾಮಾನ್ಯರಿಗೆ ಒಳಹೋಗಲು ಅನುಮತಿ ಕೊಡುವುದೇ ಅಪರೂಪ. ಅಥವಾ ಅವರದೇ ಮಾರಾಟ ಮಳಿಗೆ (Show-Room) ಇದ್ದರೂ ಅಲ್ಲಿರುವ ಹೆಚ್ಚಿನ ಜನ ಸದಾ ಹರಳೆಣ್ಣೆ ಮುಖಮಾಡಿ ಕೊಂಡಿರುತ್ತಾರೆ. ಇವನ್ನೆಲ್ಲ ನೆನೆಸಿಕೊಂಡಾಗ 'ಹಾ ರಾಮಾ!'–ಎಂದೆನಿಸು ವುದು ಸ್ವಾಭಾವಿಕವಲ್ಲವೇ?

ಹೀಗೆ ಅಮೇರಿಕಾದಲ್ಲಿ ನಾವಿದ್ದ ಏಳು ವಾರಗಳಲ್ಲಿ ಬೇರೆ ಬೇರೆಡೆ ಸುತ್ತಾಡಿ ನೋಡಿದೆವು. ನಮ್ಮ ಅನುಭವ ಭಂಡಾರವನ್ನು ತುಂಬಿಸಿಕೊಂಡು ಭಾರತಕ್ಕೆ ಹಿಂತಿರುಗಲು ಸಿದ್ಧರಾದೆವು. ಜೂನ್ ೨೨ರಂದು ನ್ಯೂಯಾರ್ಕಿನಿಂದ ಭಾರತಕ್ಕೆ ಹೊರಡಲೂ ಸಿದ್ಧತೆಗಳಾದುವು. ಆ ದಿನ ಬಹುಬೇಗನೆ ಬಂದೂ ಆಯಿತು.

ಅಂದು ಬೆಳಗ್ಗೆ ತಡೆಯಲಾಗದ ದುಃಖದಿಂದ ಮನೆಬಿಟ್ಟು ನ್ಯೂಯಾರ್ಕಿಗೆ ಹೊರಟೆವು. ಹೊರಡುವ ವೇಳೆ ನಮ್ಮ ಅಮೇರಿಕಾ ಪ್ರವಾಸದ ಸುಂದರ ಬಣ್ಣ ಚಿತ್ರಗಳನ್ನೊಳಗೊಂಡ 'ಫೋಟೋ ಅಲ್ಬಂ'ನ್ನು ಮಗ, ಸೊಸೆ ಭಕ್ತಿಯಿಂದ ನಮಗರ್ಪಿಸಿ ಕಾಲಿಗೆ ಬಿದ್ದಾಗ ಶೋಕದ ಕರೆ ತುಂಬಿ ಕೋಡಿಹರಿದಂತಾಯಿತು. ಮತ್ತೆ ಪುನಃ ಸಾಯಂಕಾಲ ನಾಲ್ಕು ಘಂಟೆಯ ವೇಳೆ ಕೆನಡಿ ವಿಮಾನ ನಿಲ್ದಾಣದಿಂದಗಲುವಾಗ ದುಃಖ ಇನ್ನಷ್ಟು ಉಕ್ಕಿ ಬಂತು. ನಮ್ಮ ಜೀವನದ ಅತಿದೊಡ್ಡ ಸಾಧನೆಯಾದ ಅಮೇರಿಕಾ ಪ್ರವಾಸಯೋಗ ಒದಗಿಸಿದ್ದಕ್ಕಾಗಿ ಮಗನಿಗೆ ಕಣ್ಣೀರ ಕೃತಜ್ಞತೆಯನ್ನು ಅರ್ಪಿಸಿದೆವು.

ಅಂತು ೪೫ ದಿನಗಳ ಅಮೇರಿಕಾ ಪ್ರವಾಸ ಮುಗಿಸಿ ಭಾರತೀಯ ವಿಮಾನ 'ಹರ್ಷವರ್ಧನ' ಮೂಲಕ ತುಂಬಿದ ಮನದಿಂದ ಸಾಯಂಕಾಲ ೫-೩೦ಕ್ಕೆ ಅಮೇರಿಕಾನೆಲದಿಂದ ಮೇಲೇರಿ ಹೊರಟೆವು. ಬರುವ ಮಾರ್ಗದಲ್ಲಿ ಲಂಡನ್ನಿನಲ್ಲಿ ಮಾತ್ರ ಒಂದುವರೆ ಘಂಟೆಗಳ ನಿಲುಗಡೆ, ಬಾಕಿ-ಉದ್ದಕ್ಕೂ ಪ್ರಯಾಣ. ಆ ಕಾರಣದಿಂದಾಗಿ ಪಯಣದ ಒಟ್ಟು ಸಮಯ ಎರಡು ಮೂರು ಘಂಟೆಗಳಷ್ಟು ಕುಗ್ಗಿತು. ೨೩ರಂದು ಬೆಳಗ್ಗೆ ೧-೩೦ಕ್ಕೆ ಮುಂಬಯಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಳಿದೆವು. ಆಗ ಮುಂಬಯಿಯ ಸುತ್ತಮುತ್ತ ಜಡಿಮಳೆ ಸುರಿಯುತಿತ್ತು. ಆದರಿಂದ ವಿಮಾನ ನೆಲಕ್ಕಿಳಿಯುವಾಗ ವಿಳಂಬ ಹಾಗೂ ಏರುಪೇರುಗಳ ಅನುಭವವೂ ಆಯಿತು.

ಆದರೆ ಆ ನಡುರಾತ್ರಿಯ ಕಡುಮಳೆಯಲ್ಲಿಯೂ ನಮ್ಮ ಶಿಷ್ಯ ಸುಕುಮಾರ ಹಾಗೂ ಆಪ್ತ ಬಂಧು ಶ್ರೀಯುತ ದಾಸ್-ನಮಗಾಗಿ ಕಾಯುತ್ತಿದ್ದರು. ಅವರ ಸಹಾಯದಿಂದ ಕಸ್ಟಮ್ಸ್ ಕ್ಲೀಯರೆನ್ಸ್ ನಡೆಸಿ. ಲಗ್ಗೇಜ್ ಪಡೆದೆವು.


ರಾತ್ರಿಯಲ್ಲಿ A.I.I. ವೆಚ್ಚದಲ್ಲಿ ಹೋಟೆಲ್ ಸೆಂಟೌರ್‌ನಲ್ಲಿ ವಿಶ್ರಮಿಸಲು ಅವಕಾಶ ದೊರಕಿತು. ಬೆಳಗ್ಗೆ ೩ ರಿಂದ ೭-೩೦ರವರೆಗೆ ವಿಶ್ರಾಂತಿ ಪಡೆದು ಹೊಸ ಜೀವ ಕಳೆಬಂತು. ಮಾತೃಭೂಮಿಗೆ ಬಂದು ಸೇರಿದ ಸಂತೃಪ್ತಿಯೂ ಮೂಡಿ ಬಂತು.

ಅಂದೇ ಸಾಯಂಕಾಲ ೪-೩೦ರ ವಿಮಾನದಲ್ಲಿ ಬೆಂಗಳೂರಿಗೆ ಹೊರಟೆವು. ಮುಂಬಯಿ-ಬೆಂಗಳೂರು ಪಯಣ ಕೇವಲ ಒಂದು ಘಂಟೆ ೧೦ ನಿಮಿಷಗಳದ್ದು. ಹಾಗಾಗಿ ಹೊರಟು ಬಂದುದೇ ತಿಳಿಯಲಿಲ್ಲ. ಅದಕ್ಕಿಂತ ಹೆಚ್ಚಿನ ಕಾಲ, ಎಷ್ಟೋ ವೇಳೆ—ಮೈಸೂರಲ್ಲಿ ತೊಣಚಿಕೊಪ್ಪದಿಂದ ಸೆಂಟ್ರಲ್‌ಬಸ್ ಸ್ಟ್ಯಾಂಡಿಗೆ ಹೋಗುವ ಸಿಟಿ ಬಸ್ಸುಗಳಲ್ಲಿ ನಾವು ಹೆಣಗಾಡಿದ್ದೂ ಉಂಟು.

ಬೆಂಗಳೂರಲ್ಲಿ ಇಳಿದಾಗ ನಮ್ಮ ಅಪಾರ ಬಂಧು ಮಿತ್ರರ ಹಾರ ತುರಾಯಿ ಸಹಿತವಾದ V.I.P. ಅದ್ಭುತ ಸ್ವಾಗತ ನಮ್ಮನ್ನು ಕಾಯುತ್ತಿತ್ತು. ನಾವೂ ದೊಡ್ಡ ಮನುಷ್ಯರಂತೆ ಹೊರ ಬಂದೆವು.

(ಸಶೇಷ)

ಕೆ. ಆರ್. ಉಡುಪ



ಎಷ್ಟೇ ಹಿತಕರವಾದರೂ ಭವಿಷ್ಯವನ್ನು ನಂಬಬೇಡ; ಕಳೆದುಹೋದುದನ್ನು ಕುರಿತು ಚಿಂತಿಸಬೇಡ. ವರ್ತಮಾನದ ಕರ್ತವ್ಯಗಳನ್ನು ನಿರ್ವಹಿಸು. ಇದೇ ದೇವರ ದಾರಿ.

—ಲಾಂಗ್ ಫೆಲೊ

ಆ ವಿಚಿತ್ರ ಅನುಭವ

"ಯಾರಲ್ಲಿ?"

"ಹುಜೂರ್!"—ಅರಮನೆಯ ಬಾಗಿಲಲ್ಲಿ ಇದ್ದ ಕಾವಲುಗಾರ ಮಹಾರಾಜರ ಎದುರು ತಲೆತಗ್ಗಿಸಿ ನಿಂತು ನುಡಿದ.

"ಮಂತ್ರಿಗಳನ್ನು ಕರೆ".

"ಅಪ್ಪಣೆ".

ಸ್ವಲ್ಪ ಹೊತ್ತಿನಲ್ಲೇ ಮಂತ್ರಿಮಹಾಶಯರು ಮಹಾರಾಜ ಭವಾನೀಸಿಂಹರ ಎದುರು ತಲೆತಗ್ಗಿಸಿ ನಮಸ್ಕರಿಸಿದರು ಮತ್ತು ವಿನಯದಿಂದ—"ಮಹಾರಾಜರೆ, ಏನಪ್ಪಣೆ?" ಎಂದರು.

"ಮಂತ್ರಿಗಳೆ....ಬಹುಕಾಲದಿಂದಲೂ ಸೇಂವಡಾ–ಬಡೌನೀಯಿಂದ ಅಲ್ಲಿಯ ಕ್ಷೇಮಸಮಾಚಾರ ವಿಚಾರಿಸುವಂತೆ ಸಂದೇಶಗಳು ಬರುತ್ತಿವೆ. ಆದ್ದರಿಂದ ನಾಳೆ ಬೇಗ್ಗೆ ಸೇಂವಡಾಕ್ಕೆ ಹೋಗುವ ಸಿದ್ಧತೆಯಾಗಲಿ".

"ಒಳ್ಳೇದು, ಮಹಾರಾಜರೆ!"—ಮತ್ತೊಮ್ಮೆ ತಲೆತಗ್ಗಿಸಿ, ಮಂತ್ರಿಗಳು ಹೊರಟುಹೋದರು.

ಮಹಾರಾಜ ಭವಾನೀಸಿಂಹರು ಆಂಗ್ಲರ ಆಡಳಿತ ಕಾಲದಲ್ಲೇ ೨೦ನೇ ಶತಮಾನದ ಪೂರ್ವಾರ್ಧದಲ್ಲಿ 'ದತಿಯಾ' (ಈಗಿನ ಮಧ್ಯಪ್ರದೇಶ) ಸಂಸ್ಥಾನದ ರಾಜರಿದ್ದರು. ಅವರು ಬುಂದೇಲ ಖಂಡದ ಪರಾಕ್ರಮಿ ಶಾಸಕರಲ್ಲೊಬ್ಬರು. ಸೂರ್ಯನಂತೆ ಹೊಳೆಯುವ ತೇಜಸ್ಸು ಅವರ ಕಾಂತಿಯುತ ಮುಖದ ಮೇಲೆ ಶೌರ್ಯದ ಸ್ಪಷ್ಟ ಮುದ್ರೆ ಒತ್ತಿತ್ತು. ಶೌರ್ಯದ ಜತೆಗೆ ಆಡಳಿತದ ದೃಷ್ಟಿಯಿಂದಲೂ ಅವರು ತುಂಬ ನಿಷ್ಪಕ್ಷರೂ ನ್ಯಾಯಪ್ರಿಯರೂ ಆಗಿದ್ದರು. ಅಕ್ಕಪಕ್ಕದ ಮೈಲುಗಟ್ಟಳೆ ಪ್ರದೇಶ ಅವರ ಅಧಿಕಾರವ್ಯಾಪ್ತಿಗೆ ಸೇರಿತ್ತು. ಆ ಊರುಗಳಲ್ಲಿ 'ಸೇಂವಡಾ' ಕೂಡ ಒಂದು. ಪ್ರಾಕೃತಿಕ ಸೌಂದರ್ಯದಿಂದ ಕೂಡಿದ ಈ ಪ್ರದೇಶ ಬೇಟೆಗೆ ತುಂಬ ಉಪಯುಕ್ತ ಸ್ಥಾನವೆನಿಸಿತ್ತು.

ಭವಾನೀಸಿಂಹರ ಅಪ್ಪಣೆಯನ್ನು ಪಾಲಿಸಲಾಯಿತು. ಮರುದಿನ ನಸುಕಿನಲ್ಲೇ ದತಿಯಾದ ಅರಮನೆಯೆದುರು ಅಲಂಕೃತ ಆನೆಯನ್ನು ತಂದು ನಿಲ್ಲಿಸಲಾಯಿತು.

೧೯೮೩ರ ಅಕ್ಟೋಬರ್ 'ನವನೀತ್' ಹಿಂದೀ ಮಾಸಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಮಹೇಂದ್ರವರ್ಮಾ ಅವರ "ಆಸ್ಥಾಕೀ ಆಂಸೂ" ಎಂಬ ಐತಿಹಾಸಿಕ ಕಥೆಯ ಭಾವಾನುವಾದ.

ಕತ್ತಿ, ಗುರಾಣಿ ಹಾಗೂ ಭರ್ಜಿ ಹಿಡಿದ ಅಂಗರಕ್ಷಕ ಹಾಗೂ ಸೈನಿಕರು ತಮ್ಮ ತಮ್ಮ ಕುದುರೆಗಳನ್ನೇರಿ ಅರಮನೆಯ ಬಾಗಿಲಲ್ಲಿ ಮಹಾರಾಜರ ಆಗಮನ ಹಾಗೂ ಅವರ ಆಜ್ಞೆಯ ನಿರೀಕ್ಷೆಯಲ್ಲಿ ನಿಂತಿದ್ದರು. ತಲೆಯ ಮೇಲೆ ಬುಂದೇಲೀ ಪಗಡಿ ಹೊತ್ತು ಟೊಂಕದಲ್ಲಿ ಖಡ್ಗವನ್ನು ಜೋತಾಡಿಸಿಕೊಳ್ಳುತ್ತ ಮಹಾರಾಜರು ಹಾಜರಾದರು. ಎಲ್ಲರೂ ತಲೆತಗ್ಗಿಸಿದರು. 'ಮಹಾರಾಜರಿಗೆ ಜಯವಾಗಲಿ'—ಎಂಬ ಘೋಷಣೆಗಳಿಂದ ಆಕಾಶವೇ ಪ್ರತಿಧ್ವನಿತವಾಯಿತು. ಮಹಾರಾಜರು ಆನೆಯ ಅಂಬಾರಿಯಲ್ಲಿ ಕುಳಿತರು. ಅವರ ಆಜ್ಞೆಯಂತೆ ಮಾವುತ ಆನೆಗೆ ಅಂಕುಶ ಹಾಕಿದ. ಆನೆ ಘೀಳಿಟ್ಟಿತು; ಠೀವಿಯಿಂದ ಓಲಾಡುತ್ತ ಸಾಗಿತು. ಸೈನಿಕರೂ ಕುದುರೆಗಳ ಲಗಾಮು ಹಿಡಿದರು. ಕುದುರೆಗಳು ಕೆನೆದು ಮಹಾರಾಜರನ್ನು ಹಿಂಬಾಲಿಸುತ್ತ ಸಾಗಿದವು.

ನಗರದ ಗಡಿಯನ್ನು ದಾಟಿ ಮೆರವಣಿಗೆ ಸೇಂವಡಾ ಮಾರ್ಗದಲ್ಲಿ ಮುಂದುವರಿಯಿತು. ಕುದುರೆಗಳ ಖುರಪುಟಗಳು ವಾಯುಮಂಡಲದಲ್ಲಿ ಧೂಳಿಯ ಮೋಡಗಳನ್ನು ಚೆಲ್ಲುತ್ತ ಹೋಗುತ್ತಿದ್ದವು. ಬೆಳಗಿನ ೧೦ ಗಂಟೆಯ ವೇಳೆ ಆ ತಂಡ 'ಸಿನಕುಂವಾ' ಗ್ರಾಮದ ಮೇರೆಯನ್ನು ಮುಟ್ಟಿತು.

ಚೈತ್ರಮಾಸ....ಆಕಾಶದಲ್ಲಿ ಸೂರ್ಯ ಮೇಲೇರಿದ್ದುದರಿಂದ ವಾತಾವರಣ ಬಿಸಿಯೇರುತ್ತಿತ್ತು. ಮಹಾರಾಜರ ಅಪ್ಪಣೆಯಂತೆ ಈ ತಂಡ ಊರ ಹೊರಗೆ ಒಂದು ಉದ್ಯಾನದಲ್ಲಿ ತಳವೂರಿತು. ಡೇರೆ ಹಾಕಲಾಯಿತು. ಮಹಾರಾಜರು ತಮ್ಮ ಡೇರೆಯ ಹೊರನಿಂತು ಊರಿನ ನೈಸರ್ಗಿಕ ಸೌಂದರ್ಯವನ್ನು ವೀಕ್ಷಿಸುತ್ತಿದ್ದರು. ಆಗಲೇ ಅವರ ದೃಷ್ಟಿ ಹತ್ತಿರದಲ್ಲಿದ್ದ ಒಂದು ಬಾವಿಯತ್ತ ಹರಿಯಿತು. ದೊಡ್ಡ ಬಾವಿ; ಸುತ್ತಲೂ ಎತ್ತರವಾದ ಕಟ್ಟೆ ಮತ್ತು ಬಾವಿಯ ಸುತ್ತಲೂ ಗೋಡೆಗಳು. ಅಕ್ಕಪಕ್ಕದಲ್ಲಿ ನಾಲ್ಕಾರು ಹಸುರು ತುಂಬಿದ ಮರಗಳು. ಬೇಸಗೆಯ ಬಿಸಿಲಲ್ಲಿ ದಣಿವಾರಿಸಿಕೊಳ್ಳಲು ಎಂಥ ಯೋಗ್ಯ ಸ್ಥಾನ! ಕಟ್ಟೆಯಲ್ಲಿ ನೀರು ತುಂಬಲು ಬಂದ ಮಹಿಳೆಯರ ಗುಂಪು....ಎಲ್ಲ ವಯಸ್ಸಿನ ಹಾಗೂ ಜಾತಿಯ ಮಹಿಳೆಯರು ಲಂಗ ಸೀರೆಗಳಿಂದ ತಮ್ಮ ಮಾನ ಮುಚ್ಚಿಕೊಂಡವರು. ಎಲ್ಲರ ಮೋರೆಯ ಮೇಲೂ ಉದ್ದನೆಯ ಪರದೆ.

ಮಹಾರಾಜರ ದೃಷ್ಟಿ ಬಾವಿಯಿಂದ ಸರಿದು ಅಕಸ್ಮಾತ್ ಬಾವಿಯತ್ತ ಬರುತ್ತಿದ್ದ ತರುಣಿಯ ಕಡೆ ಹರಿಯಿತು. ರಾಣೀಪುರದಲ್ಲಿ ತಯಾರಾಗುವ ಕಡು ಕೆಂಬಣ್ಣದ ಲಂಗ ಹಾಗೂ ಅದರ ಮೇಲೆ ದೇಹದ ಅಂಗಗಳನ್ನು ಮುಚ್ಚುವ ಹಳದಿ ಬಣ್ಣದ ಉಡುಗೆ. ಆಕೆಯ ಮೋರೆಯೂ ಪರದೆಯಿಂದ ಆವೃತವಾಗಿತ್ತು.

ಆಕೆಯ ದೃಷ್ಟಿ ಕೋಲಾಹಲದಿಂದಾಗಿ ಉದ್ಯಾನದ ಜನಜಂಗುಳಿಯತ್ತ ಹರಿಯಿತು. ನೋಡಿ ಒಂದಿಷ್ಟು ಹೆದರಿದಳು. ಹೆಜ್ಜೆ ತುಸು ತೀವ್ರವಾಯಿತು. ಎದೆ ಬಡಿತ ಹೆಚ್ಚಿತು. ಆಗಲೇ ಆ ಮುಸುಕಿನೊಳಗಿಂದ ಎರಡು ಚಂಚಲ ಕಂಗಳು ಹೊಳೆದವು....ಮತ್ತು ಮಹಾರಾಜರ ತೇಜಃಪುಂಜ ಮುಖಮಂಡಲವನ್ನು ನಿಟ್ಟಿಸತೊಡಗಿದವು. ಮಹಾರಾಜರ ಕಂಗಳೂ ಆಕೆಯ ಕಂಗಳನ್ನು ನೋಡಿದವು. ಅವರ ಹೃದಯದಲ್ಲಿ ಕುತೂಹಲ ಮೂಡಿತು. ಆದರೆ ಆ ಮೋರೆಯನ್ನು ಪೂರ್ತಿಯಾಗಿ ನೋಡಲಾಗದುದರಿಂದ ಹೃದಯದಲ್ಲಿ ಸುಪ್ತ ಜ್ವಾಲಾಮುಖಿಯನ್ನು ಅದುಮಿಟ್ಟುಕೊಂಡಂತಹ ಸ್ಥಿತಿ ಉಂಟಾಯಿತು.

ನವತರುಣಿಯ ಕಾಲುಗಳು ಬಾವಿಯತ್ತ ಮುಂದುವರಿದವು. ಆದರೆ ಆಕೆಯ ಕಂಗಳು ಮರಳಿ ಮರಳಿ ಮಹಾರಾಜರ ಮೋರೆಯ ಮೇಲೆಯೇ ನೆಡುತ್ತಿದವು. ಹಾದಿಗೆ ಅಡ್ಡ ಬಂದ ಒಂದು ಹೊಂಡದಿಂದಾಗಿ ಅವಳು ಕ್ಷಣಕಾಲ ದೃಷ್ಟಿಯನ್ನು ಬೇರೆಡೆಗೆ ಹರಿಸಿದರೂ ಮತ್ತೆ ಎಂದಿನಂತೆ ಮಹಾರಾಜರನ್ನೇ ದಿಟ್ಟಿಸತೊಡಗಿದಳು.

ಬಾವಿ ಬಂತು. ತರುಣಿ ಕೊಡವನ್ನು ಕಟ್ಟೆಯ ಮೇಲಿಟ್ಟಳು. ಬಣ್ಣ ಬಣ್ಣದ ಬಳೆಗಳು ಸದ್ದು ಮಾಡಿದವು. ಬಾವಿಯಲ್ಲಿ ಜನಸಂದಣಿ ಹೆಚ್ಚಿದ್ದುದರಿಂದ ಅವಳು ಕುಳಿತುಕೊಂಡಳು. ಕೊಡದ ಮೇಲೆ ಕೈಯಿಟ್ಟು, ಪುನಃ ಪರದೆಯ ಮರೆಯಿಂದ ಮಹಾರಾಜರತ್ತ ತೀಕ್ಷ್ಣದೃಷ್ಟಿ ಬೀರಿದಳು. ಮಹಾರಾಜರ ಹೃದಯದಲ್ಲಿ ಕುತೂಹಲ, ಜಿಜ್ಞಾಸೆ ಹಾಗೂ ಸ್ವಾಭಿಮಾನ ಎಚ್ಚೆತ್ತವು. ಇದುತನಕ ಬುಂದೇಲ್ ಭೂಮಿಯಲ್ಲಿ ತಮ್ಮನ್ನು ದೃಷ್ಟಿಸಿನೋಡುವ ಸಾಹಸ ಯಾರಿಗೂ ಇರಲಿಲ್ಲ. ಇಂದು ಈ ತರುಣಿ ಇಂಥ ದುಸ್ಸಾಹಸ ಅದೇಕೆ ಮಾಡಿದಳು?—ಎಂದು ಅವರು ಸಿಡಿಮಿಡಿಗೊಂಡರು. ಅವರ ಕೋಪ ಕ್ಷಣಕ್ಷಣಕ್ಕೆ ಹೆಚ್ಚುತ್ತಿತ್ತು.

ಆಗಲೇ ಬಾವಿ ಬರಿದಾಯಿತು. ಅಲ್ಲಿ ಆ ಯುವತಿಯೊಬ್ಬಳೇ ಉಳಿದಳು. ಅವಳ ಮನಸ್ಸು ವಿಚಾರಗಳ ತುಮುಲಕ್ಕೆ ಸಿಕ್ಕಿದ್ದುದರಿಂದ ನೀರು ತುಂಬುವುದನ್ನೇ ಮರೆತಳು. ಬರಿಕೊಡ ಹಿಡಿದು ಮರಳತೊಡಗಿದಳು. ಇದೆಲ್ಲವೂ ಮಹಾರಾಜರಿಗೆ ಅರ್ಥವಾಯಿತು. ಆದರೆ ಕಾರಣ ಮಾತ್ರ ತಿಳಿಯಲಿಲ್ಲ.

ಯುವತಿ ಮುಂದರಿದಳು. ಅವಳ ದೃಷ್ಟಿ ಮರಳಿ ಮಹಾರಾಜರ ಮೋರೆಯ ಮೇಲೆ ನೆಟ್ಟಿತು. ಆಗಲೇ ಅವಳಿಗೆ ತಲೆಯ ಮೇಲೆ ಭಾರವೇ ಇಲ್ಲವೆಂದು ಭಾಸವಾಯಿತು....ತನ್ನ ಮೂರ್ಖತನಕ್ಕಾಗಿ ಮನದಲ್ಲೇ ನಕ್ಕಳು; ನಾಚುಗೆಯಿಂದ ತಲೆ ತಗ್ಗಿಸಿದಳು....ಮತ್ತೆ ಬಾವಿಗೆ ಹಿಂದಿರುಗಿದಳು. ಕೊಡಕ್ಕೆ ಹಗ್ಗದ ಕುಣಿಕೆ

ಹಾಕಿ ಅದನ್ನು ನೀರಿಗಿಳಿಸಿದಳು. ನೀರಲ್ಲಿ ಎದ್ದ ಅಲೆಗಳು ಆಕೆಯ ಹೃದಯದಲ್ಲಿದ್ದ ನಾನಾ ವಿಧದ ವಿಚಾರ ತರಂಗಗಳನ್ನು ಹೋಲುತ್ತಿದ್ದವು. ನೀರು ತುಂಬಿದ ಕೊಡವನ್ನು ಮತ್ತೆ ತಲೆಯ ಮೇಲಿಟ್ಟುಕೊಂಡು ಮರಳಿದಳು. ಆ ಯುವತಿಯಿಂದಾಗಿ ತಮ್ಮ ಮನಃಶಾಂತಿ ಕದಡಿದಂತೆ ಮಹಾರಾಜರಿಗನ್ನಿಸಿತು. ಕ್ಷಣಕಾಲ ಯೋಚಿಸಿ—'ಯಾರಲ್ಲಿ?'—ಎಂದರು.

"ಹುಜೂರ್....ಅಪ್ಪಣೆ"—ಎನ್ನುತ್ತ ಹತ್ತಿರವೇ ಇದ್ದ ಸೈನಿಕ ತನ್ನ ಭರ್ಜಿಯನ್ನು ನೆಲಕ್ಕೂರಿ ಅಭಿನಂದಿಸಿದ.

"ನೋಡು....ಎದುರಿನ ಬಾವಿಯಿಂದ ನೀರೊಯ್ಯುತ್ತಿದ್ದಾಳಲ್ಲ—ಅವಳ ಬಳಿ ಹೋಗಿ...."

ವಾಕ್ಯವನ್ನು ಅರ್ಧಕ್ಕೇ ನಿಲ್ಲಿಸಿ, ತಮ್ಮ ಹೃದಯದ ದೌರ್ಬಲ್ಯ ವ್ಯಕ್ತವಾಗುವುದೋ—ಎಂದು ಮಹಾರಾಜರು ಯೋಚಿಸಹತ್ತಿದರು. ಅವರು ತುಸುಹೊತ್ತು ಸುಮ್ಮನಿದ್ದಾಗ—"ಮಹಾರಾಜರೆ! ಆಕೆಯ ಬಳಿ ಹೋಗಿ ನಾನೇನು ಕೇಳಲಿ?"—ಎಂದ ಸೈನಿಕ.

"ಮಹಾರಾಜ ಭವಾನೀಸಿಂಹರನ್ನು ಪುನಃ ಪುನಃ ನಿಟ್ಟಿಸಿ, ಅದೇಕೆ ನೋಡುತ್ತಿದ್ದಿ?— ಎಂದು ಕೇಳು. ಮಹಾರಾಜರನ್ನು ಈ ರೀತಿ ನೆಟ್ಟದೃಷ್ಟಿಯಿಂದ ನೋಡುವಾಗ ಆಕೆಗೆ ಮೃತ್ಯುಭಯ ಉಂಟಾಗಲಿಲ್ಲವೇ?"

"ಮಹಾರಾಜರಿಗೆ ಜಯವಾಗಲಿ....ಇದೀಗಲೇ ಹೋಗಿ ವಿಚಾರಿಸಿ ಬರುವೆ" ಎಂದು ನಮಸ್ಕರಿಸಿ ಹೊರಟ ಸೈನಿಕ.

ಆಗಲೇ ಮಹಾರಾಜರು ಅವನನ್ನು ಕರೆದರು. ಸೈನಿಕ ಹಿಂದೆ ಬಂದ. ತಲೆ ತಗ್ಗಿಸಿ ಮುಂದಿನ ಅಪ್ಪಣೆಗಾಗಿ ಕಾದುನಿಂತ. ಮಹಾರಾಜರು ಒಮ್ಮೆ ನಿಡುಸುಯ್ದು—"ಈಗ ನೀನೇನೂ ಹೋಗಬೇಕಿಲ್ಲ....ನಾನೇ ಸ್ವತಃ ಹೋಗುವೆ.... ಮತ್ತು ಮರಣಭಯ ಇಲ್ಲವೆ?—ಎಂದು ಆ ಉದ್ಧಟೆಯನ್ನು ಸ್ವತಃ ಕೇಳಿ ನೋಡುವೆ"—ಎಂದರು.

ಸೈನಿಕ ಅಲ್ಲೇ ನಿಂತ. ಮಹಾರಾಜರು ಮುಂದರಿದರು. ಕಳಿಂಗ ಯುದ್ಧದ ಸರ್ವನಾಶ ಸಮ್ರಾಟ್ ಅಶೋಕನ ಹೃದಯದ ಮೇಲೆ ಪ್ರಭಾವ ಬೀರಿದಂತೆ ಈ ಯುವತಿಯ ನೋಟ ಮಹಾರಾಜರನ್ನು ವಿಚಲಿತಗೊಳಿಸಿತ್ತು. ಕೆಲವೇ ಕ್ಷಣಗಳಲ್ಲಿ ಮಹಾರಾಜ ಭವಾನೀಸಿಂಹರು ಆ ಯುವತಿಯ ಬಳಿ ತಲುಪಿ ನಿಂತುಕೊಂಡರು.

ಯುವತಿಯೂ ನಿಂತಳು. ಆಕೆ ಇನ್ನೊಮ್ಮೆ ಸಾಹಸದಿಂದ ತನ್ನ ಮುಖದ

ಪರದೆ ಸರಿಸಿ ಮಹಾರಾಜರನ್ನು ದಿಟ್ಟಿಸಿ ನೋಡಿದಳು. ಮರುಕ್ಷಣವೇ ತಲೆ ತಗ್ಗಿಸಿದಳು.

ಮಹಾರಾಜರ ದೃಷ್ಟಿ ಆಕೆಯ ಬಿಳಿ ಮೋರೆಯನ್ನು ದಿಟ್ಟಿಸಿತು. ದೊಡ್ಡ ದೊಡ್ಡ ಚಂಚಲ ಕಂಗಳು ಅವರ ಮನದಲ್ಲಿ ವಿಚಿತ್ರ ಭಾವವನ್ನುಂಟುಮಾಡಿದವು. ಆದರೆ ಆಕೆಯ ಸಾಹಸ ನೋಡಿ ಮನದಲ್ಲೇ ಹಿಗ್ಗಿದರು.

"ನಾನು ನಿನ್ನೊಡನೆ ಬರೀ ಒಂದು ಪ್ರಶ್ನೆ ಕೇಳಲು ಬಂದಿರುವೆ"—ಎಂದು ನೇರವಾಗಿ ಹೇಳಿದರು.

"ಮಹಾರಾಜರೆ....ಅಗತ್ಯ ಕೇಳಿರಿ....ನನಗೆ ತಿಳಿದಷ್ಟು ಖಂಡಿತ ಹೇಳುವೆ".

"ನಿನಗೆ ಸಾವಿನ ಭಯವಿಲ್ಲವೆ?"

"ಮಹಾರಾಜರೆ....ನಾನು ನನ್ನ ಹಾದಿಯಲ್ಲೇ ಬಂದು, ನನ್ನ ಹಾದಿಯಲ್ಲೇ ಮರಳುತ್ತಿದ್ದೇನೆ. ಯಾರ ವಸ್ತುವನ್ನೂ ಕಸಿದುಕೊಂಡಿಲ್ಲ....ಯಾರಿಗೂ ಕೆಡುಕು ಮಾಡಿಲ್ಲ....ಹೀಗಿರುವಾಗ ನನಗೆ ಸಾವಿನ ಭಯವೇಕೆ?"

ಆಕೆಯ ಸರಳತೆ ಹಾಗೂ ಸತ್ಯತೆಯನ್ನು ಕಂಡು ಮಹಾರಾಜರು ಮನದಲ್ಲೇ ಹಿಗ್ಗಿದರು. ಮುಖದ ಮೇಲೆ ಮಂದಹಾಸದ ನಸುರೇಖೆ ಹರಿಯಿತು. ಅವರ ಸಿಟ್ಟು ಶಾಂತವಾಗಿತ್ತು.

"ನೀನು ಯಾರ ವಸ್ತುವನ್ನು ಕಸಿದುಕೊಂಡಿಲ್ಲ....ಯಾರಿಗೂ ಕೆಡುಕು ಮಾಡಿಲ್ಲ. ಆದರೆ ಬಹುಹೊತ್ತಿನಿಂದ ನನ್ನನ್ನೇ ಅದೇಕೆ ದಿಟ್ಟಿಸಿ ನೋಡುತ್ತಿದ್ದಿ?"

"ಮಹಾರಾಜರನ್ನು ನೋಡಬಾರದೆಂಬ ನಿಷೇಧವಿದೆಯೆ?"

"ನಿಷೇಧವೇನೂ ಇಲ್ಲ; ಆದರೆ ಇದುವರೆಗೆ ಮಹಾರಾಜ ಭವಾನೀಸಿಂಹರನ್ನು ದಿಟ್ಟಿಸಿ ನೋಡುವ ಸಾಹಸ ಯಾರಿಗೂ ಇಲ್ಲವೆಂಬುದನ್ನು ನೀನೂ ಬಲ್ಲೆ. ನಿನ್ನ ಬದಲು ಯಾರಾದರೂ ಗಂಡಸು ಈ ದುಸ್ಸಾಹಸ ಗೈದಿದ್ದರೆ, ಅವನ ಕಣ್ಣುಗಳನ್ನೇ ಕೀಳಿಸಿಬಿಡುತ್ತಿದ್ದೆ".

"ಆದರೆ ನೋಟನೋಟಗಳಲ್ಲಿ ಅಂತರ ಇರುತ್ತದೆ, ಮಹಾರಾಜ್! ಅಲ್ಲದೆ ನಮ್ಮಂತಹ ದುರ್ಬಲ ಸ್ತ್ರೀಯರು ಮಹಾರಾಜರನ್ನು ತಲೆಯೆತ್ತಿ ನೋಡುವ ಸಾಹಸ ಮಾಡಬಲ್ಲರೆ?"

ಮಹಾರಾಜರು ಆಕೆಯ ನಿರ್ಭಯತೆ ಹಾಗೂ ವಾಕ್ಪಟುತ್ವವನ್ನು ಕಂಡು ಚಕಿತರಾದರು. "ಹಾಗಿದ್ದರೆ ನಿನ್ನ ದೃಷ್ಟಿ ಎಂತಹದು? ನೀನು ಅದಾವ ದೃಷ್ಟಿಯಿಂದ ನನ್ನನ್ನು ಪುನಃ ಪುನಃ ದಿಟ್ಟಿಸಿ ನೋಡುತ್ತಿದ್ದಿ?"—ಕೇಳಿದರವರು.

"ಭಕ್ತ ತನ್ನ ಭಗವಂತನನ್ನು ನೋಡುವಂತೆ....ಪ್ರಜೆ ತನ್ನ ರಾಜನನ್ನು

ನೋಡುವಂತೆ....ಮಗಳು ತನ್ನ ತಂದೆಯನ್ನು ಕಾಣುವಂತೆ....ಮತ್ತು....

ಮಹಾರಾಜರ ಹೃದಯ ವೀಣೆಯ ತಂತಿಗಳು ಝಂಕೃತವಾದವು. ಅವರ ಮನದ ಸಂದೇಹ ಅಳಿಯಿತು. 'ಹೂಂ....ಮತ್ತೇನು?"— ಮುಗುಳ್ನಗುತ್ತಾ ಕೇಳಿದರು.

ನಿಟ್ಟುಸಿರಿಟ್ಟು ಆ ಯುವತಿ ಅನ್ಯಮನಸ್ಕಳಾಗಿ ಇಂತೆಂದಳು—"ಮಹಾರಾಜ್, ಬಾಲ್ಯದಲ್ಲಿ ಮದುವೆಯಾಗಿ 'ದತಿಯಾ' ಬಿಟ್ಟು ಇಲ್ಲಿಗೆ ಬಂದಂದಿನಿಂದ ಅಲ್ಲಿಗೆ ಹೋಗುವ ಅವಕಾಶವೇ ಲಭಿಸಲಿಲ್ಲ. ಬಾಲ್ಯದಲ್ಲೊಮ್ಮೆ, ದಸರಾ ಹಬ್ಬದ ವೇಳೆ ನಿಮ್ಮನ್ನು ಕಂಡಿದ್ದೆ. ಆ ದಿನದ ಬಳಿಕ ಎಷ್ಟೋ ಸಲ ನಿಮ್ಮನ್ನು ಕಾಣುವ ಆಸೆಯಾಗಿದ್ದರೂ ಅದು ಈಡೇರಿರಲಿಲ್ಲ. ಆ ಇಚ್ಛೆಯನ್ನು ಇಂದು ಭಗವಂತ ಪೂರ್ಣಗೊಳಿಸಿದ".

ಮಹಾರಾಜರ ಹೃದಯದಲ್ಲಿ ವಾತ್ಸಲ್ಯಸಾಗರ ಅಲೆಗಳನ್ನೆಬ್ಬಿಸಿತು. ಅವರು ಬಲು ಆತ್ಮೀಯತೆಯಿಂದ–"ನಿನ್ನ ತಂದೆ ಅಷ್ಟೊಂದು ನಿರ್ದಯರೆ? ಮದುವೆಯ ಬಳಿಕ ಒಮ್ಮೆಯೂ ಮನೆಗೆ ಕರೆದೊಯ್ಯಲಿಲ್ಲವೆಂದರೆ?" ಎಂದರು.

ಈ ಮಾತು ಆಕೆಯ ಹೃದಯವನ್ನು ಭೇದಿಸಿದಂತೆ ತೋರಿತು. ಆಕೆ ಬಟ್ಟೆಯ ಅಂಚಿನಿಂದ ಕಣ್ಣೀರನ್ನು ಉಜ್ಜಿಕೊಂಡಳು. ಅದನ್ನು ಕಂಡು ಮಹಾರಾಜರು ಕಳವಳದಿಂದ—"ನನ್ನ ಮಾತು ನಿನ್ನ ಮನಸ್ಸನ್ನು ನೋಯಿಸಿದಂತೆ ತೋರುತ್ತದೆ. ನಿನ್ನ ವೈಯಕ್ತಿಕ ವಿಷಯವನ್ನು ಪ್ರಸ್ತಾಪಿಸಿದುದು ಸರಿಯಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ"—ಎಂದರು.

"ಹಾಗೇನೂ ಇಲ್ಲ....ಮಹಾರಾಜ್. ಇತರರ ವಿಷಯದಲ್ಲಿ ಪ್ರಸ್ತಾಪಿಸುವ ಅಧಿಕಾರ ನಿಮಗಿದ್ದೇ ಇದೆ. ಎಷ್ಟೆಂದರೂ ನೀವು ಮಹಾರಾಜರು....ಪ್ರಜೆಗಳಿಗೆ ತಂದೆಯಂತೆ ಇರುವವರು....ನಮ್ಮೆಲ್ಲರ ಬಗ್ಗೆ ನೀವು ತಿಳಿದುಕೊಳ್ಳಬೇಕು: ನನ್ನ ತಂದೆ ಶ್ರೀಮಂತರೆಂಬುದು ನಿಮಗೆ ತಿಳಿದಿಲ್ಲ....ತಿಳಿಯದ ವಿಷಯಕ್ಕಾಗಿ ನಾನೇಕೆ ನೊಂದುಕೊಳ್ಳಲಿ?"

ಮಹಾರಾಜರಿಗೆ ತುಂಬಾ ದುಃಖವೆನಿಸಿತು. ಈ ರೀತಿಯ ಮರ್ಮಭೇದಕ ವಾಕ್ಯದಿಂದ ಮುಂದೆಂದೂ ಆಕೆಯ ಮನ ನೋಯಿಸುವುದಿಲ್ಲವೆಂದು ನಿರ್ಧರಿಸಿದರು. ತುಸು ಹೊತ್ತು ಶಾಂತವಾಗಿ ಯೋಚಿಸುತ್ತಿದ್ದರು.

"ಮಹಾರಾಜರೆ....ನಾನೀಗ ಹೊರಡಲೆ? ಮನೆಯಿಂದ ಬಂದು ತುಂಬಾ ಹೊತ್ತಾಯಿತು. ಆದರೆ ಈಗ ನನಗೆ ಬಲು ಸಂತೋಷವೆನಿಸಿದೆ. ಎಷ್ಟೋ ವರ್ಷಗಳ ಆಸೆ ಈಡೇರಿದೆ...."—ಎಂದಳು ಯುವತಿ.

ಮಹಾರಾಜರೀಗ ತಮ್ಮ ಮನೋಭಾವವನ್ನು ಹತ್ತಿಕ್ಕದಾದರು. ಸ್ನೇಹ ಹಾಗೂ ವಾತ್ಸಲ್ಯದಿಂದ ಅವರು ಆಕೆಯ ಭುಜದ ಮೇಲೆ ಕೈಯಿಟ್ಟು ಮುಗುಳ್ನಗುತ್ತ—"ಮಗಳೆ....ಇನ್ನೂ ಸ್ವಲ್ಪ ಹೊತ್ತು ನಿಲ್ಲು....ನಿನ್ನ ತವರು ಮನೆಯಲ್ಲಿ ಯಾರಿದ್ದಾರೆಂದು ಹೇಳಲೇ ಇಲ್ಲವಲ್ಲ?"—ಎಂದರು.

ಆಕೆಯ ಕಂಗಳು ಮತ್ತೆ ತುಂಬಿಬಂದವು. ಆಕೆ ತನ್ನ ಕಣ್ಣೀರನ್ನುಜ್ಜಿಕೊಂಡು—"ಮಹಾರಾಜ್! ನಿರ್ಭಾಗ್ಯಳಾದ ನನಗೆ ತವರಿನಲ್ಲಿ ಯಾರೂ ಇಲ್ಲ. ತಾಯಿ ತಂದೆ ಮಾತ್ರ ಇದ್ದರು. ಬಾಲ್ಯದಲ್ಲೇ ತಾಯಿ ತೀರಿದಳು. ತಂದೆ ಬಲು ಪ್ರೀತಿಯಿಂದ ನನ್ನನ್ನು ಸಾಕಿದರು. ಅವರಿಗೆ ಭಯಂಕರ ಕಾಯಿಲೆ ಬಂದಡರಿತು. ಬಲು ಕಷ್ಟದಿಂದ ನನ್ನ ಮದುವೆ ಮಾಡಿದರು. ಅದಕ್ಕೆಂದೇ ಜೀವ ಹಿಡಿದಿದ್ದರೇನೋ. ನನ್ನನ್ನು ಒಂಟಿಯಾಗಿ ಬಿಟ್ಟು ಈ ಪ್ರಪಂಚದಿಂದ ಹೊರಟೇಹೋದರು. ಈಗ ಈ 'ನಿಸಕುಂವಾ' ಊರೇ ನನ್ನ ಗಂಡನಮನೆ ಹಾಗೂ ತವರುಮನೆ!" ಎಂದಳು.

ಆಕೆಯ ಕೊನೆಯ ವಾಕ್ಯ ಮಹಾರಾಜರ ಹೃದಯ ಕಲಕಿತು. ಅವರ ಬಲಗೈ ಮತ್ತೆ ಆಕೆಯ ಭುಜದ ಮೇಲಿತ್ತು. ಅವರ ಕಂಗಳಿಂದ ಎರಡು ಹನಿ ಕಣ್ಣೀರು ಉದುರಿತು. ಕೊರಳು ಕಟ್ಟಿಬಂತು....ತುಂಬುವಾತ್ಸಲ್ಯದಿಂದ ಅವರೆಂದರು—"ಮಗಳೆ! ಇನ್ನು ನೀನು ನನ್ನನ್ನು ಮಹಾರಾಜ್—ಎಂದು ಕರೆಯುವುದು ಬೇಡ. ಇಂದಿನಿಂದ ಭವಾನೀಸಿಂಹ ನಿನ್ನ ತಂದೆ. ನಿನ್ನ ತಂದೆ ಬದುಕಿಲ್ಲವೆಂದೂ ಅದರಿಂದಾಗಿಯೇ ದತಿಯಾ ನೋಡುವ ಭಾಗ್ಯವಿಲ್ಲವೆಂದೂ ಹೇಳಬೇಡ. ದತಿಯಾದ ಪ್ರತಿಯೊಬ್ಬ ಮಗಳೂ ನನ್ನ ಮಗಳೇ. ಈಗಲೇ ನಿನ್ನ ಮನೆಗೆ ಬಂದು ನಿನ್ನನ್ನು ತವರಿಗೆ ಕರೆದೊಯ್ಯಲು ಏರ್ಪಾಡು ಮಾಡಿಸುವೆ".

ತರುಣಿಯು ಎಡಗೈ ಕೊಡ ಹಿಡಿದಿತ್ತು ; ಬಲಗೈಯಿಂದ ಮಹಾರಾಜರ ಪಾದ ಮುಟ್ಟಿ ನಮಸ್ಕರಿಸಲು ಆಕೆ ಬಾಗುತ್ತಲೇ ಮಹಾರಾಜರು ಆಕೆಯ ಕೈಹಿಡಿದು—"ಬೇಡ, ಮಗಳೆ ; ಭವಾನೀಸಿಂಹ ಇಂದಿನಿಂದ ನಿನ್ನ ತಂದೆ ಎನಿಸಿದ್ದಾನೆ.... ಇನ್ನು ಆತ ನಿನ್ನ ಪಾಲಿಗೆ ರಾಜನಲ್ಲ...ನಮ್ಮಲ್ಲಿ ರಾಜನ ಪಾದಗಳನ್ನಷ್ಟೇ ಮುಟ್ಟಿ ನಮಸ್ಕರಿಸುವ ಸಂಪ್ರದಾಯ ಹೊರತು, ತಂದೆಯ ಕಾಲುಗಳನ್ನು ಮುಟ್ಟಿ ನಮಸ್ಕರಿಸುವಂತಿಲ್ಲ. ಮಗಳಿಂದ ಕಾಲು ಮುಟ್ಟಿಸಿಕೊಂಡು ನಾನು ನರಕಕ್ಕೆ ಹೋಗಬಯಸುವುದಿಲ್ಲ"—ಎಂದರು.

ಮಹಾರಾಜರು ಆ ತರುಣಿಯ ಹಿಂದೆ ಹಿಂದೆ ನಡೆದರು, ಅವರು ಅವಳ ಮನೆಯ ಬಾಗಿಲಿಗೆ ತಲುಪಿದಾಗ, ಹಳ್ಳಿಯ ಜನರು ಮಹಾರಾಜರಿಗೆ ಜಯ

ಜಯಕಾರ ಹೇಳಿದರು. ತರುಣಿ ಒಳನಡೆದಳು. ಅವಳ ಮಾವ ಹಾಗೂ ಗಂಡ ಮಹಾರಾಜರ ಸೇವೆಗೆ ಮುಂದಾದರು. ರಾಜರೆದುರು ಆತಿಥ್ಯಕ್ಕಾಗಿ ಹಣ್ಣು ತುಂಬಿದ ಪಾತ್ರೆ ಇಡಲಾಯಿತು. ಆಗ ಅವರೆಂದರು—"ಇಲ್ಲ....ಇಲ್ಲ....ಇದು ನಮ್ಮ ಮಗಳ ಮನೆ. ಮಗಳ ಮನೆಯಲ್ಲಿ ಉಣ್ಣುವುದು ಪಾಪಕರ. ನಾನು ಮಗಳನ್ನು ತವರಿಗೆ ಕರೆದೊಯ್ಯಲು ಬಂದಿರುವೆ. ಇಂದಿನಿಂದ ನಾನೇ ಅವಳ ತಂದೆ...."

ಮಹಾರಾಜರ ಅಪ್ಪಣೆಯಂತೆ ಅವರ ಆನೆ ಬಾಗಿಲಲ್ಲಿ ನಿಂತಿತು. ಭವಾನೀಸಿಂಹರ ಮಗಳನ್ನು ಕಳುಹಿಸಿಕೊಡಲಾಯಿತು. ಇಬ್ಬರೂ ಅಂಬಾರಿಯಲ್ಲಿ ಕುಳಿತರು. ಮರಳಿ ಮಹಾರಾಜರಿಗೆ ಜಯಜಯಕಾರ ಹಾಕಲಾಯಿತು. ಹಳ್ಳಿಯ ಮನೆಗಳಲ್ಲಿ ಹೆಂಗಸರು ಪರದೆಯ ಮರೆಯಿಂದ ಮಹಾರಾಜರನ್ನು ನೋಡುತ್ತಿದ್ದರು. ಮಾವುತ ಅಂಕುಶ ಹಾಕಿದ....ಆನೆ ಘೀಳಿಟ್ಟಿತು....ಮತ್ತು ಉದ್ಯಾನದತ್ತ ಸಾಗಿತು.

ಮಹಾರಾಜರ ಅಪ್ಪಣೆಯಂತೆ ಡೇರೆಗಳನ್ನು ತೆಗೆಯಲಾಯಿತು. ಸೈನಿಕರು ಕುದುರೆಗಳನ್ನೇರಿ ಮಹಾರಾಜರ ಆಜ್ಞೆಗಾಗಿ ಕಾದುನಿಂತರು. ಆಗಲೇ ಮಹಾರಾಜರ ಶಬ್ದಗಳು ವಾತಾವರಣದಲ್ಲಿ ಮೊಳಗಿದವು—"ಇದು ನನ್ನ ಮಗಳ ಊರು. ಇಲ್ಲಿಯ ನೀರು ಕುಡಿಯುವುದೂ ಪಾಪ: ಇಲ್ಲಿ ತುಂಬಿಸಿಕೊಂಡ ನೀರನ್ನು ಚೆಲ್ಲಿ ಬಿಡಿರಿ. ನಾವೀಗ ಸೇಂಧವಾಕ್ಕೆ ಹೋಗುವುದಿಲ್ಲ....'ಪತಿಯಾ'ಕ್ಕೆ ಮರಳುತ್ತೇವೆ".

ಆನೆ ಮತ್ತೆ ಘೀಳಿಟ್ಟಿತು. ಕುದುರೆಗಳು ಜೋರಾಗಿ ಕೆನೆದವು. ಅವುಗಳ ಖುರಪುಟಗಳಿಂದ ಹೊರಹೊರಟ ಧೂಳಿಯು ನೀಲ ಆಗಸದ ಬಯಲನ್ನು ಮಸಕುಗೊಳಿಸುತ್ತಿತ್ತು !

ಬಿ. ಸುಬ್ರಾಯ ಅಡಿಗ

ತಿರಸ್ಕಾರದಿಂದ ಅಥವಾ ನಟನೆಯಿಂದ ಯಾರಿಗೂ ದಾನಮಾಡಬಾರದು. ಹೀಗೆ ಮಾಡಿದ ದಾನವು ದಾನಿಯನ್ನೇ ನಾಶಪಡಿಸುವುದು.

—ವಾಲ್ಮೀಕಿ

ಹೃದಯ ರೋಗ

ಹೃದಯ ದೇಹದ ಬಹುಮುಖ್ಯ ಅಂಗ. ದೇಹದ ವಿವಿಧ ಭಾಗಗಳಿಂದ ಬರುವ ಅಶುದ್ಧ ರಕ್ತವನ್ನು ಅದು ಶ್ವಾಸಕೋಶಕ್ಕೆ ಕಳುಹಿಸಿ ಅಲ್ಲಿ ಶುದ್ಧಗೊಂಡ ರಕ್ತವನ್ನು ಮತ್ತೆ ದೇಹದ ಅಂಗೋಪಾಂಗಗಳಿಗೆ ವಿತರಿಸುವ ಕಾರ್ಯ ಇದರದು. ರೋಗ ಪೀಡಿತ ಹೃದಯ ಈ ಕಾರ್ಯವನ್ನು ಸಕ್ರಿಯವಾಗಿ ನಿರ್ವಹಿಸುವಲ್ಲಿ ವಿಫಲಗೊಂಡು ನಾನಾ ವಿಧವಾದ ಹೃದ್ರೋಗಗಳಿಗೆ ಎಡೆ ಮಾಡಿಕೊಡುತ್ತದೆ. ಹೃದಯಕ್ಕೆ ಸಂಬಂಧಿಸಿದ ರೋಗಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು. ಒಂದು ಚಿಕ್ಕ ವಯಸ್ಸಿನಲ್ಲಿ ಬರುವ ಹೃದಯ ರೋಗಗಳು (೨೫ ವರ್ಷದ ಒಳಗೆ) ಮತ್ತೊಂದು ವಯೋಮಿತಿ ಹೆಚ್ಚಿದಂತೆಲ್ಲ ಬರುವ ಹೃದಯ ರೋಗಗಳು. ಸುಮಾರು ನಲವತ್ತೈದು ವರ್ಷ ಕಳೆದ ನಂತರ ಬಹಳಷ್ಟು ಜನ ಈ ರೋಗಕ್ಕೆ ತುತ್ತಾಗುತ್ತಾರೆ.

ಅತಿ ಚಿಕ್ಕ ವಯಸ್ಸಿನಲ್ಲಿ ಕಾಣಿಸಿಕೊಳ್ಳಬಹುದಾದ ಹೃದ್ರೋಗಗಳು :

೧. ಕಾಂಜನೈಟಲ್ ಹೃದ್ರೋಗ : (Congeonital Heart disease)

ತಾಯಿಯ ಗರ್ಭಕೋಶದಲ್ಲಿದ್ದಾಗಲೇ ಹೃದಯ ಬೆಳೆಯುವಲ್ಲಿ ಕೆಲವು ತೊಂದರೆಗಳುಂಟಾಗಿ ಹೃದಯ ಸರಿಯಾಗಿ ಬೆಳೆಯದೆ ಈ ರೋಗವು ಗರ್ಭಕೋಶದಲ್ಲಿಯೇ ಪ್ರಾರಂಭವಾಗುತ್ತದೆ (ವಿ. ಎಸ್. ಡಿ. ವಿ. ಎಸ್. ಡಿ, ಪಿಡಿವಿ. ಇತ್ಯಾದಿ). ಹುಟ್ಟಿದಂದಿನಿಂದಲೇ ಈ ರೋಗದ ಚರ್ಯೆಗಳು ಕಾಣಿಸಿಕೊಳ್ಳುತ್ತವೆ. ಮಗು ನಿರ್ದಿಷ್ಟವಾದ ರೀತಿಯಲ್ಲಿ ಬೆಳೆಯದಿರಬಹುದು. ಹೃದಯದ ಬಡಿತ ಜಾಸ್ತಿಯಾಗಬಹುದು. ಕೈಕಾಲು, ಬಾಯಿ ನೀಲಿಬಣ್ಣಕ್ಕೆ ತಿರುಗಬಹುದು. ಅಥವಾ ಈ ಯಾವ ಚರ್ಯೆಗಳು ಮಗುವಾಗಿದ್ದಾಗ ಕಾಣಿಸಿಕೊಳ್ಳದೆ ಗೋಪ್ಯವಾಗಿದ್ದು ದೊಡ್ಡವರಾದ ಮೇಲೆ ಕಾಣಿಸಿಕೊಳ್ಳಬಹುದು ಈ ರೋಗಕ್ಕೆ ತುತ್ತಾದ ಮಕ್ಕಳನ್ನು ಪರೀಕ್ಷಿಸಿ ಚಿಕಿತ್ಸೆ ಮಾಡಿಸಿದರೆ ಮಕ್ಕಳು ಬದುಕಿಕೊಂಡು ಸರಿಯಾದ ರೀತಿಯಲ್ಲಿ ಬೆಳೆಯುತ್ತವೆ.

ಅತಿ ಚಿಕ್ಕ ವಯಸ್ಸಿನಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ಹೃದ್ರೋಗವೆಂದರೆ ರೊಮ್ಯಾಟಿಕ್ ಹೃದ್ರೋಗ (Rheumatic Heart disease) ಈ ರೋಗ ಸುಮಾರು ೫ ವರ್ಷದಿಂದ ೨೦ ವರ್ಷದೊಳಗೆ ಈ ವಯಸ್ಸಿನ ಅಂತರದಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಗಂಟಲುನೋವು ಕಾಣಿಸಿಕೊಂಡ

ಮಕ್ಕಳಲ್ಲಿ ಈ ರೋಗವನ್ನು ಗುರ್ತಿಸಬಹುದು. ಸ್ಟ್ರೆಪ್ಟೋಕಾಕಲ್ (Strepto cocal) ಎಂಬ ಜೀವಾಣುಗಳಿಂದ ಈ ರೋಗವು ಉತ್ಪತ್ತಿಯಾಗುತ್ತದೆ. ಮೊದಲು ಗಂಟಲು ನೋವು ಕಾಣಿಸಿಕೊಂಡು ಅನಂತರ ಕೀಲುಗಳ ನೋವು ಪ್ರಾರಂಭವಾಗುತ್ತದೆ. ಕ್ರಮೇಣ ಈ ರೋಗವು ಹೃದಯವನ್ನು ಆಕ್ರಮಿಸುತ್ತದೆ. ಈ ರೋಗಕ್ಕೆ ತುತ್ತಾದ ಹೃದಯದ ಕವಾಟಗಳು ಸಂಕುಚಿತವಾಗಿ ದಿನೇದಿನೆ ನಾಶವಾಗುತ್ತವೆ. ಹೀಗೆ ಹೃದಯದ ಕವಾಟಗಳು ನಾಶವಾಗುವುದರಿಂದ ಹೃದಯ ತನ್ನ ಕಾರ್ಯವನ್ನು ನಿರ್ವಹಿಸಲಾಗದೆ ಸೋಲುತ್ತದೆ. ಈ ರೋಗವಿರುವ ಮಕ್ಕಳಲ್ಲಿ ಎದೆ ಬಡಿತ ಅತಿಯಾಗಿ ಕಾಣಿಸಿಕೊಳ್ಳಬಹುದು, ಕೈಕಾಲು ಊದಿಕೊಳ್ಳಬಹುದು ಈಲಿಯು ದೊಡ್ಡದಾಗಬಹುದು. ದಾರಿಯಲ್ಲಿ ನಡೆಯುವಾಗ ದಮ್ಮು ಬರಬಹುದು. ಈ ತೊಂದರೆಗಳಿಂದ ಮಕ್ಕಳ ಬೆಳವಣಿಗೆಯು ಸಹ ಕುಂಠಿತವಾಗುತ್ತದೆ. ಇವುಗಳನ್ನು ಕಂಜಸ್ಟೀವ್ ಹೃದ್ರೋಗ (Congestive Heart disease) ಎಂದು ಕರೆಯುತ್ತಾರೆ. ಈ ಕಾಯಿಲೆಗೆ ತುತ್ತಾದ ಮಕ್ಕಳನ್ನು ಪೂರ್ಣವಾಗಿ ಗುಣ ಪಡಿಸುವುದು ಬಹಳ ಕಷ್ಟವಾದರೂ ಆರೋಗ್ಯವನ್ನು ಮಾತ್ರ ಸುಧಾರಿಸಬಹುದು. ರೋಗವನ್ನು ಈ ತಡೆಗಟ್ಟಲು ಗಂಟಲು ನೋವು ಬಂದ ಪ್ರತಿಯೊಂದು ಮಗುವಿಗೂ ತಕ್ಷಣವೇ ಸರಿಯಾದ ಚಿಕಿತ್ಸೆ ಮಾಡಿಸಬೇಕು. ಗಂಟಲು ನೋವು ಕಾಣಿಸಿಕೊಂಡ ನಂತರ ಕೀಲುನೋವು ಬಂದರೆ ತಿಂಗಳಿಗೊಂದರಂತೆ ಪೆನಿಡ್ಯೂರ್ (Penidure) ಎಂಬ ಚುಚ್ಚುಮದ್ದನ್ನು ಬಹು ದಿನಗಳ ಕಾಲ (ಸುಮಾರು ಇಪ್ಪತ್ತು ವರ್ಷಗಳ ತನಕ) ಕೊಡಿಸುವುದರಿಂದ ಈ ಹೃದ್ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಬಹುದು.

ಮಕ್ಕಳಿಗೆ ಬರುವ ಮತ್ತೊಂದು ಹೃದ್ರೋಗ ಮಯೋಕಾರ್ಡೈಟಿಸ್ (Myocarditis) ಈ ರೋಗ ವೈರಸ್ ಎಂಬ ಜೀವಾಣುಗಳಿಂದ ಉತ್ಪತ್ತಿಯಾಗುತ್ತದೆ. ಈ ರೋಗಪೀಡಿತ ಹೃದಯ ತನ್ನ ಕಾರ್ಯ ನಿರ್ವಹಿಸುವಲ್ಲಿ ವಿಫಲವಾಗುತ್ತದೆ. ಈ ರೋಗ ಇರುವವರಿಗೆ ಜ್ವರ ಇರುತ್ತದೆ. ಎದೆಬಡಿತ ಜಾಸ್ತಿಯಾಗುತ್ತದೆ. ಅನಂತರ ಕಂಜೆಸ್ಟೀವ್ ಹೃದಯ ವಿಫಲತೆ ಕಾಣಿಸಿಕೊಳ್ಳುತ್ತದೆ.

ದೊಡ್ಡವರಲ್ಲಿ (ಸುಮಾರು ೪೫ ವರ್ಷದ ನಂತರ) ಕಾಣಿಸಿಕೊಳ್ಳುವ ಹೃದಯ ರೋಗಗಳಲ್ಲಿ ಬಹು ಮುಖ್ಯವಾದವು ಇವು:

೧ ಈಸ್ಕಿಮಿಕ್ ಹೃದ್ರೋಗ (Ischemic Heart disease)

೨ ಅಧಿಕ ರಕ್ತ ಒತ್ತಡದಿಂದ ಉಂಟಾಗುವ ಹೃದ್ರೋಗ (Hypertensive Heart disease)

೩ ಕಾರ್ಡಿಯೋಮಯೋಪತಿ ಹೃದ್ರೋಗ (cardiomyopathy Heart disease)

೪ ಸಿಫಿಲಿಟಿಕ್ ಹೃದ್ರೋಗ (Syphylitic Heart disease)

ಈಸ್ಕಿಮಿಕ್ ಹೃದ್ರೋಗ:

ಈ ರೋಗ ಸಾಮಾನ್ಯವಾಗಿ ಸಲವತ್ತೈದು ವರ್ಷವಾದ ನಂತರ ಕಾಣಿಸಿಕೊಳ್ಳುತ್ತದೆ. ಹೆಂಗಸರಲ್ಲಿ ಮುಟ್ಟು ನಿಂತ ನಂತರ ಕಾಣಿಸಿಕೊಳ್ಳುವ ಸಾಧ್ಯತೆಗಳೇ ಹೆಚ್ಚು. ವಯಸ್ಸಾದಂತೆ ಹೃದಯದ ರಕ್ತನಾಳಗಳ ಗಾತ್ರ ಕಮ್ಮಿಯಾಗಿ, ರಕ್ತಪರಿಚಲನೆಯ ಕಾರ್ಯ ಕಡಿಮೆಯಾಗುವುದರಿಂದ ಆಮ್ಲಜನಕದ ಕೊರತೆಯುಂಟಾಗಿ ಈ ರೋಗ ಕಾಣಿಸಿಕೊಳ್ಳುತ್ತದೆ. ಈ ರೋಗಕ್ಕೆ ತುತ್ತಾದ ರೋಗಿಗಳ ಹೃದಯವು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸದೆ ಹೃದಯಾಘಾತಕ್ಕೀಡಾಗುವ ಸಂಭವವೇ ಹೆಚ್ಚು. (Myocardial. Inefaurction) ಈ ಹೃದ್ರೋಗದ ರೋಗಿಗಳಿಗೆ ದಾರಿಯಲ್ಲಿ ನಡೆಯುವುದರಿಂದ ಎದೆನೋವು ಕಾಣಿಸಿಕೊಳ್ಳುವುದು ರೋಗದ ಮೊದಲ ಲಕ್ಷಣ. ಈ ಎದೆನೋವು ಸಾಮಾನ್ಯವಾಗಿ ಎದೆಯ ಮಧ್ಯಭಾಗದಲ್ಲಿ ಕಾಣಿಸಿಕೊಂಡು ಕೇವಲ ಮೂರ್ನಾಲ್ಕು ನಿಮಿಷಗಳು ಮಾತ್ರವಿರುತ್ತದೆ. ವಿಶ್ರಾಂತಿ ತೆಗೆದುಕೊಳ್ಳುವುದರಿಂದ ಈ ಎದೆನೋವು ತಾತ್ಕಾಲಿಕವಾಗಿ ಉಪಶಮನವಾಗಬಹುದು ಆನಂತರ ದಮ್ಮು ಕಾಣಿಸಿಕೊಳ್ಳಬಹುದು, ರಾತ್ರಿ ವೇಳೆಯಲ್ಲಿ ದಮ್ಮು ಕಾಣಿಸಿಕೊಂಡು, ಉಸಿರು ಕಟ್ಟಿದಂತಾಗಿ ನಿದ್ರಾಭಂಗವಾಗಬಹುದು. ಈ ರೋಗದಿಂದ ತೊಂದರೆಗೀಡಾದ ರೋಗಿಗಳ ಹೃದಯದ ರಕ್ತನಾಳಗಳನ್ನು ವಿಕಾಸಗೊಳಿಸುವ ಔಷಧಿಗಳನ್ನು ಉಪಯೋಗಿಸುವುದರಿಂದ ಈ ರೋಗದ ಉಪದ್ರವ ಕಮ್ಮಿಯಾಗುತ್ತದೆ. ಈ ಕಾಯಿಲೆಯನ್ನು ಪೂರ್ಣವಾಗಿ ಗುಣಪಡಿಸಲಾಗದಿದ್ದರೂ ಜೀವಾವಧಿಯವರೆಗೆ ಅಪಾಯವಿಲ್ಲದ ರೀತಿ ಇರಲು ಚಿಕಿತ್ಸೆ ಮಾಡಬಹುದು.

ರಕ್ತದ ಒತ್ತಡದಿಂದ ಉಂಟಾಗುವ ಹೃದ್ರೋಗ (Hypertensive Heart disease)

ಅಧಿಕ ಒತ್ತಡವಿರುವ ರೋಗಿಗಳ ಹೃದಯವು ದಿನೆ ದಿನೆ ಗಾತ್ರದಲ್ಲಿ ದೊಡ್ಡ

ದಾಗಿ ದಮ್ಮು ಕಾಣಿಸಿಕೊಂಡು ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸದೆ ಸೋಲುತ್ತದೆ. ರಾತ್ರಿವೇಳೆಯಲ್ಲಿ ಮಲಗಿರುವಾಗ ತಕ್ಷಣ ಉಸಿರು ಕಟ್ಟಿದಂತಾಗಿ ನಿದ್ರಾಭಂಗವಾಗಬಹುದು. ಹೃದಯದ ಎಡಭಾಗ ಸೋಲುವುದರಿಂದ ಈ ಮೇಲಿನ ಚರ್ಯೆಯು ಕಾಣಿಸಿಕೊಳ್ಳುತ್ತದೆ. ಸರಿಯಾದ ರೀತಿಯಲ್ಲಿ ರಕ್ತದ ಒತ್ತಡವನ್ನು ಸ್ಥಿಮಿತದಲ್ಲಿಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

ಕಾರ್ಡಿಯೋಮಯೋಪತಿ

ಈ ರೋಗದಿಂದ ನರಳುವ ರೋಗಿಗಳ ಸಂಖ್ಯೆ ಬಹಳ ಕಡಿಮೆ. ಈ ರೋಗಕ್ಕೆ ನಿರ್ದಿಷ್ಟವಾದ ಕಾರಣವೇನೆಂಬುದು ಇನ್ನೂ ತಿಳಿದುಬಂದಿಲ್ಲ. ನಿರ್ದಿಷ್ಟವಾದ ಔಷಧಿಯೂ ಇಲ್ಲ. ಈ ಖಾಯಿಲೆಗೆ ತುತ್ತಾದ ಹೃದಯ ಗಾತ್ರದಲ್ಲಿ ದೊಡ್ಡದಾಗಿ ಕಾರ್ಯ ನಿರ್ವಹಿಸುವಲ್ಲಿ ವಿಫಲವಾಗುತ್ತದೆ.

ಸಿಫಿಲಿಟಿಕ್ ಹೃದ್ರೋಗ

ರತಿರೋಗವಾದ ಸಿಫಿಲಿಸ್ ಖಾಯಿಲೆಯಿಂದ ನರಳುವ ರೋಗಿಗಳಲ್ಲಿ ಈ ಖಾಯಿಲೆಯು ಕಾಣಿಸಿಕೊಳ್ಳುತ್ತದೆ. ಈ ರೋಗ ಸಾಮಾನ್ಯವಾಗಿ ನಲವತ್ತೈದು ವರ್ಷಗಳ ಒಳಗೆ ಕಾಣಿಸಿಕೊಂಡರೂ ನಂತರ ಬರುವ ಸಾಧ್ಯತೆಯೂ ಇದೆ. ಈ ರೋಗಕ್ಕೆ ತುತ್ತಾದ ಹೃದಯದ ಆಯೋರ್ಟಿಕ್ ಕವಾಟ ನಾಶವಾಗಿ ಹೃದಯವು ಸಕ್ರಿಯವಾಗಿ ಕೆಲಸ ಮಾಡದೆ ಸೋಲುತ್ತದೆ. ಇದಕ್ಕೆ ಆಯೋರ್ಟಿಕ್ ಕವಾಟದ ವಿಫಲತೆ ಎಂದು ಕರೆಯುತ್ತಾರೆ. ಹೃದಯದ ರಕ್ತನಾಳಗಳು ಸಹ ಈ ಖಾಯಿಲೆಯಿಂದಾಗಿ ಅವುಗಳು ಗಾತ್ರದಲ್ಲಿ ಚಿಕ್ಕದಾಗಿ ಕೊನೆಗೆ ರಕ್ತನಾಳಗಳು ಮುಚ್ಚಿಹೋಗಿ ಹೃದಯವು ರಕ್ತಹೀನತೆಯಿಂದ ತೊಂದರೆಗೀಡಾಗುತ್ತದೆ. ಈ ಖಾಯಿಲೆಗೆ ತುತ್ತಾದ ರೋಗಿಗಳು ಸರಿಯಾದ ರೀತಿಯಲ್ಲಿ ಮೊದಲೇ ಪೆನ್ಸಿಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳುವುದರಿಂದ ಈ ರೋಗವನ್ನು ಉಪಶಮನಗೊಳಿಸಬಹುದೇ ವಿನಃ (ಆಯೋರ್ಟಿಕ್ ಕವಾಟದ ವಿಫಲತೆಯನ್ನು) ಸಂಪೂರ್ಣವಾಗಿ ಗುಣಪಡಿಸುವುದು ಬಹಳ ಕಷ್ಟ.

ಈ ಕೆಳಗಿನ ಚರ್ಯೆಗಳು ಕಂಡುಬಂದಲ್ಲಿ ಹೃದಯ ರೋಗವಿದ್ದರೂ ಇರಬಹುದು.

೧ ಎದೆಬಡಿತ ಜಾಸ್ತಿಯಾಗುವುದು.

೨ ಎದೆ ಬಡಿಯುವಾಗ ಕೆಲ ಕ್ಷಣ ಹೃದಯ ನಿಂತಂತೆ ಆಗುವುದು.

೩ ದಾರಿಯಲ್ಲಿ ನಡೆಯುವಾಗ ಎದೆನೋವು ಕಾಣಿಸಿಕೊಂಡು ವಿಶ್ರಾಂತಿಯ ನಂತರ ಪೂರ್ತಿ ಉಪಶಮನವಾಗುವುದು.

೪ ಆಯಾಸವಾದಾಗ ಶ್ರಮ ಸ್ವಲ್ಪ ಜಾಸ್ತಿಯಾದರೂ ದಮ್ಮು ಕಾಣಿಸಿಕೊಳ್ಳುವುದು.

೫ ಕೈಕಾಲು ಊದಿಕೊಳ್ಳುವುದು, ಪ್ರಜ್ಞೆ ತಪ್ಪುವುದು.


೬ ರಾತ್ರಿವೇಳೆಯಲ್ಲಿ ಗಾಢನಿದ್ರೆಯಲ್ಲಿರುವಾಗ ಉಸಿರು ಕಟ್ಟಿದಂತಾಗಿ ನಿದ್ರಾಭಂಗವಾಗುವುದು.

ಈ ಮೇಲಿನ ಯಾವುದೇ ಚಿಹ್ನೆಗಳು ಕಂಡುಬರುವವರಲ್ಲಿ ಹೃದಯ ರೋಗ ವಿದ್ದರೂ ಇರಬಹುದು.

ಹೃದಯ ರೋಗಿಗಳು ಅನುಸರಿಸಬೇಕಾದ ಸಾಮಾನ್ಯ ಸಲಹೆಗಳು

ತಜ್ಞವೈದ್ಯರ ಸಲಹೆ, ದೈಹಿಕವಾಗಿ ಅತಿಶ್ರಮವಾಗದ ಕೆಲಸ, ವ್ಯಾಯಾಮ ನಿಬಂಧನೆ, ಜಿಡ್ಡು ಪದಾರ್ಥಗಳನ್ನು ಆಹಾರದಲ್ಲಿ ನಿಷೇಧಿಸುವುದು, ಮಾನಸಿಕ ನೆಮ್ಮದಿ, ದೇಹದ ಗಾತ್ರವನ್ನು ಕಮ್ಮಿಮಾಡಿಕೊಳ್ಳುವುದು. ಆಹಾರದಲ್ಲಿ ಉಪ್ಪಿನ ಪ್ರಮಾಣವನ್ನು ಕಮ್ಮಿ ಮಾಡುವುದು.

ಡಾ॥ ಎಸ್. ಪಿ. ಯೋಗಣ್ಣ



ಧೈರ್ಯ, ವಿವೇಕ, ಜ್ಞಾನ ಮತ್ತು ಚಾತುರ್ಯಗಳುಳ್ಳವನು ಕಾರ್ಯದ ಪೂರ್ಣ ಫಲ ಪಡೆಯುತ್ತಾನೆ.

—ವಾಲ್ಮೀಕಿ

ಇರಾನಿನ ವೈದಿಕ ಋಷಿ ಜರತುಷ್ಟ್ರ

‘ಇರಾನ್’ ಶಬ್ದ ‘ಆರ್ಯ’ ಶಬ್ದದ ಪರಿವರ್ತಿತ ರೂಪವೇ ಆಗಿದೆ. ಆರ್ಯರು ಮಧ್ಯ ಏಷ್ಯಾದಿಂದ ಹೊರಟ ಆರ್ಯರು ಪ್ರಪ್ರಥಮವಾಗಿ ಇರಾನಿಗೇ ಬಂದರು. ಅನಂತರ ಭಾರತದ ಕಡೆಗೆ ಹೊರಟರು. ಇರಾನಿನಲ್ಲಿ ಮಹರ್ಷಿ ಜರತುಷ್ಟ್ರನು ತಳಹದಿಯನ್ನು ಹಾಕಿದ ಪಾರಸಿಧರ್ಮವು ವಾಸ್ತವದಲ್ಲಿ ವೈದಿಕ ಧರ್ಮವೇ ಆಗಿತ್ತು. ಮಹರ್ಷಿ ಜರತುಷ್ಟ್ರರು ಕ್ರಿ.ಪೂ. ೧೦ನೇ ಶತಮಾನ ಮತ್ತು ೬ನೇ ಶತಮಾನದ ಮಧ್ಯದಲ್ಲಿ ಇದ್ದವರು. ಅವರ ಜೀವನದ ಕತೆಗಳಿಂದ ಅವರಿಗೂ ವೈದಿಕ ಘಟನೆಗಳಿಗೂ ಅಭೂತಪೂರ್ವ ಸಂಬಂಧ ಇದೆ ಎಂದು ತಿಳಿದು ಬರುತ್ತದೆ. ‘ಋಗ್ವೇದ’ ಮತ್ತು ‘ಅವೇಸ್ತಾ’ದ ಸಮಾನತೆಯು ಅನೇಕ ರೂಪಗಳಲ್ಲಿ ಸ್ಥಿರಪಟ್ಟಿದೆ. ಆರ್ಯರಲ್ಲಿ ಹಸುವಿಗೆ ಬಹಳ ಪವಿತ್ರವಾದ ಸ್ಥಾನವಿದೆ. ಭೂಮಿಯಲ್ಲಿ ಕಷ್ಟಕಾಲ ಬಂದಾಗ ಅದು ಹಸುವಿನ ರೂಪ ತಳೆದು ಬ್ರಹ್ಮನ ಹತ್ತಿರಕ್ಕೆ ಹೋಗಿ ಪ್ರಾರ್ಥಿಸುತ್ತದೆ ಎಂದು ಆರ್ಯರು ನಂಬುತ್ತಾರೆ. ಜರತುಷ್ಟ್ರರು ಹುಟ್ಟುವ ಮೊದಲು ಹಸುವು ಬ್ರಹ್ಮನಿಗೆ ಇದೇ ಪ್ರಾರ್ಥನೆಯನ್ನು ಸಲ್ಲಿಸಿತ್ತು. ಇಂಥದ್ದೇ ಕತೆಗಳು ರಾಮ, ಕೃಷ್ಣ ಮತ್ತು ಇತರ ಅವತಾರಗಳ ಸಂಬಂಧದಲ್ಲಿ ಪ್ರಚಲಿತವಾಗಿವೆ. ಪೌರೂಷಸ್ಪ ಮತ್ತು ದುಗ್ಧೋವಾರಿ ಮನೆಯಲ್ಲಿ ಮಹಾತ್ಮ ಜರುತುಷ್ಟ್ರರು ಜನ್ಮತಾಳಿದರು. ಜರತುಷ್ಟ್ರರ ತಂದೆ-ತಾಯಿ ರಾಜವಂಶರಲ್ಲಿ ಸಂಬಂಧಿಸಿದವರು. ಭಾರತದ ಎಲ್ಲ ಅವತಾರಗಳು ರಾಜವಂಶಕ್ಕೆ ಸಂಬಂಧಿಸಿದವು. ಅವರು ಹುಟ್ಟಿದ ಸಮಯದಲ್ಲೂ ಕೂಡ, ಭಾರತದಲ್ಲಿ ಅನೇಕ ಅವತಾರಗಳು ಆಗುವಾಗ ನಡೆದಂತಹ ಚಮತ್ಕಾರವೇ ನಡೆದಿತ್ತು. ಬಾಲಕನಾದ ಜರತುಷ್ಟ್ರನು ಹುಟ್ಟುವಾಗಲೇ ಅಳುವ ಬದಲು ಮುಗುಳ್ನಕ್ಕನು ಮತ್ತು ಅವರ ಮುಖವು ಪ್ರಕಾಶಮಾನವಾಗಿತ್ತು. ಬಾಲ್ಯದಲ್ಲಿ ಅನೇಕ ಶತ್ರುಗಳು ಅವರಿಗೆ ತೊಂದರೆ ಉಂಟುಮಾಡಿದರು. ಆದರೆ ಜರತುಷ್ಟ್ರರು ಚಮತ್ಕಾರಗಳ ಮೂಲಕ ಅವರನ್ನು ಸೋಲಿಸಿಬಿಟ್ಟರು. ಈ ಎಲ್ಲ ಘಟನೆಗಳೂ ಕೃಷ್ಣನ ಬಾಲ್ಯದಲ್ಲಿನ ಘಟನೆಗಳನ್ನು ಹೋಲುತ್ತವೆ. ಇತರ ಅವತಾರಗಳ ಬಾಲ್ಯವೂ ಕೂಡ ಜರತುಷ್ಟ್ರರ ಬಾಲ್ಯವನ್ನು ಹೋಲುತ್ತವೆ.

ಜರತುಷ್ಟ್ರರು ೧೫ ವರ್ಷವವರಾದಾಗ ಪ್ರಪಂಚದಿಂದ ವಿರಕ್ತರಾಗಿ ಧ್ಯಾನ-

೧೯೮೪ರ ಫೆಬ್ರವರಿ ನವನೀತದಲ್ಲಿ ಪ್ರಕಟವಾದ ‘ಇರಾನಿನ ವೈದಿಕ ಋಷಿ, ಜರತುಷ್ಟ’ ಎಂಬ ಲೇಖನದ ಕನ್ನಡ ಅನುವಾದ.

ಉಪಾಸನೆ ಮಾರ್ಗವನ್ನು ಹಿಡಿದರು. ಆದರೆ ಅನೇಕ ರಾಕ್ಷಸರು, ಭಾರತೀಯ ಋಷಿಗಳಿಗೆ ವಿಘ್ನ ಉಂಟುಮಾಡಿದಂತೆ, ಇವರಿಗೆ ತೊಂದರೆ ಕೊಟ್ಟರು. ಆದರೂ ಅನೇಕ ಕಷ್ಟಗಳನ್ನು ಸಹಿಸಿ ಜರತುಷ್ಟ್ರರು ತಪಸ್ಸನ್ನು ಆಚರಿಸಿದರು. ದುಷ್ಟನಾದ 'ಅಹಿರಮನ'ನು 'ಸ್ಪಿತಾಮ' (ಇವರ ಮೊದಲ ಹೆಸರು)ಗೆ ಅನೇಕ ಪ್ರಲೋಭನೆಯನ್ನು ತೋರಿಸಿದರೂ ಇವರು ನಿಶ್ಚಲರಾಗಿದ್ದರು. ಇದರಿಂದಾಗಿಯೆ ಅವರ ಹೆಸರು 'ಜರತುಷ್ಟ' ಅಂದರೆ ಸುವರ್ಣದಂಥ ಪ್ರಕಾಶ ಎಂದಾಯಿತು. ಇದೇ ತರಹ ಸಿದ್ಧಾರ್ಥನ ಹೆಸರೂ 'ಬುದ್ಧ'ನೆಂದು ಆಯಿತು. ಜ್ಞಾನ ಪಡೆದ ನಂತರ ಜರತುಷ್ಟ್ರರು ಮೊದಲು ತನ್ನ ಕುಟುಂಬದವರಿಗೇ ಉಪದೇಶ ಕೊಟ್ಟರು. ಬುದ್ಧನಿಗೆ ಸಂಬಂಧಿಸಿದಂತೆಯೂ ಇದೇ ತರಹದ ಕತೆ ಇದೆ. ಇರಾನಿನಲ್ಲಿ ಅನೇಕ ವರ್ಷದವರೆಗೆ ಜರತುಷ್ಟ್ರರು ಧರ್ಮಪ್ರಚಾರ ಮಾಡಿದರು. ಆದರೆ ಅವರ ಚಿಕ್ಕಪ್ಪನ ಮಗನ ವಿನಹ ಬೇರೆ ಯಾರೂ ಇವರ ಧರ್ಮವನ್ನು ಸ್ವೀಕರಿಸಲಿಲ್ಲ. ಮೊದಲ ಬಾರಿಗೆ ಜರತುಷ್ಟ್ರರಿಗೆ ಬ್ಯಾಕ್ಟ್ರಿಯಾದಲ್ಲಿ ಜಯ ಉಂಟಾಯಿತು. ಅಲ್ಲಿಯ ರಾಜನು ಜರತುಷ್ಟ್ರನನ್ನು ತನ್ನ ಗುರುವನ್ನಾಗಿ ಮಾಡಿಕೊಂಡನು. ಇದಾದನಂತರ ಜರತುಷ್ಟ್ರರ ಅನುಯಾಯಿಗಳ ಸಂಖ್ಯೆ ಹೆಚ್ಚಾಯಿತು.

ಭಾರತದಲ್ಲಿ ಇರಾನಿ ಸಂಸ್ಕೃತಿಯ ಪ್ರಭಾವವು ಬಹಳ ಕಾಲದವರೆಗೂ ಇತ್ತು. ಏಕೆಂದರೆ ಅವೇಸ್ತಾ ಮತ್ತು ವೇದಗಳ ವಿಚಾರ ಧಾರೆಯಲ್ಲಿ ಬಹಳಷ್ಟು ಹೋಲಿಕೆ ಇದೆ. ಇವೆರಡರ ಸಂಸ್ಕೃತಿಯ ಮೂಲ ಉದ್ಗಮ ಒಂದೇ ಆಗಿತ್ತು. ವೇದಗಳಲ್ಲಿ ಧರ್ಮಕ್ಕೆ 'ಋತ' ಎಂಬ ಶಬ್ದವನ್ನು ಪ್ರಯೋಗಿಸಲಾಗಿತ್ತು. 'ಅವೇಸ್ತಾ'ದಲ್ಲಿ 'ಋತ'ಗೆ 'ಅಶ' ಎಂಬ ಶಬ್ದವನ್ನು ಪ್ರಯೋಗಿಸಲಾಗಿದೆ. ಅದು ಋತ್ ಶಬ್ದದ ಪರಿವರ್ತಿತ ರೂಪವೇ ಆಗಿದೆ. ವೇದಗಳಲ್ಲಿ ಸಮಾಜವನ್ನು ನಾಲ್ಕು ಭಾಗವಾಗಿ ವಿಭಜಿಸಿದಂತೆ ಅವೇಸ್ತಾವ ಕೂಡ ಅದೇ ರೀತಿಯಲ್ಲಿ ವಿಭಜಿಸಿ ಇಡಲಾಗಿದೆ. ಬ್ರಾಹ್ಮಣರಿಗೆ ಅಥರ್ವಾನ್, ಕ್ಷತ್ರಿಯರಿಗೆ ಅರ್ಥೇಸ್ಟಾರ್. ವೈಶ್ಯರಿಗೆ ವಾಸ್ತ್ರ್ಯೋಸ್ ಮತ್ತು ಶೂದ್ರರಿಗೆ 'ಹುಟೀಕ್ಷ' ಎಂಬ ಶಬ್ದಗಳು ಸಿಗುತ್ತವೆ. ಸಮಾಜದ ವ್ಯವಸ್ಥೆಯೂ ಕೂಡ ಅವೇಸ್ತಾ ಮತ್ತು ವೇದಗಳಲ್ಲಿ ಒಂದೇ ಸಮನಾಗಿದೆ. ಎರಡೇ ಭಾಷೆಗಳ ಮೂಲಸ್ಥಾನ ಒಂದೇ ಆಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಉಪನಯನ ನಡೆಯುತ್ತಿತ್ತು ಮತ್ತು ಈ ಸಂಸ್ಕಾರದಿಂದಲೇ ಬಾಲಕನು ದ್ವಿಜ ಅಂದರೆ ಎರಡನೆಯ ಜನ್ಮ ಪಡೆದವ ಎಂದು ಹೇಳಿಸಿಕೊಳ್ಳುತ್ತಿದ್ದ. ಅನಂತರ ಈ ಸಂಸ್ಕಾರವು ಹುಡುಗರಿಗೇ ಮೀಸ

ಲಾಯಿತು. ಆದರೆ ಪಾರಸಿ ಧರ್ಮದಲ್ಲಿ ಇದು ಹುಡುಗ-ಹುಡುಗಿಯರಿಬ್ಬರಿಗೂ ಅನ್ವಯಿಸುತ್ತದೆ. ಹಿಂದುಗಳಲ್ಲಿನ ಯಜ್ಞೋಪವೀತ, ಉಡಿದಾರ, ಜುಟ್ಟಿನ ಹಾಗೆಯೇ ಪಾರಸಿಗಳಲ್ಲಿಯೂ ಕೂಡ ಸುದ್ರೇಹ (ಪವಿತ್ರ ಉಡುಗೆ) ಕುಸ್ತಿ (ಉಡಿದಾರ) ಮತ್ತು ಟೋಪಿಯು ಬಳಕೆಯಲ್ಲಿದೆ.

ಇರಾನಿನಲ್ಲಿ ಜರತುಷ್ಟ್ರರಿಗೂ ಮೊದಲು ವೈದಿಕ ಧರ್ಮವು ಬಳಕೆಯಲ್ಲಿತ್ತು. ಆದರೆ ಪರಸ್ಪರ ಭಿನ್ನಾಭಿಪ್ರಾಯದ ಕಾರಣದಿಂದಾಗಿ ತೊಂದರೆ ಉಂಟಾಯಿತು. ಭಾರತದಲ್ಲಿ ಕೆಟ್ಟ ಜನರಿಗೆ 'ಅಸುರ' ಎಂದು ಕರೆದರೆ 'ಇರಾನಿನಲ್ಲಿ ಅವರನ್ನು 'ದೇವ' ಎಂದು ಕರೆಯಲಾಗುತ್ತಿತ್ತು. ಭಾರತದ ವೇದಗಳ ಕಾಲದ ದೇವತೆಗಳಾದ ಇಂದ್ರನು ಇರಾನಿನ ದೇವತೆಯೂ ಕೂಡ ಆಗಿದ್ದ. ಇರಾನಿನಲ್ಲಿ ಪ್ರಾಚೀನ ದೇವತೆಗಳಾದ ಇಂದ್ರ, (ವೃತ್ರಘ್ನ ಹನ) ನಾಸತ್ಯಾಸ, ವಿಧಾತ್ರ ಮತ್ತು ಇನ್ನೂ ಕೆಲವರನ್ನು ರಾಕ್ಷಸರೆಂದು ತಿಳಿಯುತ್ತಿದ್ದರು. ಆದರೆ ಹೋಮ (ಸೋಮ) ಹವಾರ (ಸೂರ್ಯ) ಮೋಂಥ (ಚಂದ್ರ) ಮಿಥರ (ಮಿತ್ರ) ಯಮ ಮುಂತಾದವರನ್ನು ಪೂಜಿಸುವುದು ಬಳಕೆಯಲ್ಲಿತ್ತು. ಕ್ರಮೇಣ ಇರಾನಿನಲ್ಲಿ ಮಹಾತ್ಮರು ಮತ್ತು ಸಜ್ಜನರ ಅವಹೇಳನೆ ಪ್ರಾರಂಭವಾಯಿತು. ಅದನ್ನು ಹೋಗಲಾಡಿಸಲು ಜರತುಷ್ಟ್ರರ ಅವತಾರವಾಯಿತು. ಗೀತೆಯಲ್ಲಿ ಹೇಳಿರುವ ಅವತಾರಕ್ಕೆ ಕಾರಣವೂ ಇದನ್ನು ಹೋಲುತ್ತದೆ. ಭಾರತದಲ್ಲಿನ ಶ್ರೀ ಕೃಷ್ಣನ ಜೀವನವೂ ಜರತುಷ್ಟ್ರರ ಜೀವನ ಮತ್ತು ಸಿದ್ಧಾಂತವನ್ನು ಸಂಪೂರ್ಣವಾಗಿ ಹೋಲುತ್ತದೆ. ಮಹಾಭಾರತದ ಕೃಷ್ಣ ಮತ್ತು ಜರತುಷ್ಟ್ರರು ಪರಸ್ಪರ ಸ್ನೇಹಿತರೆ ಎಂದನ್ನಿಸುತ್ತದೆ.

ಪಾರಸೀ ಸಾಹಿತ್ಯ :

ಇರಾನಿನ ಇತಿಹಾಸವಲ್ಲಿ ನಡೆದ ಎರಡು ಭೀಕರ ಯುದ್ಧಗಳು ಪ್ರಸಿದ್ಧವಾಗಿವೆ. ಅದರಲ್ಲಿ ಇರಾನ್ ಸೋತಿದ್ದಲ್ಲದೆ ಆ ಯುದ್ಧಗಳಲ್ಲಿ ಮಹತ್ವಪೂರ್ಣ ಸಾಹಿತ್ಯ ನಷ್ಟವಾಯಿತು. ಕ್ರಿ.ಪೂ. ೩೩೧ರಲ್ಲಿ ಅಲೆಗ್ಸಾಂಡರನು ಇರಾನನ್ನು ಸೋಲಿಸಿದನು. ಮತ್ತು ಕ್ರಿ.ಪೂ. ೬೫೧ರಲ್ಲಿ ಅರಬ್ಬರು ಇರಾನಿನಮೇಲೆ ಧಾಳಿ ಮಾಡಿದರು. ಆಗ ಸುರಕ್ಷಿತವಾದ ಕೆಲವೇ ಗ್ರಂಥಗಳಲ್ಲಿ ಯಸ್ನ(ಯಜ್ಞ) ಮುಖ್ಯವಾಗಿವೆ. ಈ ಗ್ರಂಥಗಳಲ್ಲಿ ಅನೇಕ ಅನುಷ್ಠಾನಗಳನ್ನು ವರ್ಣಿಸಲಾಗಿದೆ. ೭೨ ಭಾಗಗಳಲ್ಲಿ ದೊರೆತ ಯಸ್ನ ಗ್ರಂಥವಲ್ಲಿ ಜರತುಷ್ಟ್ರರಿಗೆ ಸಂಬಂಧಿಸಿದ ಕತೆಯು ಮುಖ್ಯವಾಗಿದೆ. ಈ ಗ್ರಂಥದಲ್ಲಿ ಅಹುನಾವೇತಿ, ಉಶ್ತಾವೇತಿ ಸ್ಪೇಂತ್ಮಾ

ಮೇನ್ಯು, ವಾಹುಕ್ಷರಸ್ಥ ಮತ್ತು ವಹಿಸ್ತಿ–ಇಸ್ತಿ' ಎಂಬ ಐದು ಕಣೆಗಳಿವೆ.

ಜರತುಷ್ಟನು ಈಶ್ವರ, (ಅಹುರಮಜ್ದ ಅಥವಾ ಹುರಮಜ್ದ). ಒಳಿತು–ಕೆಡಕು ಮತ್ತು ದಿನನಿತ್ಯದ ಆಚರಣೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ. ಹುರಮಜ್ದನು ಸರ್ವಶಕ್ತ ಮತ್ತು ಸರ್ವವ್ಯಾಪಕನೆಂದು ಜರತುಷ್ಟನು ಸ್ಪಷ್ಟವಾಗಿ ಹೇಳಿದ್ದಾನೆ. ಪ್ರಪಂಚ ಜನ್ಮ ತಾಳಿರುವುದೂ ಇದೇ ಕಾರಣದಿಂದಾಗಿದೆ. ಆದ್ದರಿಂದಲೇ ಜರತುಷ್ಟನು ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಬಹುದೇವವಾದವನ್ನು ತೀಕ್ಷ್ಣವಾಗಿ ಖಂಡಿಸಿ ಏಕೇಶ್ವರವಾದವನ್ನು ಸ್ಥಾಪಿಸಿದನು. ಉಪನಿಷತ್ತಿನ ನಿರ್ಗುಣ ಬ್ರಹ್ಮನಂತೆ ಜರತುಷ್ಟನು ಹುರಮಜ್ದನನ್ನು ಉಲ್ಲೇಖಿಸಿದ್ದಾರೆ. ಈಶ್ವರನನ್ನು ಧ್ಯಾನದ ಮೂಲಕ ಪಡೆಯಬಹುದು. ಹುರಮಜ್ದನನ್ನು ಪಡೆಯಲು ಆರು ಸೋಪಾನಗಳಿವೆ. ಅದನ್ನು ಕ್ರಮವಾಗಿ ಪಡೆಯುವ ಪ್ರಯತ್ನ ಮಾಡಬೇಕು. ಅಶವಹಿಸ್ತ, ವಹ್ರುಮಾನೋ, ಕಶಿಥ್ವೈರ್ಯ, ಸ್ಪೆಂತಾ ಆರ್ಮೈತಿ, ಹರ್ವೈತಾತ, ಅಮೇರಾತತ, ಎಂಬುದೇ ಆರು ಸೋಪಾನಗಳು. ಅಶ್‌ವಹಿಸ್ತ ಎಂದರೆ ದೈವಿ ಇಚ್ಛೆ ಎಂದರ್ಥ. ಅಶವಹಿಸ್ತ ಎಂದರೆ ದೈವೀಜ್ಞಾನ ಮತ್ತು ಕಶಥ್ವೈರ್ಯ ಎಂದರೆ ದೈವೀಕ್ರಿಯಾ ಎಂದು ಅರ್ಥ. ಈ ಆರು ಸೋಪಾನಗಳಲ್ಲಿ ಮೊದಲನೆ ಮೂರು ಸೋಪಾನಗಳು ಪುರುಷ ವರ್ಗ ಮತ್ತು ಕೊನೆಯ ಮೂರು ಸೋಪಾನಗಳು ಸ್ತ್ರೀ ಪಕ್ಷವನ್ನು ಸೂಚಿಸುತ್ತವೆ. ಇದೇ ರೀತಿಯಲ್ಲಿ ಇಚ್ಛೆ, ಜ್ಞಾನ ಮತ್ತು ಕ್ರಿಯಾ ಪುರುಷ ಪ್ರಧಾನ ಪಕ್ಷವಾಗಿದೆ. ಇತರ ಮೂರು ಸೋಪಾನಗಳು ನಾರಿಪ್ರಧಾನ ಸೋಪಾನಗಳಾಗಿದ್ದು ಭಾರತೀಯ ಧರ್ಮದ ಅರ್ಧನಾರೀಶ್ವರನ ಕಲ್ಪನೆಯನ್ನು ಸಾಕಾರಗೊಳಿಸುತ್ತದೆ. ಶೈವ–ದರ್ಶನದ ಸಾಮರಸ್ಯದ ಸಿದ್ಧಾಂತದಲ್ಲಿ ಇಚ್ಛಾ, ಜ್ಞಾನ ಮತ್ತು ಕರ್ಮದ ಸಮತ್ವದ ಪರವಾಗಿ ಹೇಳಲಾಗಿದೆ. ಈಶ್ವರನಲ್ಲಿ ಆಸಕ್ತಿ ಬರಬೇಕಾದರೆ ಈ ಗುಣ ಅತ್ಯಂತ ಅವಶ್ಯಕವಾಗಿದೆ.

ಪಾಪ ಮತ್ತು ಪುಣ್ಯ :

ಹುರಮಜ್ದನು ಮೊಟ್ಟಮೊದಲಿಗೆ ಪುಣ್ಯಾತ್ಮ ಮತ್ತು ಪಾಪಾತ್ಮಗಳೆಂಬ ಎರಡು ಆತ್ಮಗಳಿಗೆ ಜನ್ಮಕೊಟ್ಟನು. ಒಂದು ಜೀವನದ ಪರ್ಯಾಯವಾದರೆ ಮತ್ತೊಂದು ಮರಣದ ಪರ್ಯಾಯವಾಗಿದೆ. ಈ ದ್ವಂದ್ವವು ಅನಂತ ಕಾಲದವರೆಗೂ ನಡೆಯುತ್ತಿರುತ್ತದೆ. ಕೊನೆಗೆ ಪುಣ್ಯಕ್ಕೆ ಜಯವಾಗುತ್ತದೆ. ನಮ್ಮ ಪ್ರಾಚೀನ ಗ್ರಂಥಗಳಲ್ಲೂ ಇದರ ಚರ್ಚೆ ಇದೆ. ಜರತುಷ್ಟ್ರರ ಅಭಿಪ್ರಾಯದಂತೆ

ಮನುಷ್ಯನು ಭೌತಿಕ ಪದಾರ್ಥಗಳ ಲೋಭದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾ ಹೋದಂತೆ ಅವನು ಪಾಪದ ಮಡುವಿನಲ್ಲಿ ಬೀಳುತ್ತಾ ಹೋಗುತ್ತಾನೆ. ಇದೇ ವಿಚಾರಧಾರೆ ಉಪನಿಷತ್ತಿನ ಮಾಯೆ, ಬ್ರಹ್ಮ ಮತ್ತು ಜೀವಕ್ಕೆ ಸಂಬಂಧಿಸಿದ ಚರ್ಚೆಯನ್ನು ಹೋಲುತ್ತದೆ. ಅಂಗ್ರಮನ್ಯು ಅಥವಾ ಸೈತಾನ್ ಅಥವಾ ಮಾಯೆಯ ಭ್ರಮೆಯಿಂದ ಮುಕ್ತಿಯಿಂದ ಪಡೆಯಲು ಜ್ಞಾನದ ಆವಶ್ಯಕತೆ ಇದೆ. ಏಕೆಂದರೆ ನಿಜವಾದ ಜ್ಞಾನವು ಎಲ್ಲ ಭ್ರಮೆಗಳನ್ನೂ ನಾಶಪಡಿಸುತ್ತದೆ. ಇದು ಭಾರತೀಯ ದರ್ಶನ ಸಿದ್ಧಾಂತಕ್ಕೆ ಅನುಗುಣವಾಗಿದೆ.

ಪ್ರಪಂಚದಲ್ಲಿ ಇದ್ದುಕೊಂಡು ಕರ್ಮ ಮಾಡುವುದು ಅನಿವಾರ್ಯವಾಗಿದೆ. ಬಹುಶಃ ಗೀತೆಯಲ್ಲಿ ಇದೇ ಸಂದೇಶವನ್ನು ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿದನು. ಇರಾನಿನಲ್ಲಿ ಜ್ಞಾನಕ್ಕಿಂತ ಕರ್ಮಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಆದರೆ ಗೀತೆಯ ಉಪದೇಶದಂತೆ ಕರ್ಮಫಲದ ಮೇಲೆ ಆಸಕ್ತಿ ಹುಟ್ಟದಿರಲೆಂದು ಕರ್ಮವನ್ನು ಜನಸೇವೆಗಾಗಿ ಎಂದು ಸ್ವೀಕರಿಸಲಾಗಿದೆ. ಸೇವಾಭಾವನೆಯಿಂದ ಮಾಡಿದ ಕರ್ಮವೇ ಶ್ರೇಷ್ಠವಾಗಿದೆ. ಶುಷ್ಕಜ್ಞಾನದಿಂದ ಪ್ರಪಂಚಕ್ಕೆ ಏನೂ ಉಪಯೋಗವಿಲ್ಲ.

ಶಕ್ತಿಶಾಲಿ ಮಂತ್ರ:

ವೇದಗಳ ಮಂತ್ರದಂತೆ ಯಸ್ನದಲ್ಲೂ ಕೂಡ ಹುರಮಜ್ದನ ಮೂಲಕ ಪ್ರಪಂಚದ ಉತ್ಪತ್ತಿಗೆ ಅಹುನ ವೈರ್ಯಮಂಥ್ರ (ಮಂತ್ರದ, ಉಚ್ಚಾರಣೆ ಯನ್ನು ಉಲ್ಲೇಖಿಸಲಾಗಿದೆ. ಜರತುಷ್ಟ್ರನನ್ನು ಸೋಲಿಸಲು ಅಂಗ್ರಮನ್ಯು (ಸೈತಾನ)ನು ತನ್ನ ಸಂಪೂರ್ಣ ಶಕ್ತಿಯನ್ನು ಪ್ರಯೋಗಿಸಿದಾಗ ಹುರಮಜ್ದನು ಅಹುನವೈರ್ಯ ಮಂತ್ರವನ್ನು ಉಚ್ಚರಿಸಿದರು. ಅವೇಸ್ತಾದಲ್ಲಿ, ಈ ಮಂತ್ರ ವನ್ನು ಅತ್ಯಂತ ಶಕ್ತಿಶಾಲಿ ಮತ್ತು ಪವಿತ್ರ ಎಂದು ಪರಿಗಣಿಸಲಾಗಿದೆ. ಈ ಮಂತ್ರದ ಉಚ್ಚಾರಣೆಯಿಂದ ದೊಡ್ಡದೊಡ್ಡ ಸಿದ್ಧಿಗಳನ್ನು ಪಡೆಯಬಹುದು. ಮಂತ್ರವು ಹೀಗಿದೆ.

"ಭೂಮಿಯ ಮೇಲೆ ರಾಜನು ಸರ್ವಶಕ್ತನಾದಂತೆ ಋತು (ಋಷಿ) ತನ್ನ ಆಧ್ಯಾತ್ಮಿಕ ಇಚ್ಛಾಶಕ್ತಿಯಿಂದಾಗಿ ಸರ್ವಶಕ್ತನಾಗಿರುತ್ತಾನೆ. ಈಶ್ವರನಿಗಾಗಿಯೇ ಕೆಲಸ ಮಾಡುವವರಿಗೆ ಶ್ರೇಷ್ಠಜ್ಞಾನವು ಮತ್ತು ನಮ್ರ ಮತ್ತು ಸೇವಾಭಾವನೆ ಯಿಂದ ಕೆಲಸ ಮಾಡುವವರಿಗೆ ಶಕ್ಥ್ರಹುರ (ಶ್ರೇಷ್ಠಕರ್ಮ)ದ ಫಲವು ಸಿಗುತ್ತದೆ."

ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನಿಯನ್ನು ರಾಜನಿಗಿಂತ ಶ್ರೇಷ್ಠ ಎಂದು ತಿಳಿದಂತೆ ಇರಾನಿನಲ್ಲಿ ಅಧ್ಯಾತ್ಮ ವಿದ್ಯೆಯನ್ನು ತಿಳಿದವನನ್ನು ಶ್ರೇಷ್ಠನೆಂದು ಪರಿಗಣಿಸಲಾಗುತ್ತದೆ. ಜರತುಷ್ಟ್ರರ ಪ್ರಥಮ ಕತೆ ಅಹುನವೈತಿಯಲ್ಲಿ ಈ ಮಂತ್ರವನ್ನು ವಿವೇಚಿಸಲಾಗಿದೆ.

ಜರತುಷ್ಟ್ರರು ಈ ಮೂರು ಮುಖ್ಯವಾದ ಉಪದೇಶಗಳನ್ನು ಸಮಾಜಕ್ಕೆ ನೀಡಿದರು–ಹ್ಯುಮತ (ಸಮ್ಯಕ್ ವಿಚಾರ) ಹುಖ್ತ (ಸಮ್ಯಕ್ ವಾಣಿ) ಮತ್ತು ಹುವರಷ್ತ (ಸಮ್ಯಕ್ ಕರ್ಮ). ವೈದಿಕ ಸಾಹಿತ್ಯದಲ್ಲಿ ಮನಸಾ, ವಾಚಾ, ಕರ್ಮಣಾಗಳ ಮೂಲಕ ಸಾಧನೆಯನ್ನು ಮಾಡುವ ವಿಷಯವನ್ನು ವಿವೇಚಿಸಲಾಗಿದೆ. ಮನಸ್ಸು, ವಾಣಿ, ಕರ್ಮಗಳಮೇಲೆ ಸಂಯಮ ಇಟ್ಟು ನಿಷ್ಠೆಯಿಂದ ಕೆಲಸ ಮಾಡುವವನು ಶ್ರೇಷ್ಠತೆಯನ್ನು ಪಡೆಯುತ್ತಾನೆ.

ಜರತುಷ್ಟ್ರರ ಉಪದೇಶಗಳನ್ನು ಪ್ರಪಂಚದಲ್ಲಿ ಹರಡಲು ಅವರ ಅನುಯಾಯಿಗಳು ದೂರದೂರದವರೆಗೆ ಯಾತ್ರೆಗಳನ್ನು ಮಾಡಿದರು. ಈ ಧರ್ಮವು ಪ್ರಪಂಚದ ಅನೇಕ ದೇಶಗಳಲ್ಲಿ ಪ್ರಚಾರವಾದರೂ ಸ್ವತಃ ಇರಾನಿನಲ್ಲಿಯೇ ಈ ಸಂದೇಶವು ಲೋಪವಾಗತೊಡಗಿತು. ಅರಬ್‌ನಲ್ಲಿ ಇಸ್ಲಾಂ ಧರ್ಮದ ಪ್ರಚಾರದ ಕಾರಣವಾಗಿ ಪಾರಸೀಧರ್ಮ ಮಹತ್ವಹೀನವಾಯಿತು. ಪುನಃ ಪಾರಸೀ ಧರ್ಮದಲ್ಲಿ ಆಸ್ಥೆ ಇದ್ದವರು ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಇರಾನನ್ನು ಬಿಟ್ಟು ಸಮಾನ ಧರ್ಮದ ದೇಶದ ಭಾರತಕ್ಕೆ ಶರಣು ಹೋದರು. ಅವರು ತಮ್ಮ ಜೊತೆಯಲ್ಲಿ ಇರಾನಿನಿಂದ ತಂದ ಪ್ರಜ್ವಲಿತ ಪವಿತ್ರ ಅಗ್ನಿ ಈಗಲೂ ಕೂಡ ಬೊಂಬಾಯಿಯಿಂದ ೮೦ ಮೈಲಿ ದೂರದ ಉರವಾಡ ದೇವಸ್ಥಾನದಲ್ಲಿ ಪ್ರಜ್ವಲಿತಗೊಂಡಿದೆ. ಇರಾನಿನ ಪಾರಸಿಗಳು ಮತ್ತು ಭಾರತೀಯರ ಪೂರ್ವಜರು ಒಬ್ಬರೇ ಆದ್ದರಿಂದ ಇರಾನಿನಿಂದ ಬಂದ ಪಾರಸಿಗಳು ಭಾರತದಲ್ಲಿ ಸೇರಿಹೋದರು.

ಕೆ. ಶಾಂತಾಮಣಿ

ಭೀತರೂ ಅಶಕ್ತರೂ ಅವಸರದಲ್ಲಿ ಉತ್ಸಾಹವಿಡುವುದಿಲ್ಲ. ಉತ್ಸಾಹಿಗಳು ಮಾತ್ರವೇ ರಾಜ್ಯಸಂಪತ್ತನ್ನು ಅನುಭವಿಸುವರು.

—ಭಾಸ

ಅರಾಜಕತ್ವಕ್ಕೆ ಸ್ವಾತಂತ್ರ್ಯವೇ ಮದ್ದಲ್ಲದೇ ದಬ್ಬಾಳಿಕೆಯಲ್ಲ.

—ಎಡ್ಮಂಡ್ ಬರ್ಕ್

ಕಾಫಿ ಪಾನಾಸಕ್ತರಿಗೆ ಎಚ್ಚರಿಕೆ ಅಗತ್ಯವೆ?

ಕೆಫೀನ್ : ಮುಂಜಾನೆ ಗಡಿಯಾರದಲ್ಲಿ ಅಲಾರಮ್ ಹೊಡೆಯುತ್ತದೆ. ನೀವು ಎದ್ದು ತೂಕಡಿಸುತ್ತಲೆ ಅಡಿಗೆಮನೆಗೆ ತೆರಳುತ್ತೀರಿ. ಘಮಘಮಿಸುವ ಕೆಂದುಪುಡಿಯನ್ನು ನಿದ್ದೆಗಣ್ಣಿನಿಂದಲೆ ಅಳೆದುಹಾಕಿ ತಯಾರಿಸಿದ ದಿನದ ಮೊತ್ತಮೊದಲಕಪ್ ಕಾಫಿಯನ್ನು ಹೀರುತ್ತೀರಿ. ಒಂದು ಗಂಟೆಯೊಳಗಾಗಿ ನಿಮ್ಮ ಅಡ್‌ರೀನಲ್ ಗ್ರಂಥಿಗಳು ಎರಡು ಪ್ರಚೋದಕ ರಾಸಾಯನಿಕಗಳನ್ನು ನಿಮ್ಮರಕ್ತಕ್ಕೆ ಸೇರಿಸುತ್ತವೆ. ನಿಮ್ಮರಕ್ತದಲ್ಲಿ ಸಕ್ಕರೆಯ ಮಟ್ಟ ಹೆಚ್ಚಾಗುತ್ತದೆ. ರಕ್ತನಾಳಗಳ ಸಂಕುಚನದಿಂದಾಗಿ ನಿಮ್ಮರಕ್ತದ ಒತ್ತಡ ಸುಮಾರು ೧೦% ನಷ್ಟು ಏರುತ್ತದೆ. ಆದರೆ ನಾಡಿಮಿಡಿತದ ದಂ ಸ್ವಲ್ಪಮಟ್ಟಿಗೆ ಇಳಿಯುತ್ತದೆ. ಒಂದು ಕಪ್ "ಸ್ಟ್ರಾಂಗ್" ಕಾಫಿಯ ನಂತರ ಬಹುಜನರಂತೆಯೇ ನೀವೂ ಶ್ರಾಮಿಕಮಾನಸಿಕ ಕೆಲಸಗಳನ್ನು ನಿಮ್ಮ ಗರಿಷ್ಠ ಮಿತಿ ಮಟ್ಟದಲ್ಲಿ ಮಾಡಬಲ್ಲವರಾಗಿರುತ್ತೀರಿ.

ಇದಕ್ಕೆ ಕಾರಣ ಕೆಫೀನ್. ಭಾರತದ ಕಾಫಿಯ ಒಂದು ಕಪ್ಪಿನಲ್ಲಿ ಈ ಕ್ಷಾರ (ಆಲ್ಕಲಾಯ್ಡ್) ೧೦೦ ಮಿ.ಗ್ರಾಂ ನಷ್ಟು ಇರುತ್ತದೆ. ಸುಮಾರು ೬೦ ಬಗೆಯ ಸಸ್ಯಗಳಲ್ಲಿ ದೊರಕುವ ಕೆಫೀನ್ ಸಾವಿರಾರು ವರ್ಷಗಳಿಂದ ಮಾನವರಿಂದ ಬಳಸಲ್ಪಡುತ್ತಿದೆ.

ನಮ್ಮ ಚಾಕೊಲೇಟಿನ ಉತ್ಪಾದಕವಾದ ಹಾಗೂ ಕೆಫೀನ್‌ಭರಿತವಾದ ಕೋಕೋ ಬೀಜದಿಂದ ಭಟ್ಟಿ ಇಳಿಸಿದ ಸಾರವನ್ನು ಪುರಾತನವಾದ ಅಜ್‌ಟೆಕ್ ಜನಾಂಗ ಶಾಸ್ತ್ರೀಯ ಪಾನವಾಗಿ ಸೇವಿಸುತ್ತಿದ್ದರು. ಆಫ್ರಿಕದಲ್ಲಿ ಜನ ಇಂದಿನ "ಕೋಲ" ಪಾನೀಯಗಳ ಘಟಕವಾದ ಕೋಲ ಬೀಜವನ್ನು ಬಳಸುತ್ತಿದ್ದರು. ಇದೇ ರೀತಿ ಪ್ರಪಂಚದ ಬಹುಭಾಗದಲ್ಲಿ ಟೀ ಪಾನ ಕಂಡುಬರುತ್ತದೆ. ಭಾರತದ ಟೀ ಒಂದು ಕಪ್ಪಿನಲ್ಲಿ ೪೦ ಮಿ.ಗ್ರಾಂ ನಷ್ಟು ಕೆಫೀನ್ ಇದೆ.

ಕಾಫಿ ಮತ್ತು ಟೀಯನ್ನು ಕುಡಿಯುವ ಅನೇಕ ಜನಕೂಡ ಅನೇಕವೇಳೆ ತಮಗೆ ತಿಳಿಯದಂತೆಯೇ ಕೆಫೀನನ್ನು ಸೇವಿಸುವುದಿದೆ. ಭಾರತದಲ್ಲಿ ಬಳಸುವ ಕೋಲಪಾನೀಯಗಳಲ್ಲಿ ಪ್ರತಿ ಶೀಸೆಯಲ್ಲಿಯೂ ೩೫ ಮಿ.ಗ್ರಾಂ ಕೆಫೀನನ್ನು ಸೇರಿಸಿರುತ್ತಾರೆ. ಜೊತೆಗೆ ಜನಸಾಮಾನ್ಯ ಬಳಸುವ ಔಷಧೀಕಗುಳಿಗೆಗಳು

೧೯೮೪ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ "ಆಲ್ ಎಬೌಟ್ ಕೆಫೀನ್" ಎಂಬ ಲೇಖನದ ಅನುವಾದ.

ಮತ್ತು "ಪಿತ್ತ" ಸಂಬಂಧವಾದ ನೆಗಡಿ ಮಾತ್ರೆಗಳಲ್ಲಿಯೇ ಅಲ್ಲದೆ ಹಲ್ವಗಳು, ಘನೀಕರಿಸಿ ತಯಾರಿಸಿದ ಡೈರಿ ತಿನಿಸುಗಳು ಮತ್ತು ಬೇಯಿಸಿ ತಯಾರಿಸಿದ ಪದಾರ್ಥಗಳು ಇವುಗಳ ಸುವಾಸನೆ ಹಾಗೂ ರುಚಿಕಾರಕವಾಗಿಯೂ ಕೆಫೀನನ್ನು ಬಳಸುವುದಿದೆ.

ಇಷ್ಟು ಬಗೆಯಲ್ಲಿ ಕೆಫೀನನ್ನು ಬಳಸುವುದು ನಮ್ಮ ಆರೋಗ್ಯಕ್ಕೆ ಎಷ್ಟು ಮಟ್ಟಿಗೆ ಅಪಾಯಕಾರಿ ಎಂಬುದನ್ನು ವಿಜ್ಞಾನಿಗಳು ಇತ್ತೀಚೆಗೆ ಮಾತ್ರ ರುಜುವಾತು ಮಾಡಬಲ್ಲವರಾಗಿದ್ದಾರೆ. ಈ ಸಂದರ್ಭದಲ್ಲಿ ಎದ್ದಿರುವ ಕೆಲವು ಪ್ರಶ್ನೆಗಳನ್ನೂ ವೈಜ್ಞಾನಿಕ ವ್ಯಾಸಂಗಗಳಿಂದ ಅವುಗಳ ಬಗ್ಗೆ ತಿಳಿದುಬಂದಿರುವ ವಿಷಯಗಳನ್ನೂ ಈ ಕೆಳಗೆ ಹೇಳಿದೆ.

ಕೆಫೀನು ಚಟಕಾರಿಯೆ? ಕಾಫಿ ವ್ಯಸನಿಗಳ ಅತಿ ಸಾಮಾನ್ಯ ಸಮಸ್ಯೆ ನಿದ್ರೆ ಬಾರದಿರುವಿಕೆ. ಬಹಳ ಜನರಲ್ಲಿ ಕೆಫೀನು ಅವರು ನಿದ್ರಾವಶರಾಗುವ ಸಾಮರ್ಥ್ಯಕ್ಕೆ ಧಕ್ಕೆಯಾಗಿರುವುದು ವಿಶದವಾಗಿದೆ. ಕೇವಲ ೨ ಕಪ್ ಕಾಫಿ ಅವರನ್ನು ನಿದ್ರೆಬಾರದೆ ಎಚ್ಚೆತ್ತಿರುವಂತೆ ಮಾಡುತ್ತದೆ. ಒಂದು ರಾತ್ರಿಯ ನಿದ್ರಾನಾಶದಿಂದಾಗುವ ತೊಂದರೆಯನ್ನು ನೀವು ಗಮನಿಸಿ ಮಾರನೆ ದಿನ ಕೆಫೀನ್‌ಯುಕ್ತ ವಸ್ತುಸೇವನೆಯನ್ನು ಪೂರ್ಣವಾಗಿ ತ್ಯಜಿಸಲು ನಿರ್ಧರಿಸುತ್ತೀರಿ. ನೀವು ಹೆಚ್ಚು ಕಾಫಿ ಕುಡಿಯುವಂಥವರಾಗಿದ್ದರೆ ಅಂದು ಮಧ್ಯಾಹ್ನ ಕಳೆಯುವುದರೊಳಗಾಗಿಯೆ ಮಂಕಾಗಿಯೂ ಚಿಂತಾಕ್ರಾಂತರಾಗಿಯೂ ಆಗುತ್ತೀರಿ ಮತ್ತು ಸಿಡಿಯುವ ತಲೆನೋವೂ ಬರುತ್ತದೆ. ಕೆಫೀನ್ ವರ್ಜನೆಯನ್ನು ಮುಂದುವರಿಸಿದರೆ ಈ ತೊಂದರೆಗಳು ೨-೩ ದಿನಗಳು ಇದ್ದು ಮಾಯವಾಗುತ್ತವೆ.

ಹೀಗಾಗುವುದು ಏಕೆ? ನೀವು ಕೆಫೀನಿನ ಮೇಲೆ ಸ್ವಲ್ಪಮಟ್ಟಿಗೆ ಅವಲಂಭಿಸಿರುವುದಾದ್ದು ಪ್ರಸಕ್ತ ಕೆಫೀನಿನ ಅಭಾವ ಉಂಟಾಗುವುದರಿಂದ ಹೀಗೆ. ನೀವು ಕೆಫೀನಿನ ದಿನವಹಿ ಸೇವೆಯನ್ನು ಕ್ರಮೇಣ ತಗ್ಗಿಸಿದ್ದರೆ ಹೀಗೆ ಬಾಧೆ ಪಡಬೇಕಾಗುತ್ತಲೇ ಇರಲಿಲ್ಲ.

ಕೆಫೀನ್ ಚಟ ಹಿಡಿಸುವ ಸಾಮರ್ಥ್ಯವುಳ್ಳದ್ದೆಂಬ ವಿಷಯ ವಿಜ್ಞಾನಿಗಳಿಗೆ ಬಹುಕಾಲದಿಂದ ತಿಳಿದಿದೆ. ದಿನಂಪ್ರತಿ ಕಾಫಿ ಸೇವಿಸುವ ಅಭ್ಯಾಸವುಳ್ಳವರಲ್ಲಿ ೫೦% ಜನ ಕಾಫಿವ್ಯಸನಿಗಳಾಗಿ—ದೈಹಿಕ ಕ್ರಿಯೆಗಳಿಗೆ ತಕ್ಕಮಟ್ಟಿಗೆ ಕಾಫಿಯನ್ನು ಅವಲಂಭಿಸಿರುವವರಾಗಿ–ಇರುತ್ತಾರೆ. ಆದರೆ ಕಾಫಿಯ ಈ ಅಂಕುಶ ಸಾಮರ್ಥ್ಯದ ಗುಟ್ಟನ್ನು ಬಗೆಹರಿಸಲು ಗಾಲಗಿರಪ್ಪು ಈಚೆಗೆ ಮಾತ್ರ

ಪ್ರಾರಂಭಿಸಿದ್ದಾಗಿದೆ. ಬಾಲ್ಟಿಮೋರಿನ ಜಾನ್ಸ್‌ಹಾಪ್‌ಕಿನ್ಸ್ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ಡಾ. ಸಾಲೊಮನ್ ಸ್ನೈಡರ್ ಅವರ ನೇತೃತ್ವದಲ್ಲಿ ಸಂಶೋಧನಕಾರರು ಮಿದುಳಿನ "ರಾಸಾಯನಿಕ ದೂತ"ಗಳಲ್ಲಿ ಒಂದಾದ ಅಡಿನೊಸಿನಿಗೂ ಕೆಫೀನಿಗೂ ಅಸಾಧಾರಣವಾದ ಹೋಲಿಕೆ ಇರುವುದನ್ನು ಕಂಡುಹಿಡಿದರು. ಮಿದುಳುಕೋಶಗಳ ಗ್ರಾಹಕ ಸ್ಥಳಗಳಲ್ಲಿ (Receptors) ಅಡಿನೊಸೀನ್ ಅಣುಗಳು ಜೋಡಣೆ ಆದಾಗ ಅವು ಮಿದುಳಿನ ಇತರ ಉದ್ರೇಕಕಾರಕ ರಾಸಾಯನಿಕಗಳ ಪರಿಣಾಮಗಳನ್ನು ಅಡಗಿಸಿ ಕೋಶಗಳ ಚಟುವಟಿಕೆಯನ್ನು ಶಮನಗೊಳಿಸುತ್ತವೆ ಇಲ್ಲವೆ ತಟಸ್ಥವಾಗಿಸುತ್ತವೆ. ಈ ಗ್ರಾಹಕಸ್ಥಳಗಳಿಗೆ ಕೆಫೀನ್ ಅಂಟಿಕೊಂಡು ಅಡಿನೊಸೀನಿಗೆ ಅಡಚಣೆ ಮಾಡಿದರೆ ಅದರ ಕಾರ್ಯಾಚರಣೆ ತಪ್ಪಿಹೋಗುತ್ತದೆ. ಈ ರೀತಿ ಮಿದುಳಿನ ಸ್ವಂತ ಉದ್ರೇಕಕಾರಕ ರಾಸಾಯನಿಕಗಳು ಅಡಿನೊಸೀನಿನ ಪ್ರತಿರೋಧವಿಲ್ಲದೆ ಕಾರ್ಯವೆಸಗುವಂತೆ ಅವಕಾಶ ಮಾಡಿಕೊಟ್ಟು ಅಪ್ರತ್ಯಕ್ಷರಾಗಿ ಕೆಫೀನು ದೇಹವನ್ನೂ ಮನಸ್ಸನ್ನೂ ಪ್ರಭಾವಿಸುತ್ತದೆ.

ಮಿದುಳಿನ ಕೋಶಗಳು ಈ ಪರಿಸ್ಥಿತಿಗೆ ಶೀಘ್ರವಾಗಿಯೇ ಪ್ರತಿಕ್ರಿಯೆ ತೋರಿ ಕೆಫೀನ್ ಮತ್ತು ಅಡಿನೊಸೀನ್ ಎರಡಕ್ಕೂ ಅವಕಾಶವಿರುವಂತೆ ಹೊಸ ಹೊಸ ಗ್ರಾಹಕ ಕ್ಷೇತ್ರಗಳನ್ನು ಸೃಷ್ಟಿಸುತ್ತದೆ. ವ್ಯಕ್ತಿ ಹಠಾತ್ತಾಗಿ ಕೆಫೀನ್ ಸೇವನೆಯನ್ನು ನಿಲ್ಲಿಸಿದರೆ ಕೆಫೀನ್ ತೆರವು ಮಾಡುವ ಗ್ರಾಹಕ ಕ್ಷೇತ್ರಗಳನ್ನೆಲ್ಲ ಅಡಿನೊಸೀನೇ ಆಕ್ರಮಿಸಿಕೊಳ್ಳುತ್ತದೆ. ಆಗ ಮಿದುಳಿನ ಕೋಶಗಳು ಗರಿಷ್ಠ ಮಟ್ಟದಲ್ಲಿ ಅಡಗಿಸಲ್ಪಡುತ್ತವೆ. ಮತ್ತು ಕನಿಷ್ಠ ಮಟ್ಟದಲ್ಲಿ ಪ್ರಚೋದಿಸಲ್ಪಡುತ್ತವೆ. ರಕ್ತದ ಒತ್ತಡ ಕಡಿಮೆಯಾಗುತ್ತದೆ ಮತ್ತು ಅತಿಯಾಗಿ ಕಾಫಿ ಸೇವಿಸುವ ಅನೇಕರಲ್ಲಿ ಕೆಲವು ವೇಳೆ ತೀವ್ರ ತಲೆನೋವನ್ನು ಉಂಟುಮಾಡುತ್ತದೆ. ಇತರ ಲಕ್ಷಣಗಳು — ಮಂಕು, ಜಡತೆ, ಸಿಡುಕು, ಚಿಂತೆ– ಇವು **ಅಡಿನೊಸೀನ್** ಗ್ರಾಹಕಗಳ ಸಂಖ್ಯೆಯನ್ನು ಮಿದುಳು ಕಡಿಮೆ ಮಾಡಿಕೊಂಡು ಹೊಂದಿಕೊಳ್ಳುವವರೆಗೂ ಕಾಡುತ್ತವೆ. ರೂಢಿಬಿದ್ದ ಆಚರಣೆಯೊಂದರ ಹಠಾತ್ ಸ್ಥಗಿತದಿಂದ ಪ್ರಬಲ ತೊಂದರೆ ಸಂಭವಿಸಬಹುದಾದ ಇಂಥ ಲಘು ಅವಲಂಬನೆಯ ಕೇಡು ಅಗಣನೀಯ ಎಂಬುದು ಅನೇಕ ವೈದ್ಯತಜ್ಞರ ಅಭಿಪ್ರಾಯ.

ಕೆಫೀನ್ ನಿಮಗೆ ಕೇಡು ಮಾಡಬಲ್ಲದೆ ? : ಕೆಲವರು ಕಾಫಿ ಪಾನಾಸಕ್ತರಲ್ಲಿ ಸುಮಾರು ೧೦% ನಷ್ಟು ಜನ ಎರಡೂವರೆ ಕಪ್‌ಗಳಷ್ಟು ಕಾಫಿ ಕುಡಿದ ಮೇಲೆ (೨೦೦ ಮಿ.ಗ್ರಾಂ.ಗೂ ಮೇಲ್ಪಟ್ಟು ಕೆಫೀನ್) ಮನೋಕ್ಷೋಭೆ, ಆತಂಕ

ಹತ್ತಿಹತ್ತಿ ಬರುವ ಉಸಿರು ಇಂಥ ತೊಂದರೆಗಳನ್ನು ಅನುಭವಿಸುತ್ತಾರೆ. ಇನ್ನು ೧೦% ಮಂದಿಯಲ್ಲಿ ೧೦ ಕಪ್‌ಗಳಷ್ಟು "ಫಿಲ್ಟರ್" ಕಾಫಿ (೧೦೦೦ ಮಿ.ಗ್ರಾಂ. ಕೆಫೀನ್) ಒಬ್ಬ ವ್ಯಕ್ತಿ ಒಂದು ದಿನದಲ್ಲಿ ಸೇವಿಸಿದರೆ ಅವನಲ್ಲಿ ಅಲ್ಪವಾಗಿ ಮತಿಭ್ರಮಣೆ ಕಿವಿ "ಗುಂಯಿ" ಗುಟ್ಟುವುದು, ಮಿಂಚು ಹೊಳೆದಂತಾಗುವುದು, ಹೃದಯ ಮಿಡಿತದ ದರ ಅಡ್ಡಾದಿಡ್ಡಿಯಾಗಿ ವೇಗವಾಗುವುದು, ಉಸಿರು ಹತ್ತಿ ಹತ್ತಿ ಬಂದಂತಾಗುವುದು, ಸ್ನಾಯು ಬಿಗಿತ, ನಡುಕ ಮುಂತಾದ ನಂಜು ಲಕ್ಷಣಗಳು ಕಂಡುಬರುತ್ತವೆ. ಕೆಫೀನಿನ ಪ್ರಾಣಾಪಾಯ ಮಿತಿ ಸುಮಾರು ೧೦ ಮಿ. ಗ್ರಾಂ.ಗಳು. ಕೇವಲ ಕೆಲವೇ ಮಿನಿಟುಗಳಲ್ಲಿ ೧೦೦ ಕಪ್‌ಗಳಷ್ಟು ಕಾಫಿ ಸೇವಿಸಿದರೆ ಇಷ್ಟು ಕೆಫೀನ್ ದೇಹವನ್ನು ಸೇರಿದಂತಾಗುತ್ತದೆ.

ಕಾಫಿ ಆಜನ್ಮನ್ಯೂನತೆಗಳನ್ನು ಉಂಟುಮಾಡುತ್ತದೆಯೆ? ೧೨೨೦೫ ಜನ ಗರ್ಭಿಣಿಯರ ಮೇಲೆ ಹಾರ್ವರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವೊಂದು ವ್ಯಾಸಂಗವನ್ನು ಜರಗಿಸಿ ೧೯೮೨ನೆ ಜನವರಿ ೨೧ರಂದು ಪ್ರಕಟಿಸಿದ ವರದಿಯ ಪ್ರಕಾರ ಸ್ತ್ರೀ ವ್ಯಕ್ತಿ ಸೇವಿಸಿದ ಕೆಫೀನ್ನಿನ ಪ್ರಮಾಣಕ್ಕೂ ಆಜನ್ಮ ನ್ಯೂನತೆಗಳಿಗೂ ಸಂಬಂಧವಿಲ್ಲ. ಸಂಯುಕ್ತ ಸಂಸ್ಥಾನಗಳಲ್ಲಿ ಹಾಗೂ ಫಿನ್‌ಲ್ಯಾಂಡಿನಲ್ಲಿ ಮುಂದುವರಿಸಿದ ಇಂಥ ವ್ಯಾಸಂಗದಿಂದಲೂ ಇದೇ ತೀರ್ಮಾನಕ್ಕೆ ಬಂದಿರುವುದಾಗಿದೆ.

ಈ ಕ್ಷಾರ ಜರಾಯುವಿನ ಮೂಲಕ (Placenta) ಗರ್ಭಸ್ಥ ಶಿಶುದೇಹವನ್ನು ಸೇರುವ ವಿಷಯ ನಿಜವೇ ಆದ್ದರಿಂದ, ತಪ್ಪು ತಿಳಿವಳಿಕೆಯಾದರೂ ಚಿಂತೆ ಇಲ್ಲ. ಮುನ್ನೆಚ್ಚರಿಕೆಯಿಂದ ಇರುವುದು ವಾಸಿ, ಎಂದುಕೊಂಡು ಭಾವಿಮಾತೆ ಕೆಫೀನ್ ಸೇವನೆಯ ಪ್ರಮಾಣವನ್ನು ಕಡಿಮೆ ಮಾಡಲು ಇಚ್ಛಿಸಬಹುದು. ಆದರೆ ಕೆಫೀನ್ ಸೇವನೆಗೂ ಆಜನ್ಮ ನ್ಯೂನತೆಗಳಿಗೂ ಸಂಬಂಧ ಇಲ್ಲ ಎಂಬುದನ್ನು ಅತ್ಯುತ್ತಮ ಪರಿಶೋಧನೆಗಳು ಖಚಿತವಾಗಿಸಿವೆ.

ಕೆಫೀನ್ ಹೃದಯದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆಯೆ? ಹೃದಯಾಘಾತ ಪ್ರಸಂಗಗಳಲ್ಲಿ ಅತಿ ಸಾಮಾನ್ಯ ವಿಧವಾದ ರಕ್ತ ಕೊರತಾಜನ್ಯ ಹೃತ್‌ಸ್ನಾಯುನಾಶ (Myo-Cardial infarction) ಮತ್ತು ಕಾಫಿ, ಇವಕ್ಕೆ ಸಂಬಂಧಿಸಿದಂಥ ಎರಡು ವ್ಯಾಸಂಗಗಳನ್ನು ಬಾಸ್ಟನ್ ವಿಶ್ವವಿದ್ಯಾಲಯದ ವೈದ್ಯಕೇಂದ್ರದ ಡಾ. ಹರ್ಶಲ್‌ಜಿಕ್ ಮತ್ತು ಸಹೋದ್ಯೋಗಿಗಳು ೧೯೭೨–೭೩ರಲ್ಲಿ ಪ್ರಕಟಿಸಿದರು. ಪ್ರತಿದಿನ ೧ ರಿಂದ ೫ ಕಪ್‌ಗಳಷ್ಟು ಕಾಫಿ ಸೇವಿಸುವವರು, ಕಾಫಿ ಸೇವಿಸದೇ ಇರುವವರಿಗಿಂತ ೫೦%

ಹೆಚ್ಚಾಗಿ ಹೃದಯಾಘಾತಕ್ಕೆ ಈಡಾಗುತ್ತಾರೆ ಮತ್ತು ೬ಕ್ಕೂ ಹೆಚ್ಚು ಕಪ್ ಸೇವಿಸುವವರು ೧೧೦% ಹೆಚ್ಚು ಈಡಾಗುತ್ತಾರೆ ಎಂಬ ತೀರ್ಮಾನಕ್ಕೆ ಇವರು ಬಂದರು. ಮೇಲ್ನೋಟಕ್ಕೆ ಈ ತೀರ್ಮಾನ ಸರಿ ಎನ್ನಿಸಿತು; ಏಕೆಂದರೆ ವಾಸ್ತವವಾಗಿ ಕಾಫಿ ನಾಡಿಮಿಡಿತದ ವೇಗ ಹಾಗೂ ರಕ್ತದ ಒತ್ತಡಮೇಲೆ ಪ್ರಭಾವ ಉಳ್ಳದ್ದಾಗಿದೆ.

ಆದರೆ ವ್ಯಾಸಂಗಕ್ಕಾಗಿ ವ್ಯಕ್ತಿಗಳನ್ನು ಜೆಕ್ ಆಯ್ದುಕೊಂಡ ವಿಧಾನವನ್ನು ಪ್ರಶ್ನಿಸಿ ಇತರ ವಿಜ್ಞಾನಿಗಳು ಟೀಕಿಸಿದ್ದಾರೆ. ಕೆಫೀನು ಟೀಯಲ್ಲಿಯೂ ಇದೆ. ಆದರೆ ಟೀ ಸೇವನೆಗೂ ರಕ್ತಕೊರತಾಜನ್ಯ ಹೃತ್‌ಸ್ನಾಯುನಾಶಕ್ಕೂ ಸಂಬಂಧವಿಲ್ಲದಿರುವುದನ್ನು ಜೆಕ್ಕನೂ ಕಂಡಿದ್ದ ಎಂಬುದನ್ನು ಇವರು ಎಲ್ಲರ ಲಕ್ಷ್ಯಕ್ಕೂ ತಂದರು. ಕಾಫಿಯನ್ನು ಹೆಚ್ಚಾಗಿ ಸೇವಿಸುವ ರೂಢಿ, ಹೃದಯಕ್ರಿಯಾ ವಿಕಾರಗಳು ಎರಡೂ ಒಟ್ಟಿಗೆ ಕೆಲವು ವೈಯಕ್ತಿಕ ವೈಶಿಷ್ಟ್ಯಗಳ ಪರಿಣಾಮವಾಗಿರಬಹುದಾದ ಸಂಭವವನ್ನು ಜೆಕ್ ಕಡೆಗಾಣಿಸಿದ್ದು ಏಕೆ ಎಂದೂ ಇವರು ಪ್ರಶ್ನಿಸಿದರು.

ಇತರ ಪ್ರಮುಖ ವ್ಯಾಸಂಗಗಳೂ ಜೆಕ್ಕನ ನಿರ್ಣಯಗಳನ್ನು ಪ್ರತಿಷೇಧಿಸಿವೆ. ಫ್ರಾಮಿಂಗ್ ಹ್ಯಾಮಿನಲ್ಲಿ ಸಂಭವಿಸಿದ ಹೃದ್ರೋಗ ಪಿಡುಗಿನ ಅಧ್ಯಯನವನ್ನು ಸಂಶೋಧನಕಾರರು ಕೈಗೊಂಡು ೧೯೪೯ರಿಂದ ಮ್ಯಾಸಚೂಸೆಟ್ಸ್ ನಗರ ವಾಸಿಗಳನ್ನು ಇವರು ಪರೀಕ್ಷಿಸತೊಡಗಿದರು. ೫೧೦೦ಕ್ಕೂ ಮೇಲ್ಪಟ್ಟ ಸಂಖ್ಯೆಯಲ್ಲಿ ಜರಗಿಸಿದ ಈ ತನಿಖೆಯಲ್ಲಿ ಕಾಫಿಸೇವನೆಗೂ ಹೃದ್ರೋಗಗಳಿಗೂ ಏನು ಸಂಬಂಧವಿರುವುದೂ ವ್ಯಕ್ತವಾಗಲಿಲ್ಲ. ಹೀಗೆಯೇ ಜಾರ್ಜಿಯದ ೨೫೦೦ ಜನರ ಮೇಲೆ ಮತ್ತು ಚಿಕಾಗೋವಿನ ೧೭೦೦ ಜನರ ಮೇಲೆ ನಡೆಸಿದ ತನಿಖೆಗಳಲ್ಲು ಹೃದ್ರೋಗಕ್ಕೂ ಕಾಫಿ ಸೇವನೆಗೂ ಸಂಬಂಧವಿದೆ ಎಂದು ತೋರಿಸಲು ಸಾಧ್ಯವಾಗಲಿಲ್ಲ. ಕೆಫೀನು ಒಂದು ಮೆತುಉತ್ತೇಜಕವಾಗಿ ವರ್ತಿಸುವುದರಿಂದ ಕಾಫಿ ಪಾನಾಸಕ್ತರು ಹೃದಯಾಘಾತದಿಂದ ಚೇತರಿಸಿಕೊಳ್ಳುವ ಸಂಭವ ಕಾಫಿ ಕುಡಿಯದೆ ಇರುವವರಿಗಿಂಥ ಸಾಮಾನ್ಯವಾಗಿ ಹೆಚ್ಚಾಗಿಯೇ ಇವೆ ಎಂಬುದು ಜೆಕ್ಕನ ಅಧ್ಯಯನದಿಂದಲೇ ವಿಶದವಾಗುತ್ತವೆ ಎಂದೂ ಬೇರೆ ವಿಜ್ಞಾನಿಗಳು ವ್ಯಾಖ್ಯಾನಿಸಿರುವುದಿದೆ.

ಹೃದಯದಮಿಡಿತ ಅಡ್ಡಾದಿಡ್ಡಿಯಾಗಿರುವ ಎರಿತ್ಮಿಯ ಎಂಬ ಹೃದ್ರೋಗದಿಂದ ನರಳುವ ರೋಗಿಗಳು ಕಾಫಿ ಸೇವಿಸುವ ವಿಷಯದಲ್ಲಿ ವೈದ್ಯರ ಅಭಿಪ್ರಾಯ ಆಗತ್ಯ. ಏಕೆಂದರೆ ಅಧಿಕಪ್ರಮಾಣದಲ್ಲಿ ಕೆಫೀನ್ ಹೃದಯದ ಮಿಡಿತದ ಲಯಬದ್ಧತೆಯನ್ನು ವ್ಯತ್ಯಸ್ತಗೊಳಿಸಬಲ್ಲದು. ರಕ್ತದ ಒತ್ತಡ ಹೆಚ್ಚಾಗಿ

ಇರುವವರು ಕೂಡ ವೈದ್ಯರ ಸಲಹೆಯನ್ನು ಪಡೆಯಬೇಕು. ಏಕೆಂದರೆ ಕೆಫೀನ್ ಒತ್ತಡವನ್ನು ಮತ್ತಷ್ಟು ಏರಿಸಬಹುದು. ಪ್ರಾಣಿಗಳ ಮೇಲೆ ಜರಗಿಸಿರುವ ಅನೇಕ ಪ್ರಯೋಗಗಳಲ್ಲಿ ರಕ್ತದಲ್ಲಿನ ಅನಿರ್ಬಂಧಿತಮೇದೋ ಆಮ್ಲಗಳು, ಕೊಲೆಸ್ಟಿರಾಲ್ ಮತ್ತಿತರ ಮೇದಸ್ಸು ಅಂಶಗಳ ಮಟ್ಟವನ್ನು ಕೆಫೀನ್ ಏರಿಸುವುದು ತಿಳಿದುಬಂದಿದೆ. ಆದರೆ ಪ್ರಮುಖವಾದ ಬಹುವ್ಯಾಸಂಗಗಳಲ್ಲಿ ಕಾಫಿ ಪಾನಕ್ಕೂ ಹೃದ್ರೋಗಕ್ಕೂ ಸಂಬಂಧ ಇಲ್ಲ, ಇದ್ದರೂ ಅತ್ಯಲ್ಪ ಎಂದು ವಿಶದವಾಗಿದೆ.

ಕೆಫೀನ್ ಕ್ಯಾನ್ಸರನ್ನು ಉಂಟುಮಾಡುತ್ತದೆಯೆ?: ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತಿನ ಡಾ|| ಬ್ರ್ಯಯಾನ್ ಮ್ಯಾಕ್‌ಮೋಹನ್ ಮತ್ತು ಸಂಗಡಿಗರು ೧೯೮೧ರಲ್ಲಿ ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್ ಎಂಬ ನಿಯತಕಾಲಿಕದಲ್ಲಿ ಅಧ್ಯಯನ ಒಂದನ್ನು ಪ್ರಕಟಿಸಿದರು. ಅದರಿಂದ ತಿಳಿದುಬಂದಂತೆ ಶೀಘ್ರಮಾರಕ ಕ್ಯಾನ್ಸರುಗಳಲ್ಲಿ ನಾಲ್ಕನೇ ಸ್ಥಾನಪಡೆದಿರುವ ಮೇದೋಜೀರಕಾಂಗದ ಕ್ಯಾನ್ಸರ್ (Cancer of the Pancreas) ಸಂಭವಿಸುವುದು ದಿನಾ ಒಂದೆರಡು ಕಪ್ ಕಾಫಿಯಿಂದ ದ್ವಿಗುಣವಾಗುತ್ತದೆ ಮತ್ತು ೫ ಕಪ್ ಕಾಫಿಯಿಂದ ಮೂರರಷ್ಟಾಗುತ್ತದೆ.

ಮ್ಯಾಕ್‌ಮೋಹನ್ನನ ಅಧ್ಯಯನವನ್ನು ನಾಲ್ಕು ಪ್ರಮುಖ ವಿಜ್ಞಾನಿಗಳು ಕಟುವಾಗಿ ಟೀಕಿಸಿ ಜರ್ನಲ್ ಆಫ್ ಅಮೇರಿಕನ್ ಮೆಡಿಕಲ್ ಅಸೋಸಿಯೇಷನ್ ಎಂಬ ಇನ್ನೊಂದು ನಿಯತಕಾಲಿಕದಲ್ಲಿ ಪ್ರಕಟಿಸಿದರು. ಯೇಲ್ ವಿಶ್ವವಿದ್ಯಾಲಯದ ಡಾ. ಆಲ್ವಾನ್ ಫೀನ್‌ಸ್ಟೀನ್ ಮುಖ್ಯಸ್ಥರಾಗಿದ್ದ ಈ ನಾಲ್ಕು ವಿಜ್ಞಾನಿಗಳ ತಂಡ ಅಧ್ಯಯನಕ್ಕಾಗಿ ವ್ಯಕ್ತಿಗಳನ್ನು ಚುನಾಯಿಸುವಲ್ಲಿ ಪಕ್ಷಪಾತವಾಗಿರುವುದನ್ನು ನಿರೂಪಿಸಿದ್ದರಿಂದ ಮ್ಯಾಕ್‌ಮೋಹನ್ನನ ಅಧ್ಯಯನ ಫಲಿತಾಂಶಗಳು ಶಂಕಾಸ್ಪದವಾದವು. ಕ್ಯಾಲಿಫೋರ್ನಿಯದ ಲಾಜೊಲ್ಲದ ಸ್ಕ್ರಿಪ್ಸ್ ಕ್ಲಿನಿಕ್ ಮತ್ತು ರಿಸರ್ಚ್ ಫೌಂಡೇಷನ್ನಿನ ಡಾ. ಹಾರ್ವೆ ಗೋಲ್ಡ್‌ಸ್ಟೈನ್ ಎಂಬಾತ ವ್ಯಾಸಂಗವನ್ನು ಪುನರಾವರ್ತಿಸಿದಾಗ ಕಾಫಿಗೂ ಮೇದೋಜೀರಕಾಂಗದ ಕ್ಯಾನ್ಸರಿಗೂ ಏನು ಸಂಬಂಧವಿರುವುದೂ ಪತ್ತೆ ಆಗಲಿಲ್ಲ.

ನಿಯತವಾದ ಕಾಫಿ ಸೇವನೆ ಮನುಷ್ಯರ ಆರೋಗ್ಯದ ಮೇಲೆ ಬೀರಬಲ್ಲ ಪ್ರಭಾವದ ವ್ಯಾಸಂಗವನ್ನು ವಿಜ್ಞಾನಿಗಳು ಮುಂದುವರಿಸುತ್ತಿದ್ದಾರಾದರೂ ಕೆಫೀನ್ ರಹಿತ ಕಾಫಿ ಸೇವನೆಯಿಂದ ಆಗಬಹುದಾದ ಅಪಾಯವನ್ನೂ ಹಾಗೆಯೇ ತನಿಖೆ ಮಾಡುತ್ತಿದ್ದಾರೆ.

ಕಾಫಿಯಿಂದ ಕೆಫೀನನ್ನು ತೆಗೆದುಬಿಡಲು ಲೀನಕಾರಿ ದ್ರವಗಳನ್ನು ಬಳಸುವ ವಿಧಾನಗಳನ್ನು ಅಳವಡಿಸಿರುವುದಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಆಹಾರ ಮತ್ತು ಔಷಧ ಇಲಾಖೆಯವರು ಕ್ಯಾನ್ಸರ್‌ಕಾರಕವೆಂದು ನಿಷೇಧಿಸುತ್ತೇವೆ ಎಂದು ೧೯೭೬ರಲ್ಲಿ ಹೆದರಿಸುವ ತನಕ ಟ್ರೈಕ್ಲೋರೊಎಥಿಲೀನ್ ಎಂಬುದು ಲೀನಕಾರಿ ದ್ರವವಾಗಿ ವಿಶೇಷವಾಗಿ ಬಳಸಲ್ಪಡುತ್ತಿತ್ತು. ಅಲ್ಲಿಂದೀಚೆಗೆ ಕಂಪೆನಿಗಳು ಕಾಫಿಯಲ್ಲಿನ ೯೭% ಕೆಫೀನನ್ನು ಮೆಥಿಲೀನ್ ಕ್ಲೋರೈಡ್ ಎಂಬ ಲೀನಕಾರಿಯಿಂದ ತೆಗೆಯುತ್ತಿವೆ. ಈ ದ್ರವದಲ್ಲಿ ಕಾಫಿಯನ್ನು ಸಂಸ್ಕರಿಸಿದ ಮೇಲೆ ಅದನ್ನು ಚೆನ್ನಾಗಿ ತೊಳೆಯುತ್ತಾರಾದರೂ ಬಹುಶಃ ಅಪಾಯಕಾರಿಯಾಗಿರುವಷ್ಟು ಶೇಷ ಉಳಿದೇ ಇರುತ್ತದೆಂದು ಕೆಲವು ಸಂಶೋಧಕರು ಎಚ್ಚರಿಸಿರುತ್ತಾರೆ. ಹೀಗೆ ಕಿಂಚಿತ್ ಶೇಷ ಉಳಿಯುತ್ತದೆಂಬುದನ್ನು ನ್ಯಾಷನಲ್ ಕಾಫಿ ಸಂಸ್ಥೆ (ಅಮೇರಿಕದಲ್ಲೇ) ಒಪ್ಪಿರುವುದಾದರೂ ದಿನಕ್ಕೆ ಎರಡೂವರೆ ಕೋಟಿ ಕಪ್‌ಗಳಷ್ಟು (ಟೀ) ಕೆಫೀನ್‌ರಹಿತ ಕಾಫಿಯನ್ನು ಕುಡಿದಾಗ ಮಾತ್ರ ಆ ಶೇಷದ ದುಷ್ಪರಿಣಾಮ ಕಂಡುಬರುತ್ತದೆ ಎಂದು ಆ ಸಂಸ್ಥೆಯ ವೈಜ್ಞಾನಿಕರು ಅಂದಾಜಿಸಿದ್ದಾರೆ.

ಸ್ವೀಡನ್ನಿನ ಉಪ್ಸಲ ವಿಶ್ವವಿದ್ಯಾಲಯದ ತಳಿ ವಿಜ್ಞಾನಿಯೂ ಕೆಫೀನ್ ಸಂಶೋಧಕರಲ್ಲಿ ವಿಶ್ವಾದ್ಯಂತ ಪ್ರಮುಖರಾಗಿರುವವರಲ್ಲಿ ಒಬ್ಬನೂ ಆದ ಜೆಂಗ್ಟ್ ಕಿಡ್ಲ್ಮನ್ ಎಂಬಾತ ಕೆಫೀನಿನ ವಿಷಯವಾಗಿ ಬಹುಶಃ ಕೊನೆ ಮಾತಾಗಿ ಹೀಗೆ ಅಭಿಪ್ರಾಯಪಡುತ್ತಾನೆ.

ಎಲ್ಲಾ ಸಾಕ್ಷ್ಯಾಧಾರಗಳನ್ನು ತುಲನೆ ಮಾಡಿದಾಗ ಗರ್ಭಿಣಿಯರಿಗೆ ಮತ್ತು ಅನಿಯತ ಹೃದಯಮಿಡಿತದಂಥ ವಿಶೇಷವಾದ ಆರೋಗ್ಯ ಅವ್ಯವಸ್ಥೆಗಳು ಇರುವವರಿಗೆ ಮಾತ್ರ ನಿಯತವಾದ ಅಧಿಕ ಕಾಫಿಪಾನದಿಂದ ಗಂಡಾಂತರವಿರಬಹುದು ಎನ್ನುವ ಮಾತು ಕೂಡ ಬಲು ದೂರಾಲೋಚನೆಯದು ಎಂದು ಈತ ಬರೆದಿದ್ದಾನೆ. ಮಿಕ್ಕವರಲ್ಲಿ ಅಪಾಯಗಳು ಅಗಣನೀಯ ಅಥವಾ ಇಲ್ಲವೇ ಇಲ್ಲ ಎನ್ನಬಹುದಾದ್ದರಿಂದ ಅನುಕೂಲಾನುಕೂಲಗಳನ್ನು ತುಲನೆ ಮಾಡುವುದು ಕಷ್ಟಕೆಲಸವಲ್ಲ: ಕೆಫೀನನ್ನು ದೋಷವಿಮುಕ್ತವಾಗಿ ಮಾಡಬಹುದು.

ಎಸ್. ರಾಮರಾವ್

ಗಾಳಿಗೊಡ್ಡಿದ ಸೊಡರು ಈ ಸಂಸಾರವೇಳಿಗೆಯು.

—ಕನಕದಾಸರು

ಬೊಮ್ಮರಮ್ಮನ ಹಬ್ಬ

ನಗುವನಹಳ್ಳಿಯಿಂದ ಸುಮಾರು ಒಂದು ಮೈಲಿ ದೂರದಲ್ಲಿ ಬೊಮ್ಮರಮ್ಮ ನೆಲಸಿದ್ದಾಳೆ. ಮೈಸೂರು, ಬೆಂಗಳೂರಿಗೆ ಹೋಗುವ ರಸ್ತೆಯ ಪಕ್ಕ ನಗುವನಹಳ್ಳಿಗೆ ಹೋಗುವ ಹೆದ್ದಾರಿಯ ವಿರಿಜಾನಾಲೆಯ ಕೆಳಗೆ ಅಂದರೆ ಅರ್ಧ ಫರ್ಲಾಂಗ್ ದೂರದಲ್ಲಿ ಆ ದೇವತೆ ನೆಲಸಿದ್ದಾಳೆ. ಇವರ ಇತಿಹಾಸ ಮತ್ತು ಐತಿಹ್ಯವನ್ನು ವಿಮರ್ಶೆ ಮಾಡಿದಾಗ, ಹಿರಿಯವರಾದವರಿಂದ ಈ ದೇವತೆಯ ವಿಷಯ ಈ ರೀತಿ ತಿಳಿದು ಬಂದಿದೆ.

ಬಹಳ ವರ್ಷಗಳ ಹಿಂದೆ ಈಗ ಕಾಣುತ್ತಿರುವ ಹಳೆಮನೆ ಮತ್ತು ಗೋಡೆಗಳು ಇದ್ದ ಜಾಗ ಒಂದು ಊರಾಗಿತ್ತು. ಬಹಳ ದೊಡ್ಡದಾದ, ಹಳೆಯ ಕಾಲದ ಇಪ್ಪತ್ತು ಮೂವತ್ತು ಅಂಕಣದ ತೊಟ್ಟಿ ಮನೆಗಳು ಇದ್ದುವು. ಮೊಟ್ಟಮೊದಲು ಈ ಜಾಗದಲ್ಲಿದ್ದ ಕಲ್ಲು ಮುಳ್ಳು ತೆಗೆದು, ತರಗನ್ನು ಗುಡಿಸಿ ನೆಲಸಮ ಮಾಡಿದ ವ್ಯಕ್ತಿ ಎಂದರೆ ಕೊಡಗಿನ ವೀರತ್ತಯ್ಯ. ಈತನು ಜಾತಿಯಲ್ಲಿ ಈಡಿಗರವನು.

ಆ ಪ್ರದೇಶವು ದೊಡ್ಡ, ದೊಡ್ಡ ಮರಗಳಿಂದ ಮತ್ತು ಈಚಲು ಗಿಡಗಳಿಂದ ತುಂಬಿತ್ತು. ಅಲ್ಲಿ ಸಕಲ ಸೌಕರ್ಯವೂ ಸಿಕ್ಕುತ್ತದೆ ಎಂಬ ವಿಷಯವನ್ನು ಕೇಳಿದ ಕೊಡಗಿನ ವೀರತ್ತಯ್ಯನು ಇಲ್ಲಿಗೆ ಬಂದನು. ಈತನು ಕೂಲಿ ಕೆಲಸ ಮಾಡುವವನು. ಆದ್ದರಿಂದಲೇ ಕೊಡಗಿನಿಂದ ಇತ್ತ ಕಡೆಗೆ ವಲಸೆ ಬಂದನು. ಈ ಕಾಡನ್ನು ನೋಡಿ ತನಗೆ ತಕ್ಕ ಜಾಗವೆಂದು ಭಾವಿಸಿ ತನ್ನ ಹೆಂಡತಿಯನ್ನು ಕರೆದುಕೊಂಡು ಬಂದು, ಕಾಡಿನ ಮಧ್ಯೆ ಒಂದು ಗುಡಿಸಲನ್ನು ಕಟ್ಟಿ ನೆಲೆಸಿದನು. ಅವನು ಬಹಳ ಒಳ್ಳೆಯವನಾಗಿಯೂ ಸತ್ಯವಂತನಾಗಿಯೂ ಇದ್ದನು. ಕಾಡಿನಲ್ಲಿ ಸಿಕ್ಕುವ ಕೆಲವು ಮರಗಳಿಂದ ಹೆಂಡ ಇಳಿಸುವುದು, ಮಾರಿ ಬಾಳುವುದು, ಈ ರೀತಿ ಜೀವನ ಕಳೆಯುತ್ತಿದ್ದನು. ಆಗಿನ ಕಾಲದಲ್ಲಿ ಈಗ ಇರುವ ಗಡಿಗಳಿರಲಿಲ್ಲ. ಎಲ್ಲಾ ಕಾಡು ಗಿಡಗಂಟಿಗಳಿಂದ ತುಂಬಿತ್ತು. ಕೊಡಗಿನಲ್ಲಿದ್ದಾಗ, ವೀರತ್ತಯ್ಯನು ಕೊಡಗಿನ ಆರಾಧ್ಯ ದೇವತೆಯಾದ ಕಾವೇರಮ್ಮನಿಗೆ ಕೈ ಮುಗಿದು ನಂತರ ತನ್ನ ಕೆಲಸಕ್ಕೆ ಹೋಗುತ್ತಿದ್ದನು.

ಈ ಕಾಡಿನ ಮಧ್ಯದಲ್ಲಿರುವ ತನ್ನ ಗುಡಿಸಿಲಿಗೆ ಒಂದು 'ಫೋಟೋ' ಬೇಕೆಂದು ಚಾಮುಂಡೇಶ್ವರಿಯ 'ಫೋಟೋ' ಒಂದನ್ನು ಕೊಂಡು ತಂದನು. ದಿನ ನಿತ್ಯವೂ ಚಾಮುಂಡೇಶ್ವರಿಯನ್ನು ಪೂಜಿಸುತ್ತಿದ್ದನು. ಆ ದಂಪತಿಗಳು ಪ್ರತಿನಿತ್ಯವೂ ಭಕ್ತಿಯಿಂದ ಪೂಜೆ ಮಾಡಿದ ನಂತರವೇ ತಮ್ಮ ತಮ್ಮ ಕೆಲಸಕ್ಕೆ

ಹೋಗುತ್ತಿದ್ದರು. ಹೀಗೆ ಎಷ್ಟೋ ದಿನ ಕಳೆಯಿತು. ಇವರ ಗುಡಿಸಿಲಿಗೆ ಒಂದೂವರೆ ಫರ್ಲಾಂಗ್ ದೂರದಲ್ಲಿ ಒಂದು ಬಲಿತ ಈಚಲ ಮರವಿತ್ತು. ಹೆಂಡ ಇಳಿಸುವ ಕೆಲಸ ವೀರತ್ತಯ್ಯನದು. ಆದ್ದರಿಂದ ಆ ಮರ ನೋಡಿದ ಕೂಡಲೇ ಹೆಂಡ ಇಳಿಸಲು ಮರಹತ್ತಿ ಮರ ಕೊರೆಯುತ್ತಿದ್ದನು. ಆಗ ವೀರತ್ತಯ್ಯನಿಗೆ ಬಹಳ ದಾಹ ಆಗಿ ಸುತ್ತಮುತ್ತ ನೀರಿಗಾಗಿ ಹುಡುಕಾಡಿದನು. ಎಲ್ಲೂ ನೀರು ಕಾಣಿಸದೆ ಕಂಗಾಲಾದನು. ಮತ್ತೆ ಮರದ ಮೇಲೆ ನಿಂತು ನೀರನ್ನು ಹುಡುಕಾಡಿದನು. ಅಲ್ಲಿ ಬಹಳ ದೂರದಲ್ಲಿ ಹಕ್ಕಿಗಳು ಹಾರಾಡುವುದನ್ನು ಕಂಡನು. ಅಲ್ಲೇನಾದರೂ ನೀರು ಇರಬಹುದೆಂದು ಅಲ್ಲಿಗೆ ಹುಡುಕಿಕೊಂಡು ಹೋದನು. ಅಲ್ಲಿ ಒಂದು ದೊಡ್ಡದಾದ ಪೊದೆ. ಅದಕ್ಕೆ ಸೇರಿದಂತೆ ಒಂದು ಕಲ್ಲುಮಂಟಪದೊಳಗೆ ಆಂಜನೇಯಸ್ವಾಮಿ ವಿಗ್ರಹವಿತ್ತು. ಅದರ ಪಕ್ಕದಲ್ಲಿ ಒಂದು ಚಿಕ್ಕದಾದ ಕೊಳವಿತ್ತು. ಬಹಳಷ್ಟು ಪಾಚಿಕಟ್ಟಿಕೊಂಡು ಹತ್ತಿರಕ್ಕೆ ಹೋಗಲು ಆಗದಷ್ಟು ಮುಳ್ಳು ಗಿಡಗಳಿಂದ ಬೆಳೆದುಕೊಂಡಿತ್ತು.

ಆ ದೃಶ್ಯವನ್ನು ಕಂಡ ವೀರತ್ತಯ್ಯನಿಗೆ ಆನಂದ ಹೇಳತೀರದು. ಹೇಗೊ ಕಷ್ಟಪಟ್ಟು ಮುಳ್ಳನ್ನೆಲ್ಲಾ ಕತ್ತರಿಸಿ ಕೊಳಕ್ಕೆ ಇಳಿಯಲು ಜಾಗ ಮಾಡಿದನು. ದಾಹ ಇಂಗುವವರೆಗೂ ನೀರು ಕುಡಿದು, ಎಷ್ಟೋ ಘಂಟೆಗಳ ಕಾಲ ಅಲ್ಲೇ ಕುಳಿತ ನಂತರ ಮನೆಗೆ ಬಂದನು. ನಡೆದ ವಿಚಾರವನ್ನೆಲ್ಲಾ ತನ್ನ ಹೆಂಡತಿಗೆ ತಿಳಿಸಿ, ಮತ್ತೆ ಇಬ್ಬರೂ ಬಂದು ಅಲ್ಲಿ ಬೆಳೆದಿದ್ದ ಮುಳ್ಳನ್ನೆಲ್ಲಾ ಕತ್ತರಿಸಿ, ಆಂಜನೇಯಸ್ವಾಮಿಯ ದರ್ಶನ ಮಾಡಿದರು. ಈ ಸ್ವಾಮಿಯ ದರ್ಶನ ನಮ್ಮ ಭಾಗ್ಯವೆಂದು ಪ್ರತಿ ದಿನವೂ ಬಂದು ಸ್ವಾಮಿಯ ದರ್ಶನ ಮಾಡುತ್ತಿದ್ದರು.

ಹೀಗೆ ಕಾಲ ಕಳೆಯುತ್ತಿರಲು ಒಂದು ದಿನ ರಾತ್ರಿ ವೀರತ್ತಯ್ಯನ ಹೆಂಡತಿಗೆ ಈ ರೀತಿ ಸ್ವಪ್ನ ಬಿದ್ದಿತು. ಆಂಜನೇಯನು ನಿಮ್ಮ ಭಕ್ತಿಗೆ ನಾನು ಮೆಚ್ಚಿದೆನು ಎಂದು ಹೇಳಿ "ನನ್ನ ಮಂಟಪದ ಪಕ್ಕದಲ್ಲಿ ಒಂದು ಹೆಣ್ಣು ದೇವರ ವಿಗ್ರಹ ಇದೆ. ಅದನ್ನು ನೀವಿಬ್ಬರೂ ಭಕ್ತಿಯಿಂದ ಪೂಜಿಸಿದರೆ ನಿಮ್ಮ ಇಷ್ಟಾರ್ಥ ನೆರವೇರಿಸುತ್ತದೆ" ಎಂದನು. ಅವಳು ಮಾರನೇ ದಿನ ತನ್ನ ಗಂಡನಿಗೆ ತಿಳಿಸಿದಳು. ಸ್ವಪ್ನದಲ್ಲಿ ಕಂಡಂತೆ ಅಲ್ಲಿ ಹೋಗಿ ನೋಡಲು ಕನಸು ಸತ್ಯವಾಯಿತು. ಕಲ್ಲು ಚಪ್ಪಡಿಯ ಪಕ್ಕದಲ್ಲೇ ಒಂದು ಹೆಣ್ಣು ರೂಪುಗಳಿಂದ ಕೂಡಿದ ವಿಗ್ರಹ ಇದ್ದುದನ್ನು ಕಂಡರು. ಆ ಹೆಣ್ಣು ದೇವರ ವಿಗ್ರಹವನ್ನು ಸಂಸಾರಸ್ಥರ ಮನೆಯಲ್ಲಿ ಇಡುವುದು ಸರಿಯಿಲ್ಲವೆಂದು ಒಂದು ಮರದ ಕೆಳಗೆ ಇರಿಸಿ ಪೂಜಿಸಿದರು.

ಒಂದು ಬೇವಿನ ಮರದ ಕೆಳಗಡೆ ದೇವೀವಿಗ್ರಹವನ್ನು ಸ್ಥಾಪಿಸಿ ಅದರ ಸುತ್ತ

ಮುತ್ತ ಒಂದು ಸಣ್ಣ ಚಪ್ಪರವನ್ನು ಹಾಕಿ ದಿನನಿತ್ಯವೂ ಪೂಜಿಸುತ್ತಿದ್ದರು. ದಿನಕಳೆದಂತೆ ವೀರತ್ತಯ್ಯನಿಗೆ ಅದೃಷ್ಟ ಹೆಚ್ಚುತ್ತಾ, ಬೇಕಾದಷ್ಟು ಸಂಪಾದನೆ ಆಗಿ ದೊಡ್ಡ ಶ್ರೀಮಂತನೇ ಆದನು. ಒಂದು ದೊಡ್ಡ ಮನೆಯನ್ನೇ ಕಟ್ಟಿಸಿದನು. ಆಗ ವೀರತ್ತಯ್ಯನಿಗೆ ಒಂದು ಯೋಚನೆ ಹುಟ್ಟಿತು. ನಮಗೆ ಇಷ್ಟು ಸಂಪತ್ತನ್ನು ಕೊಟ್ಟ ತಾಯಿಗೆ ಏನೆಂದು ಹೆಸರಿಡಬೇಕು? ಎಂದು ಹೆಂಡತಿಯನ್ನು ಕೇಳಿದನು. ಅವಳು ಹೀಗೆ ತಿಳಿಸಿದಳು: "ನಾವು ಈ ಕಡೆ ಸೀಮೆಗೆ ಬಂದಾಗ ಕೂಲಿ ಮಾಡಿ ಜೀವನ ಮಾಡುತ್ತಿದ್ದೆವು. ಈ ನಮ್ಮ ಅಮ್ಮ (ತಾಯಿ) ಸಿಕ್ಕಿದ ಮೇಲೆ ನಮಗೆ ಈ ಸಂಪತ್ತು ದೊರಕಿದೆ. ಆದ್ದರಿಂದ "ಬಂತಂತೆ ಅಮ್ಮ" ಎಂದು ಹೆಸರಿಡೋಣ. ಅದೇ ಕ್ರಮೇಣ ಜನವಾಣಿಯಲ್ಲಿ "ಬಮ್ಮೊರಮ್ಮ" ಆಗಿದೆ. ಅದೇ ಜಾಗದಲ್ಲಿ ಜನಸಂಖ್ಯೆಯು ಜಾಸ್ತಿ ಆಗಿ ಸುಮಾರು ಒಂದು ಚಿಕ್ಕ ಊರೇ ಆಯಿತು. ಕ್ರಮೇಣ ಸುತ್ತಮುತ್ತ ಇರುವ ಕಾಡನ್ನೆಲ್ಲಾ ಕಡಿದು ಹಳ್ಳಿಯಾಗಿ ಪರಿವರ್ತಿಸಿದರು. ಅಲ್ಲಿ ಪ್ರತಿವರ್ಷವೂ ಜಾತ್ರೆ ನಡೆಯುತ್ತಿತ್ತು. ಆ ಗ್ರಾಮಕ್ಕೆ ಬೇರೆ ಬೇರೆ ಜಾತಿಯ ಜನರು ಬಂದು ನೆಲೆಸಿದರು. "ಬಂತಂತೆ ಊರು" ಹೋಗಿ "ಬೊಮ್ಮೊರು" ಆಗಿದೆ.

ಬಹಳ ವರ್ಷ ಕಳೆದನಂತರ ಆ ಊರು ಮತ್ತೆ ಪಾಳುಬಿದ್ದಿದೆ. ಕಾರಣ ಏನೆಂದು ಹಿರಿಯರನ್ನು ವಿಚಾರಿಸಿದಾಗ ಮಾರಿಸೋಂಕಿನಿಂದ ಕಾಲರಾ-ವಾಂತಿ-ಭೇದಿ ಬಂದು ಊರಿನ ಮುಕ್ಕಾಲು ಭಾಗ ಜನ ಸತ್ತು ಹೋದರೆಂದೂ ಉಳಿದವರು ಆ ಊರನ್ನು ಬಿಟ್ಟು ಬೇರೆಡೆಗೆ ಹೋದರೆಂದೂ ತಿಳಿಸಿದರು. ಅಲ್ಲದೆ ಆ ಊರಿನವರು ಕಟ್ಟಿಸಿದ ಮನೆಯ ಅವಶೇಷಗಳು ಈಗಲೂ ಇವೆ. ದೇವರ ವಿಗ್ರಹದ ದೇವಾಲಯ ಅದೇ ಜಾಗದಲ್ಲಿದೆ. ಕಲ್ಲುಚಪ್ಪಡಿಯಿಂದ ನಿರ್ಮಿತವಾದ ಬೊಮ್ಮೊರಮ್ಮನ ದೇವಸ್ಥಾನಕ್ಕೆ ಬಾಗಿಲು ಮಾತ್ರ ಇಲ್ಲ. ಈ ಗುಡಿಯು ಒಂದು ಬಂಡೆಯಂತಿದೆ. ಒಬ್ಬನು ಮಾತ್ರ ಕುಳಿತುಕೊಳ್ಳುವಷ್ಟು ಜಾಗವಿದೆ. ಏಕೆಂದರೆ ಗುಡ್ಡಪ್ಪನು ಅಲ್ಲಿ ಕುಳಿತು, ಒಕ್ಕಣೆ ಹೇಳಲು ಮಾತ್ರ ಸಾಧ್ಯವಾಗಿದೆ. ಈ ದೇವತೆಗೆ ಮೈಸೂರು, ಬೆಂಗಳೂರು, ಪಡುವಾರಳ್ಳಿ, ಪಾಲಳ್ಳಿ ಮತ್ತು ಸುತ್ತಮುತ್ತಲ ಹಳ್ಳಿಯವರು ಹಾಗೂ ದೂರದ ಊರಿನವರು ಬರುತ್ತಾರೆ.

ಬೊಮ್ಮೊರಮ್ಮನಿಗೆ, ಕಷ್ಟ ಬಂದಾಗ ಹರಕೆ ಹೊತ್ತರೆ ಖಂಡಿತ ನಿವಾರಿಸುತ್ತಾಳೆ ಎಂಬ ಅಚಲವಾದ ನಂಬಿಕೆ ಇದೆ. ಅದೇ ರೀತಿ ಈಗಲೂ ಎಲ್ಲಿಂದ ಎಲ್ಲಿಂದಲೋ ಜನರು ಬರುತ್ತಾರೆ. ಪೂಜೆ ಮಾಡಿಸಲು ಬಂದಾಗ ದೇವಿಗೆ ಚಿನ್ನದ ಕಾಸು, ಹಣ, ಕಣ್ಣುಮಣಿ, ಕೋರೆದವಡೆ, ಕಾಲುಮುರಿ ಮಾಂಗಲ್ಯ

ಮುಂತಾದ ಚಿನ್ನ ಬೆಳ್ಳಿ ಸಾಮಾನನ್ನು ತಂದು ಹಾಕುತ್ತಾರೆ.

ಗುಡಿ ಒಳಗೆ ಅಕ್ಕಪಕ್ಕದಲ್ಲಿ ಎರಡು ಗುಂಡನೆಯ ಕಲ್ಲುಗಳಿವೆ, ಅವು ಅಕ್ಕ ತಂಗಿಯರೆಂದು ಹೇಳುತ್ತಾರೆ. ದೇವರ ಪಕ್ಕದಲ್ಲೇ ಒಂದು ಸಣ್ಣ ಬಿಲವಿದೆ. ಅಲ್ಲಿ ಸರ್ಪವಿದೆ ಎಂದು ಹೇಳುತ್ತಾರೆ. ಭಕ್ತಾದಿಗಳು ಹಾಕುವ ಚಿನ್ನಬೆಳ್ಳಿ, ಹಣ ಕಾಸನ್ನು ಯಾರೂ ಮುಟ್ಟುತ್ತಿರಲಿಲ್ಲ. ಅದನ್ನು ತೆಗೆದು ಆ ಬಿಲದಲ್ಲಿ ಹಾಕುತ್ತಾರೆ. ಕುಂಬಾರಕೊಪ್ಪಲಿನಿಂದ ಗುಡ್ಡಪ್ಪನು ಈಗಲೂ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಬರುತ್ತಾನೆ. ಆ ಸಮಯದಲ್ಲಿ ಸುಮಾರು ಜನ ಭಕ್ತಾದಿಗಳು ಸೇರಿರುತ್ತಾರೆ. ಗುಡ್ಡಪ್ಪನು ದೇವಿಯು ಮೈಮೇಲೆ ಬಂದಿದ್ದಾಳೆಂದು ಆವೇಶದಿಂದ ಮೂರು ನಾಲ್ಕು ಜನರಿಗೆ ಪ್ರತಿವಾರವೂ ಒಕ್ಕಣೆ ಹೇಳುತ್ತಾರೆ. ಇದು ಈಗಲೂ ನಡೆಯುತ್ತಾ ಇದೆ. ಇದೇ ರೀತಿ ಮುಂದೆಯೂ ನಡೆಯುತ್ತದೆ ಎಂದು ವಕ್ತೃ ತಿಳಿಸಿದ್ದಾರೆ.

ದಸರಾ ಹಬ್ಬದ ಸಮಯದಲ್ಲಿ ನಗುವನಹಳ್ಳಿ ಗ್ರಾಮದವರು ಆಯುಧ ಪೂಜೆ ದಿವಸ ಮರಿಕಡಿದು ಪೂಜೆ ಮಾಡಿ ಊಟ ಹಾಕುತ್ತಾರೆ. ಇಲ್ಲಿಯ ಕೂಲಿ ಕೆಲಸ ಮಾಡುವ ಹೆಣ್ಣಾಳುಗಳು, ಕಳೆ ನಾಟಿಗೆ ಹೋಗುವವರು ಐದು, ಆರು ಗುಂಪಿನವರೆಲ್ಲಾ ಒಟ್ಟಾರೆ ಸೇರಿ ತಾವು ತರುವ ಕೂಲಿಯಲ್ಲಿ ಒಂದು ದಿನದ ಕೂಲಿಯನ್ನು ಒಂದೆಡೆ ಸೇರಿಸಿ ಪ್ರತಿವರ್ಷವೂ ಹಬ್ಬವನ್ನು ಆಚರಿಸುತ್ತಾರೆ. ಈ ಹೆಣ್ಣು ದೇವರಲ್ಲಿ ಅವರು ಅಚಲವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ಈಗಲೂ ಗಾಡಿಗಟ್ಟುವನ್ನು ಹೊಡೆದುಕೊಂಡು ಹೋಗುವಾಗ ಗಾಡಿ ಹೂತು ಕೊಂಡರೆ ಎತ್ತುಗಳಿಗೆ

ತಕೊಳೆ ಬೊಮ್ಮೂರಿ
ಎತ್ತೋ ಬೊಮ್ಮೂರಿ

ಎಂದು ಕರೆಯುವ ವಾಡಿಕೆ ಇದೆ.

ಜನ ಮುಂದುವರಿದಂತೆ ಇತ್ತೀಚೆಗೆ ಆ ಗ್ರಾಮವನ್ನು "ಬ್ರಮ್ಮಪುರ" ಎಂದು ಕರೆಯುತ್ತಾರೆ. ಬ್ರಹ್ಮಪುರ ಎಂಬ ಬೋರ್ಡನ್ನು ತಗಲುಹಾಕುತ್ತಾರೆ.

ಬೊಮ್ಮೂರಮ್ಮನ ಗುಡಿಯ ಹತ್ತಿರ ಆನೆಕಲ್ಲುಗಳಿವೆ. ಹಿಂದೆ ಅಲ್ಲಿ ಆನೆಗಳನ್ನು ಕಟ್ಟುತ್ತಿದ್ದರು ಎಂದು ಹೇಳುತ್ತಾರೆ. ಆ ಕಲ್ಲುಗಳು ಈಗಲೂ ಇವೆ.

ನಗುವನಹಳ್ಳಿ ಪಿ. ರತ್ನ

ಸಂಬಂಧ

"ನೀವಂತೂ ಡ್ಯೂಟಿ ಮೇಲೆ ಹೊರಟುಹೋಗ್ತೀರಿ. ಅವರು ಮಗುವಿನ ನೆಪದಿಂದ ಬರ್ತಾರೆ........ಸೊಸೆ ಅಂತ ಕರೆದು ಮಾತಾಡಿಸ್ತಾರೆ........ ಆತ್ಮೀಯತೆ ತೋರಿಸ್ತಾರೆ. ಅವೆಲ್ಲ ಸರಿ. ಆದ್ರೆ ಅವರ ಕಣ್ಣಲ್ಲಿ ಇನ್ಯಾವುದೋ ಹೊಳಪನ್ನು ಕಂಡಾಗ, ಅವರು ನನ್ನಿಂದ ಏನನ್ನೋ ಬಯಸುತ್ತಾರಾದರೂ ಹೇಳಲು ಹಿಂಜರಿಯುತ್ತಾರೆ ಎನ್ನಿಸುತ್ತದೆ. ಅವರಿಗೆ ಈ ಕಡೆ ಬರಬೇಡಿ ಅಂತ ಅನ್ನೋಣ ಅನ್ಸುತ್ತೆ. ಆದ್ರೆ ನಿಮಗಾಗಿ ಸುಮ್ಮನಿದ್ದೀನಿ".

"ನೀನು ಹೀಗೆಲ್ಲ ಯೋಚಿಸಬಾರದು ರಶ್ಮಿ. ಅವರು ತಂದೆ ಸಮಾನರು. ಅವರ ಮನಸ್ನಲ್ಲಿ ಹಾಗೇನಾದ್ರೂ ಇದೆ ಅಂತ ನಂಗೇನು ಅನ್ಸಲ್ಲ" ಎಂದು ರಶ್ಮಿಯ ಮಾತಿಗೆ ಉತ್ತರಿಸಿದೆ.

"ನೀವು ಏನೇ ಹೇಳಿ. ನಂಗಂತೂ ಅವರ ನೋಟ ಒಂದು ರೀತಿ ವಿಚಿತ್ರವಾದ ಭಯ ಮೂಡಸ್ತೆ."

ಎನ್ನುತ್ತಿದ್ದ ರಶ್ಮಿಯ ಹೃದಯ ಯಾವುದೋ ಅವ್ಯಕ್ತ ಭಯದಿಂದ ಡವ ಗುಟ್ಟುತ್ತಿತ್ತು.

........ನನಗಂತೂ ಅರ್ಥವೇ ಆಗುತ್ತಿಲ್ಲ. ತಾತನ ಆ ಆತ್ಮೀಯತೆ, ಸ್ನೇಹ ಭಾವ, ಸಹೃದಯತೆ ಮತ್ತು ಅವರ ಆ ನೋಟ! ಹಾಗಾದ್ರೆ ಅವರ ನೋಟ ದಲ್ಲಿ ನನ್ನ ಬಗ್ಗೆ ಒಂದು ಭಾವನೆ, ನನ್ನ ಹೆಂಡತಿ ಬಗೆಗೆ ಬೇರೊಂದು ಭಾವನೆ ಇರಬಹುದೆ........!

ವಯಸ್ಸಿನಲ್ಲಿಂತೂ ಅವರು ತಾತನಿಗೆ ಸಮಾನ. ನಮಗೆ ಅವರು ಏನೂ ಆಗಬೇಕಿಲ್ಲ. ಯಾವುದೇ ರಕ್ತಸಂಬಂಧವಿಲ್ಲದಿದ್ದರೂ ಅವರ ಆತ್ಮೀಯತೆ, ಅನುಪಮ ಪ್ರೀತಿ ಇವೆಲ್ಲ ಮಾನವೀಯ ಸಂಬಂಧದ ಒಂದು ಬಂಧನವನ್ನು ಏರ್ಪಡಿಸಿದೆ.

ಕೆಲವು ತಿಂಗಳ ಹಿಂದಿನ ಮಾತು—

ನಾವು ವರ್ಗವಾಗಿ ಈ ಕಾಲೋನಿಗೆ ಬಂದು ಕೆಲವೇ ದಿನಗಳು ಕಳೆದಿದ್ದುವಷ್ಟೆ. ಯಾರೊಂದಿಗೂ ಹೆಚ್ಚು ಪರಿಚಯ ಆಗಿರಲಿಲ್ಲ. ಅಲ್ಲದೆ, ನನಗೆ ಸಿಕ್ಕ ಕ್ವಾರ್ಟರ್ಸ್ ಕಾಲೋನಿಯ ಕೊನೆಯಲ್ಲಿದ್ದುದರಿಂದ ಏಕಾಂತವೇ ಹೆಚ್ಚಾಗಿತ್ತು.

೧೯೮೩ನೇ ಆಗಸ್ಟ್ ತಿಂಗಳ ನವನೀತದ ನರೇಶಚಂದ್ರ 'ನರೇಶ'ರ 'ರಿಶ್ತೆ' ಕತೆಯ ಭಾವಾನುವಾದ.

ಒಂದು ದಿನ ನಾನು, ರಶ್ಮಿ ಕೋಣೆಯಲ್ಲಿ ಕುಳಿತು ಚದುರಂಗವಾಡು ತ್ತಿದ್ದೆವು. ನಮ್ಮ ಪಾಪು ಹೊರಗಡೆ ಹೋಗಿರುವುದು ಚದುರಂಗದಲ್ಲಿ ಮುಳು ಗಿದ್ದ ನಮ್ಮ ಗಮನಕ್ಕೆ ಬಂದೇ ಇರಲಿಲ್ಲ.

ತುಸು ಸಮಯದ ನಂತರ ಗಂಭೀರವಾದ ಮತ್ತು ಅಪರಿಚಿತವಾದ ದನಿ ಯೊಂದು ನಮ್ಮಿಬ್ಬರ ತನ್ಮಯತೆಗೆ ಭಂಗ ತಂದಿತ್ತು. ನಮ್ಮ ಪಾಪುವನ್ನು ಎತ್ತಿಕೊಂಡ ಒಬ್ಬ ವೃದ್ಧರು ಬಾಗಿಲಲ್ಲಿ ನಿಂತಿರುವುದು ಕಾಣಿಸಿತ್ತು.

"ಈ ಮಗು ನಿಮ್ಮದೆ?"

ಎಂದು ಪ್ರಶ್ನಿಸಿದ್ದರು.

"ಹೌದು"

ಎಂದು ಉತ್ತರಿಸಿದ್ದೆ.

"ಮಗು, ಮಕ್ಕಳ ಬಗ್ಗೆ ನಿಗಾ ಇರಬೇಕು. ಅವನು ರಸ್ತೆವರೆಗೂ ಹೋಗಿದ್ದ. ಈಗಂತೂ ಲಾರಿಯವ್ರು........ಅವರ ವೇಗ, ನಿಂಗೂ ಗೊತ್ತು.........."

ಎಂದು ನುಡಿದು ಪಾಪುವನ್ನು ರಶ್ಮಿ ಕೈಗೆ ಕೊಟ್ಟಿದ್ದರು.

ಹೀಗೆ ತಾತನ ಜೊತೆ ನಮ್ಮ ಪರಿಚಯ ಆದದ್ದು.

ಅಂದಿನ ಆ ಪರಿಚಯದಿಂದಲೇ ತಾತನ ಹೃದಯದಲ್ಲಿ ನಮ್ಮ ಬಗ್ಗೆ ಪಾಪು ಬಗ್ಗೆ ಪ್ರೀತಿಮೂಡಿತ್ತು. ಆಗಿನಿಂದ ಅವರು ನಮ್ಮ ಮನೆಗೆ ಬಂದುಹೋಗಿ ಮಾಡಲು ಶುರುಮಾಡಿದ್ದರು. ನಾವು ಅವರನ್ನು ತಾತ ಎಂದೇ ಕರೆಯು ತ್ತಿದ್ದೆವು.

ತಾತನ ಮೂಲಕವಾಗಿ ನಮಗೆ ಅವರ ಹುಡುಗ ಮತ್ತು ಸೊಸೆಯ ಪರಿಚಯ ಆಗಿತ್ತು. ತಾತನಿಗೆ ಮಕ್ಕಳಿರಲಿಲ್ಲ. ಅವರಿಗೆ ಪಾಪುವಿನ ಮೇಲೆ ಅಪಾರ ಪ್ರೇಮವಿರುವುದು ನನ್ನ ಅನುಭವಕ್ಕೆ ಬಂದಿತ್ತು. ಪ್ರಾಯಶಃ ಅದೇ ಕಾರಣದಿಂದಲೇ ನಮಗೆ ಅವರ ಬಗ್ಗೆ ಆತ್ಮೀಯತೆ ಮೂಡಿರಬೇಕು.

ಹೆಂಗಸರಲ್ಲಿ ಪುರುಷರ ದೃಷ್ಟಿಯನ್ನು ಪರೀಕ್ಷಿಸುವಂತಹ ಒಂದು ಗುಣ ಅಂತರ್ನಿಹಿತವಾಗಿರುತ್ತದೆ. ಅದು ನಾಯಿ ವಾಸನೆಯಿಂದಲೇ ಅಪರಾಧಿಗಳನ್ನು ಪತ್ತೆಹಚ್ಚುವ ಶಕ್ತಿಗಿಂತ ಕಡಿಮೆಯಾದುದೇನೂ ಅಲ್ಲ ಎಂದು ನಾನು ಭಾವಿಸಿ ದ್ದೇನೆ. ಆದರೆ ತಾತನ ವಿಷಯದಲ್ಲಿ ಇಂತಹ ಯಾವ ನಿರ್ಣಯಕ್ಕೂ ಬರಲಾರೆ. ಅವರ ನೋಟದಲ್ಲಿ, ಆ ಮುದಿ ಹೃದಯದಲ್ಲಿ ರಶ್ಮಿಯ ಬಗ್ಗೆ ಆಕರ್ಷಣೆ ! ಕೇವಲ ನೋಟದಿಂದ ಏನು ಸಿಗೋಕೆ ಸಾಧ್ಯ. ಮತ್ತೇನು ಲಭ್ಯವಾಗಬಹುದು....ಚಿಕ್ಕ ವಯಸ್ಸಿನಲ್ಲಿ ವಿದುರನಾದ ಕಾರಣವೇ? ಅಥವಾ ಮತ್ತೇನಾದರೂ........?

ಆದರೂ ಯಾಕೋ ನನಗೆ ಅವರ ಬಗ್ಗೆ ಯಾವ ಅಪಾಯಕಾರೀ ಅನುಭವವೂ ಆಗಿರಲಿಲ್ಲ.

ಒಂದು ದಿನ ನನಗೆ ರಾತ್ರಿ ಪಾಳಿ ಬಿದ್ದಿತ್ತು. ಆದರೆ ಹೋಗಲು ಸಾಧ್ಯವಾಗಲಿಲ್ಲ.

ಪಾಪುವಿನ ಹುಟ್ಟಿದ ಹಬ್ಬದ ವ್ಯವಸ್ಥೆ ಮತ್ತು ಕೆಲಸಗಳ ಒತ್ತಡದಿಂದ ಸೋತು ಸೊರಗಿ ಹಾಗೇ ಮಲಗಿದ್ದೆವು. ನಿದ್ದೆಯಲ್ಲಿ ನನಗೆ ಯಾರೋ ಬಾಗಿಲು ತಟ್ಟುತ್ತಿರುವಂತೆನಿಸಿತು. ಆ ಸದ್ದಿಗೆ ಎಚ್ಚರಗೊಂಡ ರಶ್ಮಿ ನನ್ನನ್ನು ಎಬ್ಬಿಸಿದಳು. ನಾನು ನಿದ್ದೆಗಣ್ಣಿನಲ್ಲೇ ಎದ್ದು ಹೋಗಿ ಬಾಗಿಲು ತೆಗೆದಾಗ ಮೈತುಂಬ ಕಂಬಳಿ ಹೊದ್ದು ನಿಂತ ತಾತ ಕಾಣಿಸಿದರು. ಒಳಗಡೆ ಬಂದು ಧೊಪ್ಪೆನ್ನುತ್ತ ಕುರ್ಚಿಯ ಮೇಲೆ ಕುಳಿತ ಅವರು,

"ಮಗು, ಪಾಪುಗೆ ಆಶೀರ್ವಾದ ಮಾಡೋಕೂ ಬರಲಾಗಲೇ ಇಲ್ಲ- ಬೆಳಗಿನಿಂದಲೂ ಆರೋಗ್ಯ ಸರಿಯಿಲ್ಲ. ಏನೇನೋ ಒಂಥರಾ ಆಗ್ತಾ ಇದೆ. ಪಾಪುವಿನ ಹುಟ್ಟಿದ ಹಬ್ಬ ಅಲ್ಲವೆ? ಅಂಥದ್ರಲ್ಲೂ ಬರೋಕೇ ಆಗಲಿಲ್ಲ. ಅದ್ದರಿಂದ ಮಗ, ಸೊಸೆಗೆ ಹೇಳದೆ ಇಷ್ಟು ಹೊತ್ನಲ್ಲಿ ಬಂದೆ. ಮಗು ಎಲ್ಲಿ? ಸ್ವಲ್ಪ ಕರ್ಕೊಂಡು ಬಾ" ಎಂದರು.

ಹುಷಾರಿಲ್ಲದ ಅವರು ಇಷ್ಟು ರಾತ್ರಿಯಲ್ಲಿ ಬಂದಿರುವುದು ನನಗೆ ಸರಿಯೆನಿಸದ್ದರಿಂದ ಹೇಳಿದೆ:

"ತಾತ, ಇಷ್ಟೊಂದು ಹುಷಾರಿಲ್ಲದವರು ಈ ರಾತ್ರೀಲಿ ಬರಬಾರದಾಗಿತ್ತು. ಬೆಳಗಾದ್ರೆ ನಾವೇ ಬರುತ್ತಿದ್ದೆವಲ್ಲ"

"ಮಗು, ಕಾಲ ಯಾರನ್ನೂ ಕಾಯಲ್ಲ. ಎಲ್ಲಿ ಪಾಪೂನ ಸ್ವಲ್ಪ ಕರ್ಕೊಂಡು ಬಾ" ಎಂದು ಅವರು ಏದುಸಿರು ಬಿಡುತ್ತ ನುಡಿದರು.

ನಾನು ಮಗುವನ್ನು ಎಬ್ಬಿಸಿ ಕರೆತರಲು ರಶ್ಮಿಯ ಬಳಿ ಹೋಗಿ ಪಾಪುವನ್ನು ಎಬ್ಬಿಸುವಂತೆ ಹೇಳಿದಾಗ,

"ತಾತಂಗೆ ಈ ರಾತ್ರೀಲಿ ಬರೋಕೆ ಏನು ಬಿದ್ಹೋಗಿದೋದು? ನಮ್ಮ ನಿದ್ದೆ ಹಾಳು ಮಾಡಿದ್ದಲ್ದೆ ಮಗೂನ ಬೇರೆ ಎಬ್ಬಿಸಬೇಕಂತೆ."

ಎಂದು ಸಣ್ಣಗೆ ನಿಷ್ಠೂರ ಮಾತುಗಳಲ್ಲಿ ಗೊಣಗಿದ್ದಳು.

ತುಟಿ ಮೇಲೆ ಬೆರಳಿಟ್ಟು ಸುಮ್ಮನಿರುವಂತೆ ರಶ್ಮಿಗೆ ಸೂಚಿಸಿ ಪಾಪುವನ್ನು ಎತ್ತಿಕೊಂಡು ತಾತನ ಹತ್ತಿರ ಹೋದೆ.

ಪಾಪುವನ್ನು ಎತ್ತಿಕೊಂಡ ತಾತ ಪ್ರೀತಿಯಿಂದ ಅದರ ಮೈದಡವಿದರು;

ಕೋಮಲ ಕೆನ್ನೆಯನ್ನು ಮುದ್ದಿಸಿ, 'ದೇವರು ನನ್ನ ಆಯುಸ್ಸನ್ನು ನಿನಗೆ ನೀಡಲಿ' ಎನ್ನುತ್ತ ಮಗುವಿನ ಮುಚ್ಚಿದ ಮುಷ್ಟಿಯನ್ನು ಬಿಡಿಸಿ ಏನನ್ನೊ ಕೈಯಲ್ಲಿಟ್ಟರು.

ಆಮೇಲೆ ಪಾಪುವನ್ನು ನನ್ನ ಕೈಗೆ ಕೊಟ್ಟು ವಾಪಸ್ಸು ಹೋಗುವಾಗ ಅವರ ಮುಖವಲ್ಲಿ ಎಂದಿನ ಆತ್ಮೀಯ ನಗು ಸೂಸಿತ್ತು.

ನಾನು ಪಾಪುವನ್ನು ಹಾಸಿಗೆಯಲ್ಲಿ ಮಲಗಿಸುತ್ತಿದ್ದಂತೆ ರಶ್ಮಿ ಕೋಪದಿಂದ,

"ಮುದುಕನಿಗೆಲ್ಲೋ ಐಲುಪೈಲು ಅಷ್ಟೆ........ಇವೆಲ್ಲ ಒಂದು ನೆಪ. ನೀವೇನಾದ್ರೂ ಇವತ್ತು ಡ್ಯೂಟಿಗೆ ಹೋಗಿದ್ರೆ?"

ಎಂದು ತಿರಸ್ಕಾರವಾಗಿ ಪ್ರಶ್ನಿಸಿ ಮಗ್ಗಲು ಬದಲಿಸಿ ಮಲಗಿದಳು. ನನ್ನಿಂದ ಏನನ್ನೂ ಹೇಳಲಾಗಲಿಲ್ಲ. ಆದರೆ ತಾತನ ನಡತೆಯ ಬಗ್ಗೆ ನನ್ನಲ್ಲಿ ಸಂಶಯ ತಲೆದೋರಿತು....

ಬೆಳಗ್ಗೆ ಏಳುತ್ತಿದ್ದಂತೆಯೇ ತಾತನ ಸಾವಿನ ಸುದ್ದಿ ತಿಳಿಯಿತು. ಕೇಳಿ ಸ್ತಂಭೀಭೂತನಾದೆ. ಸರಿರಾತ್ರಿಯಲ್ಲಿ ಅಷ್ಟೊಂದು ಹುಷಾರಿಲ್ಲದವರು ಬಂದಿದ್ದು, ಪಾಪುವನ್ನು ಆಶೀರ್ವದಿಸಿದ್ದು ಎಲ್ಲ ಕಣ್ಣೆದುರು ಸುಳಿಯಿತು. ಇನ್ನು ರಶ್ಮಿ, ಅವಳಂತೂ ವಿಷಕಾರಿದ್ದಳು.

ತಾತ ನಮ್ಮ ಮನೆಯಿಂದ ಹೋಗುವಾಗ ಯಾವ ಮುಗುಳು ನಗು ಅವರ ಮುಖದಲ್ಲಿತ್ತೋ ಆ ಮುಗುಳು ನಗೆಯೇ ಸಾವಿನ ನಂತರವೂ ಅವರ ಮುಖ ದಲ್ಲಿದ್ದುದನ್ನು ಅಂತಿಮ ಸಂಸ್ಕಾರದ ಹೊತ್ತಿನಲ್ಲಿ ಕಂಡೆ.

ಅನಂತರ, ತಾತನ ಮನೆ ಹುಡುಗ, ಪ್ರತಾಪನ ಜೊತೆ ಮಾತಾಡುವಾಗ ಅವರ ಮನೆತನದ ಕುರುಹಾದ ವಜ್ರದ ಉಂಗುರ ಸಾವಿನ ನಂತರ ತಾತನ ಕೈಯಲ್ಲಿರಲಿಲ್ಲವೆಂಬ ವಿಷಯ ತಿಳಿಯಿತು....ನಾನು ಪ್ರತಾಪನನ್ನು ಕರೆದು ಕೊಂಡು ಮನೆಗೆ ಬಂದವನೇ,

"ರಶ್ಮಿ, ತಾತ ಪಾಪುಗೆ ಕೊಟ್ಟ ಆ ಪೊಟ್ಟಣ ಎಲ್ಲಿ?"

ಎಂದು ರಶ್ಮಿಯನ್ನು ಕೇಳಿದೆ.

"ಪೊಟ್ಟಣ! ನನಗಂತೂ ಸಿಕ್ಕಿಲ್ಲ."

ರಶ್ಮಿ ಉತ್ತರಿಸಿದಳು.

"ತಾತ ಪಾಪು ಕೈಗೆ ಒಂದು ಪೊಟ್ಟಣ ಕೊಟ್ಟಿದ್ದರು. ಅಮ ನಾನು ಆ ವಿಷಯ ನಿಂಗೆ ಹೇಳೋದನ್ನೇ ಮರೆತ್ಬಿಟ್ಟಿದ್ದೆ."

"ಪ್ರಾಯಶ....ಹಾಸಿಗೆಯಲ್ಲಿ ಬಿದ್ದಿರಬಹುದು....!"

ಹಾಸಿಗೆ ಮೇಲೆ ದಿಂಬಿನ ಮೂಲೆಯಲ್ಲಿ ಪೊಟ್ಟಣ ಸಿಕ್ಕಿತು. ಅದನ್ನು ಬಿಚ್ಚಿದಾಗ ಮುದುಡಿದ ಕಾಗದದ ಸಂದಿಯಿಂದ ಕೆಂಪಾದ ವಜ್ರದ ಉಂಗುರ ಹೊಳೆಯಿತು.

ಉಂಗುರವನ್ನು ರಶ್ಮಿಯತ್ತ ನೀಡಿದೆ.

ಪಿಳಿಪಿಳಿನ್ನುವ ರಶ್ಮಿಯು ಕಣ್ಣಿನ ಕೊನೆಯಿಂದ ಉಂಗುರದ ಮೇಲೆ ಕಣ್ಣೀರ ಹನಿಯೊಂದು ಬಿತ್ತು. ಅವಳು ಉಂಗುರವನ್ನು ಕೈಯಲ್ಲಿ ಹಿಡಿದು ಚುಂಬಿಸಿದಳು.

ರಶ್ಮಿ ಆ ಉಂಗುರವನ್ನು ಪ್ರತಾಪನಿಗೆ ಹಿಂದಿರುಗಿಸಲು ನೋಡಿದಾಗ ಅವನು ಅದನ್ನು ತೆಗೆದುಕೊಳ್ಳದೆ,

"ಇಲ್ಲ, ನಾನೀಗ ಇದನ್ನು ತೆಗೆದುಕೊಳ್ಳೋದಿಲ್ಲ. ಅವರು ಇದನ್ನು ತಮ್ಮ ಕೈಯಾರೆ ಸಾಯೋ ಪೂರ್ವದಲ್ಲಿ ಪಾಪುಗೆ ಆಶೀರ್ವಾದ ಪೂರ್ವಕವಾಗಿ ಕೊಟ್ಟಿದ್ರು. ಮತ್ತೆ ಅವರು ನಿಮ್ಮನ್ನು ಪಾಪೂನ ಯಾಕೆ ಅಷ್ಟೊಂದು ಇಷ್ಟ ಪಡುತ್ತಿದ್ರು ಅಂತ ಪ್ರಾಯಶಃ ನಿಮಗೆ ಗೊತ್ತಿರಲಾರದು. ನಿಮ್ಮಲ್ಲಿ ನಮ್ಮ ತಾಯಿಯ ಹೋಲಿಕೆ ಇದೆ. ಯೌವನದಲ್ಲಿ ನಮ್ ತಾಯಿ ನಿಮ್‌ಹಾಗೇ ಇದ್ದರು....ಈಗ ತಾತ ಇಲ್ಲದಿದ್ದರೂ ಆ ಸ್ನೇಹವನ್ನು ನೀವು ನನ್ನ ಮೇಲೂ ತೋರ್ಸ್ಸಿ." ಎನ್ನುತ್ತಿದ್ದಂತೆ ಕೊರಳು ತುಂಬಿ ಬಂದು ಪ್ರತಾಪನ ಧೈರ್ಯ ಕುಸಿಯಿತು....ಅವನು ಬಿಕ್ಕಿ ಬಿಕ್ಕಿ ಅಳತೊಡಗಿದ.

ಈ ಕಡೆ ರಶ್ಮಿಯು ದುಃಖ ಎಲ್ಲೆ ಮೀರಿತ್ತು.

ಚಂದ್ರಮತಿ ಸೋಂದಾ

ಎಲ್ಲಿ ಧೂರ್ತರಿಗೆ ಗೌರವವೂ ಪೂಜ್ಯರಿಗೆ ಮಾನಹಾನಿಯೂ ಆಗುವುದೋ ಅಲ್ಲಿ ದುರ್ಭಿಕ್ಷವೂ ಮರಣವೂ, ಭಯವೂ, ಆಗುವುದು.

—ವಿಷ್ಣು ಶರ್ಮ

ನಮ್ಮ ತತ್ವಗಳನ್ನು ನಮ್ಮ ಕರ್ತವ್ಯ ಮತ್ತು ಸನ್ನಿವೇಶಗಳಿಗೆ ಸರಿ ಹೊಂದಿಸಿಕೊಳ್ಳಬೇಕು.

—ಎಡ್ಮಂಡಬರ್ಕ

‘ಕೊರವಂಜಿ’ಯ ‘ರಾಶಿ’

ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ಬೆಳವಣಿಗೆಗಾಗಿ ಶ್ರಮಿಸಿದ ಡಾಕ್ಟರ್ ರಾಮಸ್ವಾಮಯ್ಯ ಶಿವರಾಂ (೧೯೦೫-೧೯೮೪) ಅವರು ‘ಶಿಳಿನಗೆಯ ರಾಶಿ’ ಎಂದೆ ಹೆಸರಾಗಿದ್ದರು. ಹಾಸ್ಯ ಸಾಹಿತ್ಯದ ಪ್ರಕಟಣೆ–ಪ್ರಚಾರಗಳಿಗಾಗಿ ‘ಕೊರವಂಜಿ’ ಮಾಸಪತ್ರಿಕೆಯನ್ನು ಕಾಲು ಶತಮಾನ ಕಾಲ ನಡೆಸಿದ ಅವರು ‘ಕೊರವಂಜಿ’ಯ ‘ರಾಶಿ’ ಎಂದೂ ಪ್ರಸಿದ್ಧರಾಗಿದ್ದರು.

ಶಿವರಾಂ ಹುಟ್ಟಿದ್ದು ಬೆಂಗಳೂರುನಲ್ಲಿ; ೧೯೦೫ ನವೆಂಬರ್ ೧೦ ರಂದು. ಅವರದು ದೊಡ್ಡ ಕುಟುಂಬ ಜತೆಗೆ ಬಡತನ. ಆಗಿನ ಮೈಸೂರು ಸರ್ಕಾರದ ಸೇವೆಯಲ್ಲಿದ್ದ ಅವರ ತಂದೆ ಬೇಗ ತೀರಿಹೋದರು. ಚಿಕ್ಕಂದಿನಲ್ಲಿಯೇ ಸಂಸಾರದ ತಾಪತ್ರಯಗಳಿಗೆ ಸಿಕ್ಕಿಕೊಂಡ ಶಿವರಾಂ ಬಡತನದಲ್ಲಿಯೇ ವಿದ್ಯಾಭ್ಯಾಸ ಮಾಡಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದ ಅನಂತರ ವೈದ್ಯಕೀಯ ವೃತ್ತಿಗೆ ಓದಿ ಎಂ.ಬಿ.ಬಿ.ಎಸ್. ಪದವಿ ಪಡೆದರು. ಆದರೂ ಸರ್ಕಾರಿ ಕೆಲಸ ಸಿಕ್ಕಲಿಲ್ಲ. ಹೀಗಾಗಿ ಸ್ವತಂತ್ರ್ಯವಾಗಿ ಬೆಂಗಳೂರು ಬಳೇಪೇಟೆಯಲ್ಲಿ ‘ಸಿಟಿ ಡಿಸ್‌ಪೆನ್ಸರಿ’ಯನ್ನು ಆರಂಭಿಸಿದರು. ಚಿಕಿತ್ಸೆಗೆಂದು ಬರುತ್ತಿದ್ದ ಬಗೆಬಗೆಯ ರೋಗಿಗಳ ಸ್ವಭಾವ ಅರಿತು, ಯುಕ್ತ ಚಿಕಿತ್ಸೆ ನೀಡುತ್ತಿದ್ದ ಶಿವರಾಂ ರೋಗಿಗಳಿಗೆ ಸಮಾಧಾನದ ಮಾತು ಹೇಳುತ್ತಿದ್ದರು. ಹೀಗಾಗಿ ಅವರು ಬಹುಬೇಗ ‘ಜನಪ್ರಿಯ ಡಾಕ್ಟರ್’ ಆದರು. ‘ತಮ್ಮಲ್ಲಿ ಚಿಕಿತ್ಸೆಗೆಂದು ಬರುತ್ತಿದ್ದ ರೋಗಿಗಳಿಂದ ತಾವು ಅನೇಕ ಪಾಠಗಳನ್ನು ಕಲಿತೆ’ ಎಂದು ಹೇಳುತ್ತಿದ್ದ ಶಿವರಾಂ ಅಂಥ ಪಾಠಗಳನ್ನು ಆಧರಿಸಿ ಅನಂತರ ಅನೇಕ ಶಾಸ್ತ್ರೀಯ ಗ್ರಂಥಗಳನ್ನು ರಚಿಸಿದರು. ‘ಸಿಟಿ ಡಿಸ್‌ಪೆನ್ಸರಿ’ ರೋಗಿಗಳಿಗೆ ಮಾತ್ರ ಅಲ್ಲದೆ ಸಾಹಿತ್ಯ ಪ್ರೇಮಿಗಳಿಗೂ ಬಹಳ ವರ್ಷಗಳ ಕಾಲ ‘ಆಕರ್ಷಕ ಸ್ಥಳ’ ಆಗಿತ್ತು.

ವಿದ್ಯಾರ್ಥಿ ದೆಸೆಯಲ್ಲಿಯೇ ಶಿವರಾಂ ಸಾಹಿತ್ಯದಲ್ಲಿ ಆಸಕ್ತಿ ಮತ್ತು ಅಭಿರುಚಿ ಕುದುರಿಸಿಕೊಂಡರು. ಅವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಇಂಗ್ಲಿಷಿನ ಹೆಸರಾಂತ ಹಾಸ್ಯ ಪತ್ರಿಕೆ ‘ಪಂಚ್’ ಪರಿಚಯವಾಯಿತು. ಅವರಿಂದ ಅವರಿಗೆ ಹಾಸ್ಯ ಸಾಹಿತ್ಯದಲ್ಲಿ ವಿಶೇಷ ಅಭಿರುಚಿ ಬೆಳೆಯಿತು. ಮುಂದೆ ಟಿ. ಪಿ. ಕೈಲಾಸಂ, ಜಿ. ಪಿ. ರಾಜರತ್ನಂ ಮುಂತಾದ ಹಿರಿಯ ಸಾಹಿತಿಗಳ ಸ್ನೇಹ–ಸಂಪರ್ಕಗಳಿಂದ ಸಾಹಿತ್ಯ ಸೇವೆ ಕೈಗೊಂಡ ರಾಶಿ

ಕಥೆ ಕಾದಂಬರಿ ಹಾಸ್ಯ ಜೀವನಚರಿತ್ರೆ ಮುಂತಾದ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸುಮಾರು ೫೦ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ಜೀವನದ ಘಟನೆಗಳನ್ನು ಕುರಿತು ಅಣಕವಾಡುವುದನ್ನೂ 'ಪಂಚ್'ನಿಂದ ಕಲಿತುಕೊಂಡು ಅಣಕವಾಡು, ಚತುರೋಕ್ತಿಗಳನ್ನು ಸಂವೃದ್ಧವಾಗಿ ಸೃಷ್ಟಿಸಿದರು. ಅವರು ಪ್ರಕಟಿಸಿದ ಮೊದಲ ಪುಸ್ತಕ 'ತುಟಿಮೀರಿದುದು' (೧೯೩೯). ಲಘುಹರಟೆ ಮತ್ತು ಅಣಕವಾಡುಗಳ ಸುಂದರ ಸಂಕಲನ. 'ಇಂದಾನೊಂದು ಕಾಲದಲ್ಲಿ' (೧೯೬೭) ಎಂಬ ಪುಸ್ತಕದಲ್ಲಿ 'ನಮ್ಮ ಅಡುಗೂಲಜ್ಜಿಯ ದಿವ್ಯ ಕಥೆ'ಗಳಿವೆ. 'ಸಾಕ್ಷಿ ಸಂಕಲಿಕೆ' (೧೯೬೪) ಚಾಳ ವಚನಗಳ ಸಂಕಲನ. 'ಕೊರವಂಜಿಯು ಕಂಡ ನಗು ದರ್ಬಾರಿಗಳು' (೧೯೭೯). 'ಕೊರವಂಜಿಯು ಕಂಡ ನಗು ವ್ಯಕ್ತಿಗಳು' (೧೯೭೮); 'ಕೊರವಂಜಿಯು ಕಂಡ ನಗು ಸಮಾಜ' (೧೯೭೫), 'ಕೊರವಂಜಿಯ ಪಡುವಣಯಾತ್ರೆ' (೧೯೬೮); ಥಳಕು-ಪುಣುಕು (೧೯೬೨) ಮತ್ತು 'ನಗು ಸಂಸಾರಿಗಳು' (೧೯೬೯)—ಇವು ರಾಶಿ ಪ್ರಕಟಿಸಿರುವ ಹಾಸ್ಯ ಲೇಖನ ಮತ್ತು ವಿಡಂಬನ ಪದ್ಯಗಳ ಸಂಗ್ರಹಗಳು. ತಿಳಿನಗೆ ಮತ್ತು ಶುದ್ಧವಾದ ಅಭಿರುಚಿಗೆ ಈ ಸಂಕಲನಗಳು ಸಾಕ್ಷಿಯಾಗಿವೆ.

ಹಾಸ್ಯ ಸಾಹಿತ್ಯದ ಪ್ರಕಟಣೆ-ಪ್ರಚಾರಗಳಿಗೆಂದೆ ರಾಶಿ ೧೯೪೨ರಲ್ಲಿ ನಾ. ಕಸ್ತೂರಿ ಅವರ ನೆರವಿನಿಂದ 'ಕೊರವಂಜಿ' ಮಾಸ ಪತ್ರಿಕೆಯನ್ನು ಆರಂಭಿಸಿದರು. 'ಪಂಚ್' ಮಾದರಿಯಲ್ಲಿ ಆರಂಭವಾದ 'ಕೊರವಂಜಿ'ಯ ಉದ್ದೇಶ 'ಜೀವನದಲ್ಲಿ ತಿಳಿಹಾಸ್ಯಕ್ಕಾಗಿ ಅಗತ್ಯವಾದ ಕೊಂಕುದೃಷ್ಟಿಯನ್ನು ಕನ್ನಡಿಗರಲ್ಲಿ ಪ್ರಚಾರ ಮಾಡುವುದೇ' ಆಗಿತ್ತು. ಸಮಕಾಲೀನ ವಾರ್ತೆ ಮತ್ತು ಘಟನೆಗಳನ್ನು ತಿಳಿಹಾಸ್ಯದ ಧ್ವನಿಯಲ್ಲಿ 'ಕಣಿ' ಹೇಳುವಂತೆ ವರದಿ ಮಾಡುತ್ತಿದ್ದ 'ಕೊರವಂಜಿ' ಜಾಣ ಕನ್ನಡಿಗರೆಲ್ಲರಿಗೆ ಪ್ರಿಯವಾಗಿತ್ತು. ಅಣಕವಾದ ನಗೆ ನಾಟಕ, ಲಘುಪದ್ಯ ಮುಂತಾದ ಬಗೆ ಬಗೆಯ ಲೇಖನಗಳು 'ಕೊರವಂಜಿ'ಯಲ್ಲಿ ಪ್ರಕಟವಾಗುತ್ತಿದ್ದವು. 'ಕೊರವಂಜಿ'ಯ 'ಬುಗಾಳು' ಅಂಕಣವಂತೂ ಬಹು ಜನಪ್ರಿಯವಾಗಿತ್ತು. ರಾಶಿ ಅನೇಕ ಹೊಸ ಲೇಖಕರನ್ನೂ ವ್ಯಂಗ್ಯ ಚಿತ್ರಕಾರರನ್ನೂ 'ಕೊರವಂಜಿ'ಯ ಮೂಲಕ ಬೆಳಕಿಗೆ ತಂದರು. ಸುಮಾರು ಕಾಲು ಶತಮಾನ ಕಾಲ ಕನ್ನಡಿಗರನ್ನು ರಂಜಿಸಿದ 'ಕೊರವಂಜಿ' ವ್ಯಾಪಾರಿಕವಾಗಿ ನಷ್ಟ ಅನುಭವಿಸಿ ೧೯೬೭ರಲ್ಲಿ ನಿಂತುಹೋಯಿತು. ಬೆಳ್ಳಿಹಬ್ಬವನ್ನು ಆಚರಿಸಬೇಕಾಗಿದ್ದ ಸಮಯದಲ್ಲಿ 'ಕೊರವಂಜಿ'ಯನ್ನು ಕಾಡಿಗೆ ಕಳುಹಿಸಿದ ರಾಶಿ ತಮ್ಮನ್ನು 'ಪತ್ರಿಕಾ ನಷ್ಟಿಪ'ರೆಂದು ಕರೆದುಕೊಂಡರು. 'ಕೊರವಂಜಿ' ನಿಂತ

ಮೇಲೂ ರಾಶಿ 'ಮಯೂರ' ಮಾಸಪತ್ರಿಕೆಯಲ್ಲಿ 'ತಿಂಗಳ ತಿಳಿಗಾಳು' ಅಂಕಣವನ್ನು ಕೆಲವು ವರ್ಷಗಳ ಕಾಲ ನಡೆಸಿದರು. ಅನಂತರ 'ತುಷಾರ' ಮಾಸಪತ್ರಿಕೆಯಲ್ಲಿ 'ಕಡಲೀಚೆಯ ಕಂಡೆನೋಟ' ಅಂಕಣವನ್ನು ಸ್ವಲ್ಪಕಾಲ ನಡೆಸಿದರು.

ಕಾದಂಬರಿ ಕ್ಷೇತ್ರದಲ್ಲೂ ರಾಶಿ ಗಣ್ಯ ಕೃತಿಗಳನ್ನು ರಚಿಸಿದ್ದಾರೆ. ಅವರು ಬರೆದಿರುವ ಕಾದಂಬರಿಗಳಿವು: ಮೃಗಶಿರ (೧೯೭೧); ಕಾರ್ತೀಕ ಸೋಮವಾರ (೧೯೭೩); ಮಧುವನದಲ್ಲಿ ಮೇಳ (೧೯೬೭); ಮತ್ತು ಪಂಪಾಪತಿಯ ಕೃಪೆ (೧೯೮೨). ಭೋಗದ ಕೊನೆ ತ್ಯಾಗ ಎಂಬ ಉದಾತ್ತ ತತ್ವವನ್ನು 'ಕಾರ್ತೀಕ ಸೋಮವಾರ' ಕಾದಂಬರಿ ಪ್ರತಿಪಾದಿಸುತ್ತದೆ. ಪ್ರಾಣಿಗಳ ಗುಣಗಳು ಮನುಷ್ಯರಲ್ಲಿ ಇನ್ನೂ ಉಳಿದುಕೊಂಡಿರುವುದನ್ನು 'ಮೃಗಶಿರ' ಕಾದಂಬರಿಯಲ್ಲಿ ವಿವರಿಸಿದ್ದಾರೆ. 'ಮಧುವನದಲ್ಲಿ ಮೇಳ' ಮತ್ತು 'ಪಂಪಾಪತಿಯ ಕೃಪೆ' ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಎರಡು ಕಾದಂಬರಿಗಳು.

ವೈದ್ಯಕೀಯ ವೃತ್ತಿಯ ಜತೆಗೆ ಅಧ್ಯಯನ, ಚಿಂತನ ಮತ್ತು ಮನನಗಳನ್ನು ತಮ್ಮ ಬಾಳಿನುದ್ದಕ್ಕೂ ನಡೆಸಿಕೊಂಡು ಬಂದ ರಾಶಿ ಅನೇಕ ಗಂಭೀರ ಕೃತಿಗಳನ್ನೂ ರಚಿಸಿದ್ದಾರೆ. 'ಮನಮಂಥನ' (೧೯೭೪); 'ಮನೋನಂದನ' (೧೯೬೫) ಮತ್ತು 'ಕಾಲ'–ಇವು ಅವರು ರಚಿಸಿರುವ ಶಾಸ್ತ್ರೀಯ ಕೃತಿಗಳು. 'ಮನೋದೈಹಿಕ ರೋಗಗಳನ್ನು ಕುರಿತು ರೋಗಗಳಿಂದ ಕಲಿತ ಪಾಠಗಳನ್ನು' 'ಮನೋನಂದನ್ ಪುಸ್ತಕದಲ್ಲಿ ವಿವರಿಸಿದ್ದಾರೆ. ದೈಹಿಕ ರೋಗಗಳಿಗೂ ಮಾನಸಿಕ ವಿಕಾರಗಳಿಗೂ ಇರುವ ಸಂಬಂಧವನ್ನು ಸರಳವಾಗಿ, ಸರಸವಾಗಿ ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಇಂಥವೆ ಇನ್ನೊಂದು ಪುಸ್ತಕ 'ಮನಮಂಥನ'. ಮಾನಸಿಕ ಬೇನೆಗಳ ಗುಣಗಳನ್ನು ಕಥೆಗಳ ರೂಪದಲ್ಲಿ ಸ್ವಾರಸ್ಯವಾಗಿ ಈ ಪುಸ್ತಕದಲ್ಲಿ ಹೇಳಿದ್ದಾರೆ. ಅವರಿಗಿದ್ದ ವೃತ್ತಿ ಜೀವನದ ಆಳವಾದ ಅನುಭವ ಮತ್ತು ತುಂಬು ತಿಳುವಳಿಕೆಗೆ ಈ ಪುಸ್ತಕಗಳು ಸಾಕ್ಷಿಯಾಗಿವೆ. ಅಲ್ಲದೆ ಶಾಸ್ತ್ರೀಯ ಗ್ರಂಥಗಳನ್ನು ಕನ್ನಡದಲ್ಲಿ ಹೇಗೆ ಬರೆಯಬೇಕು ಎಂಬುವಕ್ಕೂ ಈ ಕೃತಿಗಳು ಮಾದರಿಯಾಗಿವೆ. ಇವರು ಬರೆದಿರುವ ಇನ್ನೊಂದು ಪುಸ್ತಕ 'ಕಾಲ' ಭೌತಶಾಸ್ತ್ರದ ಕಾಲ, ದೇಹದ ಕಾಲ, ಮನಸ್ಸಿನ ಕಾಲ ಮತ್ತು ಮನೋತೀತಕಾಲ ಎಂಬ ನಾಲ್ಕು ಬಗೆಯ 'ಕಾಲ'ವನ್ನು ಕುರಿತು ಈ ಪುಸ್ತಕದಲ್ಲಿ ವಿಶ್ಲೇಷಿಸಿದ್ದಾರೆ. 'ಭಯ ವಿಶ್ಲೇಷಣೆ' (೧೯೬೯) ಮತ್ತು 'ನಮಗೆ ಅಡಿಗೆ ಪಥ್ಯದ ಊಟ' (೧೯೬೩) ರಾಶಿ ಬರೆದಿರುವ ಇನ್ನೆರಡು ಶಾಸ್ತ್ರೀಯ ಗ್ರಂಥಗಳು.

ರಾಶಿ ತಮಗೆ ಪ್ರಿಯರೂ ಆಪ್ತರೂ ಆಗಿದ್ದ ಕೈಲಾಸಂ ಅವರನ್ನು ಕುರಿತು

ಇಂಗ್ಲಿಷಿನಲ್ಲಿ ಒಂದು ಜೀವನಚರಿತ್ರೆ ಬರೆದಿದ್ದಾರೆ. ತಮ್ಮ ಇನ್ನೊಬ್ಬ ಪ್ರಿಯ ಮಿತ್ರರಾಗಿದ್ದ ರಾಜರತ್ನಂ ಅವರನ್ನು ಕುರಿತು ಕನ್ನಡದಲ್ಲಿ 'ಜಿ. ಪಿ. ರಾಜರತ್ನಂ' ಎಂಬ ಸ್ಮರಣ ಗ್ರಂಥ ಬರೆದಿದ್ದಾರೆ. ರಾಜರತ್ನಂ ಅವರ ಬಹುಮುಖ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಮತ್ತು ಆತ್ಮೀಯವಾಗಿ ಈ ಪುಸ್ತಕದಲ್ಲಿ ಚಿತ್ರಿಸಿದ್ದಾರೆ.

'ವೇದಾಂತಿ'ಯೂ ಆಗಿದ್ದ ರಾಶಿ ಇಂಗ್ಲಿಷಿನಲ್ಲಿ 'ಆನಂದ' ಮತ್ತು 'ಮಹಾರ್ತರಾದ ಮೂವರು ಆಚಾರ್ಯರು' ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ. 'ಆನಂದವೇ ಬಾಳಿನ ಮೂಲ ಪ್ರೇರಣೆ' ಎಂಬುದು ಈ ಎರಡು ಪುಸ್ತಕಗಳ ಸಂದೇಶ.

ಅವರು ಮಾಡಿದ ಸಾಮಾಜಿಕ ಸೇವೆಯೂ ಗಣ್ಯವಾದುದು. ವೈದ್ಯವಿದ್ಯೆಯ ಪ್ರಸಾರ ಮತ್ತು ಆ ಉದ್ಯಮದ ವಿಸ್ತರಣೆಗಾಗಿಯೂ ರಾಶಿ ಶ್ರಮಿಸಿದರು. ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಎಂಬ ಉದ್ಯಮ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಬಹಳ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಭಾರತೀಯ ವೈದ್ಯಕೀಯ ಸಂಘದ ರಾಜ್ಯಶಾಖೆಗೆ ಅಧ್ಯಕ್ಷರಾಗಿದ್ದ ಅವರು ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಸ್ಥಾಪನೆಯಲ್ಲಿ ಮುಖ್ಯಪಾತ್ರ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗಳಂಥ ಸಾಂಸ್ಕೃತಿಕ ಸಂಸ್ಥೆಗಳೊಂದಿಗೂ ರಾಶಿ ಸಂಬಂಧವನ್ನಿಟ್ಟುಕೊಂಡಿದ್ದರು. ಅವರು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ರಾಶಿ ಸಲ್ಲಿಸಿದ ಸೇವೆಗೆ ಮನ್ನಣೆ ಎಂಬಂತೆ ಅವರಿಗೆ ವಿವಿಧ ಬಗೆಯ ಗೌರವ-ಪ್ರಶಸ್ತಿಗಳು ಲಭಿಸಿದವು. ಅವರ 'ಮನಮಂಥನ' ಗ್ರಂಥಕ್ಕೆ ೧೯೭೬ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾಗಿದ್ದ ರಾಶಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿತ್ತು. ಕನ್ನಡಿಗರ ಪರವಾಗಿ ಅವರಿಗೆ 'ನಗೆನಂದನ' ಎಂಬ ಅಭಿನಂದನ ಗ್ರಂಥವನ್ನೂ ಅರ್ಪಿಸಲಾಗಿತ್ತು.

ವೈದ್ಯಕೀಯ, ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಾರ್ಥಕ ಸೇವೆ ಸಲ್ಲಿಸಿದ ರಾಶಿ ಅವರು ತಾ॥ ೧೩-೧-೧೯೮೪ರಲ್ಲಿ ತಮ್ಮ ೭೯ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ತೀರಿಹೋದರು.

ಎಸ್. ಚನ್ನಪ್ಪ

ಪುಸ್ತಕ ವಿಮರ್ಶೆ

ಉದಯರವಿಯ ಬೆಳಗು ಶ್ರೀಮತಿ ಹೇಮಾವತಿ ಕುವೆಂಪು : — ಸಂಪಾದಕ ದೇ. ಜವರೇಗೌಡ ; ಪ್ರಕಾಶನ ; ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್ತು, ಕವಿಶೈಲ, ಮೈಸೂರು-೫೭೦೦೧೨ : ೧೯೮೪. ೧೯೬+೪ ಬೆಲೆ: ಸಾದಾಪ್ರತಿ. ೧೫.೦೦, ಕ್ಯಾಲಿಕೋ ಪ್ರತಿ ರೂ. ೨೪.೦೦.

ಇದು ಶ್ರೀಮತಿ ಹೇಮಾವತಿ ಕುವೆಂಪು ಅವರು ದೈವಾಧೀನರಾದ ವರ್ಷಕ್ಕೆ ಹೊರಬಂದ ಸಂಸ್ಮರಣ ಗ್ರಂಥ. ಕವಿ ಪತ್ನಿಯರ ಸ್ಮರಣೆಗಾಗಿ ಹೊರ ಬಂದಿರುವ ಕೃತಿಗಳಲ್ಲಿ ಮೊದಲನೆಯದು ಬಹುಶಃ ಕಡೆಯದು ಆಗಬಹುದು. ಏಕೆಂದರೆ ಸಂಪಾದಕರೆ ಹೇಳಿರುವಂತೆ ಶ್ರೀ ಮಾತೆ ಹೇಮಾವತಿಯರು "ಸಾಹಿತಿಯಲ್ಲ, ವಾಗ್ಮಿಯಲ್ಲ, ವಿಶ್ವಸಂಸ್ಥೆಯ ರಾಯಭಾರಿಯಲ್ಲ, ರಾಜ್ಯಪಾಲೆಯಲ್ಲ, ವಿಜ್ಞಾನಿಯಲ್ಲ, ಪ್ರಧಾನಿಯೂ ಅಲ್ಲ; ಆದರೆ ಇವೆಲ್ಲವನ್ನು ಮೀರಿದ ತಪಸ್ವಿನಿ." ಕವಿ ವಿಭೂತಿಯನ್ನು ರೂಪಿಸಿದ ಅನ್ನಪೂರ್ಣೆ, ದೇವಮಾನ್ಯೆ ಅಕೀರ್ತಿ ಕನ್ಯೆ, ಅಹಂ ಶೂನ್ಯೆ, ನಿತ್ಯಧನ್ಯೆಯಾದ ಗೃಹಸ್ತ್ರೀ. ಹಾಗಿದ್ದುದರಿಂದಲೇ ಕವಿ ಕುವೆಂಪು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಸೃಷ್ಟಿಸಲು ಸಾಧ್ಯವಾಯ್ತು. ಇಲ್ಲಿ ಕಾಣುವ ಸ್ತ್ರೀರತ್ನಗಳಿಗೆ ಅವರೇ ಮೂಲ ಮಾತೃಕೆ. ಇಂಥ ಚಿರತಪಸ್ವಿನಿ, ನೀರವಧ್ಯಾನವಧೂ, ಮೂಕಸತಿ, ಗೋಚರಾತೀತೆ, 'ಪೆಣ್ಣೆಂಬ ತಪಕೆ ನಿರುಪಮ ಪ್ರತಿಮೆ'ಯಾದ ಮಾತೆ ಹೇಮಾವತಿಯವರ ನೆನಪಿಗಾಗಿ ಅರ್ಪಿಸಿರುವ ಈ ಕೃತಿ 'ಗೃಹತಪಸ್ವಿನಿಯರಿಗೆ ತೋರಿರುವ ಗೌರವಾದರಗಳ, ಕೃತಜ್ಞತೆಯ ಕುರುಹು (ಸಂಕೇತ)

ಇದರಲ್ಲಿ ಒಂದು ಕವನವೂ ೧೪ ಲೇಖನಗಳೂ ಸಂಕಲಿತವಾಗಿವೆ. ಶ್ರೀಮತಿಯವರನ್ನು ಹತ್ತಿರದಿಂದ ಕಂಡವರು, ಬಂಧುಗಳು, ಆತ್ಮೀಯರು ಕವಿಗಳು ಹೀಗೆ ಒಟ್ಟು ೧೫ ಮಂದಿ ತಮ್ಮ ಅನಿಸಿಕೆಗಳನ್ನು, ಕವಿ ದರ್ಶನಕ್ಕೆ ದರ್ಶಿನಿಯಾದ ಮಾತೆಯ ನಿತ್ಯ ಬದುಕನ್ನೂ ನಿರಾಡಂಬರ ಸರಳ ಜೀವನವನ್ನು ತಮ್ಮ ಲೇಖನದಲ್ಲಿ ಪಡಿಮೂಡಿಸುವುದರ ಮೂಲಕ ತಮ್ಮ ನಮನಗಳನ್ನು ಸಲ್ಲಿಸಿದ್ದಾರೆ. ಹೆಣ್ಣು ಹೆಣ್ಣಿನ ಹೃದಯವನ್ನು ಚೆನ್ನಾಗಿ ಅರಿಯಬಲ್ಲಳು ಎಂಬುದಕ್ಕೆ ಇಲ್ಲಿ ಕಾಣುವ ಐದು ಮಂದಿ ಲೇಖಕಿಯರ ಅನಿಸಿಕೆಗಳು ಸಾಕ್ಷಿಯಾಗಿವೆ. ಇವರೆಲ್ಲರು ಆ ಮಾತೆಯನ್ನು ಸೋದರಿಯಾಗಿ, ಅಕ್ಕನಾಗಿ, ಅಮ್ಮನಾಗಿ ಕಂಡಿದ್ದಾರೆ. ಕೃತಿಯ ಕಡೆಯ 'ನುಡಿನಮನ'ದಲ್ಲಿ ೨೨ ಮಂದಿ ಹೆಸರಾಂತ ಕವಿಗಳು, ಗಣ್ಯರು,

ಹಿರಿಯರು ಆತ್ಮೀಯರು ಕವಿವರ್ಯ ಕುವೆಂಪುರವರಿಗೆ ಕಳುಹಿಸಿರುವ ಶೋಕ ಸಂದೇಶಗಳಿವೆ.

ಪ್ರಾರಂಭದ ಕವನ ಕೆ. ಚಿದಾನಂದರ 'ಉದಯರವಿಯ ಛವಿ' ಶ್ರೀಮತಿ ಹೇಮಾವತಿಯವರ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. "ಜೀವನದ ಕಠಿಣ ಪರೀಕ್ಷೆಗಳಲಿ ನೀವು ನೂರಕ್ಕೆ ನೂರು ಪಡೆದು ಉತ್ತೀರ್ಣರಾದಿರಿ" ಎಂಬ ಸಾಲುಗಳು ಅರ್ಥಪೂರ್ಣವಾಗಿವೆ. ಶ್ರೀಮತಿ ಶಾಂತೀದೇವಿ ಮಾಳವಾಡರು 'ಸೋದರಿ ಹೇಮಾವತಿ'ಯಲ್ಲಿ ಕಂಡಿದ್ದ ಆಧ್ಯಾತ್ಮ ಜೀವನ, ಆತ್ಮೀಯತೆಯ ಸರಳ ಸ್ವಭಾವವನ್ನು ವಿವರಿಸಿ, ಗೃಹತಪಸ್ವಿನಿಯಾಗಿದ್ದರೆಂಬುದನ್ನು ಹೇಳಿದ್ದಾರೆ. "ದುಂಡು ಮುಖ, ಹೊಳೆವ ಕಣ್ಣು, ಪುಟ್ಟ ಹಣೆ, ಹಣೆಯಲ್ಲಿ ದೊಡ್ಡ ಕುಂಕುಮ, ನಡುವೆ ಬೈತಲೆ ತೆಗೆದು ಬಾಚಿಕೊಂಡು ಬಿಗಿದು ಗಂಟು ಕಟ್ಟಿದ್ದರು. ಸಾಧಾರಣ ಎತ್ತರ, ಎತ್ತರಕ್ಕೆ ತಕ್ಕ ಮೈಕಟ್ಟು, ಸಾದಾ ಸೀರೆ ಕೈಯಲ್ಲೆರಡು ಬಂಗಾರದ ಬಳೆ, ಜೊತೆಗೆ ಒಂದೆರಡು ಗಾಜಿನ ಬಳೆ, ಮೂಗಿನಲ್ಲಿ ವಜ್ರದ ಮೂಗುಬೊಟ್ಟು ಕೊರಳಲ್ಲಿ ಮಂಗಳ ಸೂತ್ರದ ಬಂಗಾರದೆಳೆಯನ್ನು ಬಿಟ್ಟರೆ, ಬೇರೆ ಆಭರಣಗಳಿರಲಿಲ್ಲ. ಗಂಭೀರ ಮುಖಮುದ್ರೆ, ಅರೆಬಿರಿದ ತುಟಿಯಲ್ಲಿ ಮಂದಹಾಸ, ಸೌಮ್ಯ ಸ್ವಭಾವ" ಎಂಬ ವರ್ಣನೆ ಹೇಮಾವತಿಯವರ ಸರಳ ಶುಚೀ ಜೀವನದ ಪ್ರತಿಬಿಂಬವಾಗಿದೆ.

ಶ್ರೀ ಬು. ಕಾ. ಸುಬ್ಬರಾಯಾಚಾರ್ ಅವರು ಈ 'ಗೃಹತಪಸ್ವಿನಿ'ಗೆ ತಂದೆ ದೇವಂಗಿ ರಾಮಣ್ಣಗೌಡರ ವೈಚಾರಿಕ ದೃಷ್ಟಿ ಎಷ್ಟರಮಟ್ಟಿಗೆ ಪ್ರಭಾವ ಬೀರಿತ್ತೆಂಬುದನ್ನು ತಮ್ಮ ಲೇಖನದಲ್ಲಿ ವಿಸ್ತರಿಸಿದ್ದಾರೆ. "ಶ್ರೀಮಂತತೆಯ ನಡುವೆ ಅವರು ಮುಗ್ಧವಾಗಿ ಬೆಳೆದರು" ಎಂಬ ಮಾತು ಮಾತೆಯವರ ಬಾಲ್ಯ ಜೀವನವನ್ನು ಚಿತ್ರಿಸುತ್ತದೆ. ಸರಳ ಸಾಕಾರ ಮೂರ್ತಿ ಕವಿ ವಿಭೂತಿಯನ್ನು ಕೈಹಿಡಿದ ಈ ಕನ್ಯೆ ಸದ್ಗೃಹಿಣಿಯಾಗಿ ಮುಂದೆ ಮೈಸೂರಿನ ಉದಯರವಿಯಲ್ಲಿ ಹೇಗೆ ಕವಿಯ ಸಾಹಿತ್ಯ ಸೃಷ್ಟಿಗೆ ಪ್ರೇರಕ ಶಕ್ತಿಯಾಗಿ "ಲೋಕರಂಗದಲ್ಲಿ ಸತಿ ನಿತ್ಯದಲ್ಲಿ ಭಗವತಿ"ಯಾದರೆಂಬುದನ್ನು ವರ್ಣಿಸಿದ್ದಾರೆ.

ಶ್ರೀ ದಾಸೆಗೌಡರು ಮನೆಯ ಒಳ-ಹೊರಗುಗಳನ್ನು ಚೊಕ್ಕಟವಾಗಿಡುವ ಆ ಮಾತೆ ಮಾತೃ ವಾತ್ಸಲ್ಯದ ಖನಿಯಾಗಿದ್ದರೆಂದೂ ಹಾಗಿದ್ದುದರಿಂದಲೇ ಅವರಿಗೆ ತನ್ನ ಮಕ್ಕಳು, ಹೊರಗಿನ ಮಕ್ಕಳೆಂಬ ಭೇದವಿರಲಿಲ್ಲವೆಂದು ಉದಾಹರಣೆಯೊಡನೆ ತಿಳಿಸಿದ್ದಾರೆ. ಶ್ರೀಮತಿ ಹೇಮಾವತಿಯವರು ಎಷ್ಟು-ಸರಳ ಮೃದು ಸ್ವಭಾವದವರೋ ಕೆಲವು ಸಂದರ್ಭಗಳಲ್ಲಿ ಅಷ್ಟೇ ಕಠಿಣರಾಗುತ್ತಿದ್ದ

ರೆಂಬುದನ್ನು ಲೇಖಕರಿಗೆ ಒಮ್ಮೆ ಹೇಳಿದ ಕೆಲಸ ಮಾಡದಿದ್ದಕ್ಕಾಗಿ ಆ ತಾಯಿ ಅವರ ಬಗ್ಗೆ ಮೌನಿಯಾದ ಒಂದು ಘಟನೆಯನ್ನು ಉದಾಹರಿಸಿದ್ದಾರೆ.

ಡಾ|| ಶಾಂತಾ ಪ್ರಭುಶಂಕರ್ ಅವರು ಹೇಮಾವತಮ್ಮನವರ ಸರಳತೆ, ದೈವ ಭಕ್ತಿ, ಪತಿಭಕ್ತಿಯನ್ನೂ ಆಧ್ಯಾತ್ಮಿಕ ಆಸಕ್ತಿಯನ್ನು ತಮ್ಮ ಲೇಖನದಲ್ಲಿ ಸೆರೆ ಹಿಡಿದಿದ್ದಾರೆ. ಅವರ ಹಲವು ಚರ್ಚೆಯ ವಿಚಾರಗಳಲ್ಲಿ ರಾಮಕೃಷ್ಣ ಪರಮಹಂಸ, ಶಾರದಾದೇವಿ, ಸ್ವಾಮಿ ವಿವೇಕಾನಂದರ ವಿಚಾರಗಳು ಪ್ರಮುಖವಾಗಿದ್ದುದನ್ನು ಹೇಳಿದ್ದಾರೆ.

'ಉದಯರವಿಯ ಬೆಳಗು ಶ್ರೀ ಗುರುಪತ್ನಿಯವರು' ಎಂಬ ಲೇಖನದಲ್ಲಿ ಶ್ರೀಮತಿ ಸಾವಿತ್ರಮ್ಮನವರು ಸರಳತೆಯ ಸಾಕಾರಮೂರ್ತಿ ಹೇಮಾವತಿ ಅಕ್ಕ ನವರ ನಿರಾಡಂಬರ ಜೀವನಕ್ರಮವನ್ನೂ ಆಧ್ಯಾತ್ಮಿಕ ನಿಲುವನ್ನು ಎತ್ತಿ ತೋರಿ ಸಿದ್ದಾರೆ. ಅವರು ಸರಳ ವಿವಾಹ ಪದ್ಧತಿ (ಮಂತ್ರಮಾಂಗಲ್ಯ)ಗೆ ಕೊಟ್ಟಿದ್ದ ಮಹತ್ವವನ್ನು ವಿವರಿಸಿದ್ದಾರೆ. ಮನೆಯ ಒಳಗಿನ ಅಚ್ಚುಕಟ್ಟುತನ, ಹೊರಗಿನ ತೋಟಗಾರಿಕೆಯಲ್ಲಿ ತೋರಿದ್ದ ಆಸಕ್ತಿ, ಅಂತೆಯೇ ಕುಶಲಕಲೆಗಳಲ್ಲಿ ಕಾಣುತ್ತಿದ್ದ ಕೈಚಳಕ ಇವುಗಳಲ್ಲಿ ಆ ಮಾತೆಯವರ ಪ್ರತಿಭೆಯ ಹಲವು ಮುಖಗಳನ್ನು ಕಾಣಿಸಿದ್ದಾರೆ.

ಶ್ರೀಮತಿ ಎಂ. ಪಿ. ಪದ್ಮಾವತಿಯವರು ಶ್ರೀಮತಿ ಹೇಮಾವತಿಯವರ ದೈವ ಶ್ರದ್ಧೆ, ಹೊರಗಿನವರೊಂದಿಗೆ ಅವರು ಆತ್ಮೀಯವಾಗಿ ಬೆರತುಕೊಳ್ಳುತ್ತಿದ್ದ ರೀತಿ ಯನ್ನು ಚಿತ್ರಿಸಿದ್ದಾರೆ. ದೇವಂಗಿ ಚಿ. ಚಂದ್ರಶೇಖರ ಅವರ ಲೇಖನ ಬಂಧು ವಾಗಿ ಹೇಮಾವತಿಯವರ ಬದುಕನ್ನು ಕಂಡವರ ಅಭಿವ್ಯಕ್ತಿ. ಕವಿಯ ಬದುಕಿಗೆ ಚಾಲಕಶಕ್ತಿಯಾಗಿದ್ದ ಅವರು ಸಮಾರಂಭಗಳಲ್ಲಿ ಕವಿಗೆ ಸಮಭಾಗಿ ಆಗಿದ್ದುದು ಅಪರೂಪ. ಆ ಶಿವ–ಶಿವೆಯರ ಜೋಡಿ ಕಂಡುದು ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯಸಮ್ಮೇಳನದ ಸಂದರ್ಭದಲ್ಲಿ. ಹಾಗಿದ್ದರಿಂದಲೇ ಪುಟ್ಟಪ್ಪನವರ 'ರಸ ತಪಸ್ಯೆಯ ಕಾಣಿಕೆ'ಯು 'ಗೃಹತಪಸ್ವಿನಿ ಹೇಮಿಗೆ' ಮೀಸಲಾಯಿತೆಂದಿದ್ದಾರೆ ಲೇಖಕರು.

ಪ್ರೊ|| ದೇಜಗೌ ಅವರ 'ದಾಂಪತ್ಯದರ್ಶನ' ಲೇಖನ ಶ್ರೀ ಕುವೆಂಪು ಹಾಗೂ ಶ್ರೀಮತಿ ಹೇಮಾವತಿಯವರ ಸುಖಮಯ ದಾಂಪತ್ಯ ಜೀವನ. ಕವಿಯ ಕಾವ್ಯದ ರಸಸೃಷ್ಟಿಗೆ ದರ್ಶನರೂಪಿಯಾದುದನ್ನು ಸೊಗಸಾಗಿ ಪ್ರತಿಬಿಂಬಿಸುತ್ತದೆ. ಕವಿಗೆ ಅವರ ಸತಿಯೇ ಕಾವ್ಯದ ಪಾತ್ರವಾದರು. ಅವರ ದರ್ಶನದ ದಾರ್ಶನಿಕ ಯಾದರು ಎಂಬುದನ್ನು "ಉದಯರವಿಯಲ್ಲಿಯೇ ಬ್ರಹ್ಮಾಂಡವನ್ನು ಕಾಣುವ

ಲೋಕ ಗುರುಗಳನ್ನೆಲ್ಲ ಪ್ರತಿನಿತ್ಯ ಅಲ್ಲಿಗೆ ಆಹ್ವಾನಿಸುವ, ಜಗದ ಸದ್ದುಗದ್ದಲಗಳಿಂದ ದೂರವಿರುವ ಅನೇಕತ್ವದ ನಡುವೆಯೂ ಏಕಾಂತವಾಗಿರುವ ಕಲೆಯನ್ನು ಬಲ್ಲ ಕುವೆಂಪು ದಂಪತಿಗಳಿಬ್ಬರಿಗೂ ತಾವು ತಾವೇ ಸರ್ವಸ್ವವಾಗುತ್ತಾರೆ" ಎಂಬ ಲೇಖಕರ ಮಾತು ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಇದೇ ಲೇಖಕರು 'ಕುವೆಂಪು ದೃಷ್ಟಿಯಲ್ಲಿ ನಾರಿ' ಎಂಬ ಮತ್ತೊಂದು ಲೇಖನದಲ್ಲಿ, ಕವಿ ಕವನ ಕಾದಂಬರಿ, ಕಾವ್ಯಗಳಲ್ಲಿ ಚಿತ್ರಿಸಿರುವ ನಾರಿಯರಿಗೆಲ್ಲಾ ಮಾತೆ ಹೇಮಾವತಿಯೇ ಸ್ಫೂರ್ತಿದಾಯಕರಾಗಿದ್ದರೆಂಬುದನ್ನು ಉದಾಹರಣೆಗಳೊಡನೆ ಸ್ಪಷ್ಟಪಡಿಸಿದ್ದಾರೆ. "ಕುವೆಂಪು ಅವರು ನಾರೀಕುಲದ ಮೇಲಿಟ್ಟಿರುವ ಆದರಾಭಿಮಾನ ಗೌರವಗಳಿಗೆಪ್ರಧಾನವಾ ತಾಯಿ ಹೇಮಾವತಿಯವರ ಸ್ಫೂರ್ತಿಯೇ ಮೂಲ ಕಾರಣ" ಎಂಬ ಲೇಖಕರ ಹೇಳಿಕೆ ಮಾತೆ ಹೇಮಾವತಿಯವರ ಬದುಕಿಗೆ ಹಿಡಿದ ಕನ್ನಡಿಯಂತಿದೆ.

ಡಾ। ಎಂ. ಪಿ. ಚೌಡಯ್ಯನವರ ಲೇಖನದಲ್ಲಿ ಆ 'ಮಹಾಸತಿ ಹೇಮಾವತಿ'ಯ ಸಂಯಮ, ತಾಳ್ಮೆ, ಸಹಬಾಳ್ವೆ ಮತ್ತು ರಸಮಯ ಜೀವನ ಹಾಗೂ ದಾಂಪತ್ಯಜೀವನ ಪಡಿಮೂಡಿದೆ.

ಶ್ರೀಮತಿ ಕಮಲಾ ಹಂಪನಾ ಅವರ ಲೇಖನದಿಂದ, ಕವಿಯ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಿತ್ತ ಆ ಮಾತೆ ಕವಿಯ ಸಾಹಿತ್ಯವನ್ನೆಲ್ಲ ಓದಿ ಅರಗಿಸಿಕೊಂಡಿದ್ದುದು ವ್ಯಕ್ತವಾಗುತ್ತದೆ. "ಕುವೆಂಪುರವರ ಹೃದಯವೆಂಬ ವೀಣೆಯನ್ನು ಹೇಮಾವತಿ ಎಂಬ ಕೈ ಮಿಡಿದು ಲೋಕೋನ್ನತ ಕಾವ್ಯಧಾರೆಯನ್ನು ಹೊನಲಾಗಿ ಹರಿಸಿದೆ. ಕವಿಯನ್ನು ಮಹಾಕವಿಯನ್ನಾಗಿ ಮಾಡಿದ ಹೇಮಾವತಿಯವರ ವ್ಯಕ್ತಿತ್ವದ ಹಿರಿಮೆ ಊಹೆಗೆ ಸಿಲುಕದು" ಎಂದಿದ್ದಾರೆ ಲೇಖಕಿ. "ಹೇಮಾತಾಯಿ ಕವಿಯ ಆಧ್ಯಾತ್ಮಗುರು ಈ ಭೂಮಿಯಿಂದ ಆ ನಾಕಕ್ಕೆ ಕೈಹಿಡಿದು ನಡೆಸಿದ ದೇವತೆ"ಯಾದ್ದರಿಂದಲೇ ಕನಸಿನ ಸ್ವರ್ಗದ ಬಾಗಿಲು ಕವಿಗೆ 'ಹೇಮಿಗಂಡ'ನಾದ್ದರಿಂದ ತೆರೆಯಿತೆಂದು ಕವಿಯೇ ಹೇಳಿಕೊಂಡಿರುವ ಕವನದ ಮೂಲಕ ಮುಂದಿನ ಲೇಖನದಲ್ಲಿ ಸಾದರಪಡಿಸಿದ್ದಾರೆ. ಇಂಥ 'ಉದಯರವಿಯ ಶ್ರೀಮಾತೆ'ಯನ್ನು ಕಂಡಿರುವ ಶ್ರೀ ವಿ. ಜಿ. ಕೃಷ್ಣಮೂರ್ತಿ ಅವರು (ಲೇಖನದ ಮೂಲಕ) ಓದುಗರಿಗೆ ಕಾಣಿಸಿದ್ದಾರೆ.

ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ 'ಲೋಕಕ್ಕೆ ಅವತರಿಸಿದಳು ಹೆಸರಾಂತು ಹೇಮಾವತಿ' ಎಂಬುದು ಕಡೆಯ ಲೇಖನ. ಕುವೆಂಪು ಅವರ ಕಾವ್ಯಾರಾಧನೆಗೆ ಹೇಮಾವತಿಯವರು ಮನೆಯನ್ನೇ ತಪೋವನವನ್ನಾಗಿ

ಪರಿವರ್ತಿಸಿದ್ದರೆಂಬ ಲೇಖಕರ ಮಾತುಗಳು ಮಾತೆಯವರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತದೆ.

ಹೀಗೆ ಮಾತೆ ಹೇಮಾವತಿಯವರ ಚೈತನ್ಯಕ್ಕೆ ಬೆಳಕು ತೋರುವ ಈ ಲೇಖನಗಳಲ್ಲಿ ಸರಳ ಸುಂದರ ನಿರೂಪಣೆಗಳಾಗಿವೆ. ಅವರ ವ್ಯಕ್ತಿಚಿತ್ರಣದಲ್ಲಿ; ಬದುಕಿನ ಸರಳತೆಯನ್ನು ವಿವರಿಸುವಲ್ಲಿ ಕೆಲವು ಲೇಖನಗಳಲ್ಲಿ ಪುನರುಕ್ತಿಗೊಂಡಂತೆ ಕಂಡರೂ ಅದು ವಿವಿಧ ಲೇಖಕರು ತಾವು ಕಂಡ ಸರಳ ಸಾಕಾರ ಮೂರ್ತಿಯ ಏಕಮುಖ ವ್ಯಕ್ತಿನಿಷ್ಠ ಬದುಕಿನ ನಿರೂಪಣೆ ಎಂಬುದರಿಂದ ಪರಿಹಾರಕ್ಕೆ ದಾರಿಯಾಗಿದೆ. ಮಾತೆ ಹೇಮಾವತಿಯವರ ಸರಳ ಸುಂದರ ಭಾವಚಿತ್ರದ ಮುಖಪುಟದಿಂದ, ನಾಲ್ಕು ಇತರ ಭಾವಚಿತ್ರಗಳ ಒಳಪುಟಗಳಿಂದ, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಮತಿ ಹೇಮಾವತಿಯವರ ಕೈ ಬರಹದ ಕವನ ಹಾಗೂ ಹೊಸವರ್ಷದ ಶುಭಾಶಯಗಳನ್ನು ಹೊತ್ತ ಚಿತ್ರದ ಪಡಿಯಚ್ಚಿನಿಂದ ಕೂಡಿದ ಸುಂದರವಾದ ಈ ಗ್ರಂಥ, ತಪ್ಪಿಲ್ಲದ ಮುದ್ರಣ, ಉತ್ತಮ ಲೇಖನಗಳಿಂದ ಕೂಡಿದ್ದು ಆ ಕವಿಸತಿ ಸರ್ವಮಂಗಳೆಯ ಸರಳ ಬದುಕಿಗೆ ಸಾಕ್ಷಿಯಾಗಿದೆ. ಈ ನಿಟ್ಟಿನಲ್ಲಿ ಸಂಪಾದಕರ ಶ್ರದ್ಧಾಸಕ್ತಿಗಳು ಅವಿಸ್ಮರಣೀಯ; ಅನುಕರಣೀಯ.

ಎಚ್. ಬಿ. ಯಶೋಧರಾ

*　　　*　　　*

ಕೃತಿ : **ಮಕ್ಕಳೇ ರಾಷ್ಟ್ರದ ಸಂಪತ್ತು**, ಲೇಖಕಿ : ವಿ. ಎಸ್. ಕಮಲ, ಪ್ರಕಾಶಕರು : ಅರುಣ ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ : ೧೯೮೩, ಪುಟ : ೧೪೬, ಬೆಲೆ : ರೂ. ೯-೦೦.

ಮಕ್ಕಳನ್ನು ಯಾವ ರೀತಿಯಲ್ಲಿ ಬೆಳೆಸಬೇಕು? ಯಾವ ರೀತಿಯ ಕ್ರಮಗಳನ್ನು ಕೈಗೊಂಡರೆ ಅವರ ವ್ಯಕ್ತಿತ್ವದ ಸರ್ವತೋಮುಖ ವಿಕಾಸವಾದೀತು? —ಮುಂತಾದ ಪ್ರಶ್ನೆಗಳಿಗೆ ಪ್ರಕೃತ ಪುಸ್ತಕದಲ್ಲಿ ಉತ್ತರ ದೊರೆಯುತ್ತದೆ. ಸೋವಿಯತ್ ಒಕ್ಕೂಟದಲ್ಲಿ ಐದು ವರ್ಷಗಳವರೆಗೆ ಇದ್ದ ಲೇಖಕಿ, ಸೋವಿಯತ್ ಒಕ್ಕೂಟದಲ್ಲಿ ಮಕ್ಕಳ ವ್ಯಕ್ತಿತ್ವ ಹೇಗೆ ವಿಕಾಸವಾಗಿದೆ? ಮಕ್ಕಳ ಶೈಕ್ಷಣಿಕ ಹಾಗೂ ಮಾನಸಿಕ ಬೆಳವಣಿಗೆಗಳಿಗೆ ಅಲ್ಲಿ ದೊರೆತಿರುವ ಅವಕಾಶಗಳು ಯಾವುವು? ಎನ್ನುವುದರ ಬಗ್ಗೆ ಸಮರ್ಪಕ ಅಧ್ಯಯನ ನಡೆಸಿ ಈ ಪುಸ್ತಕ ಬರೆದಿದ್ದಾರೆ.

ಇದರಲ್ಲಿ ಗಂಡೋ ಹೆಣ್ಣೋ ಎಲ್ಲಾ ಒಂದೇ, ಬಾಲೋದ್ಯಾನಗಳು ಪ್ರತಿ

ಯೊಬ್ಬನಿಗೂ ಶಿಕ್ಷಣ ಸೌಲಭ್ಯ, ಅರಣ್ಯದಲ್ಲೂ ಶಾಲೆ, ಆಟ ಓಟ, ಪ್ರತಿಭೆಗೆ ಪೋಷಣೆ ಪ್ರೋತ್ಸಾಹ, ಬಾಲಚಮೂಗಳು—ಮುಂತಾದ ಅಧ್ಯಾಯಗಳಿವೆ. ಈ ಅಧ್ಯಾಯಗಳಲ್ಲಿ ವ್ಯಕ್ತವಾಗಿರುವ ಕೆಲವು ಮುಖ್ಯ ಅಂಶಗಳು ಇವು: ೧) ಸೋವಿಯತ್ ಒಕ್ಕೂಟದಲ್ಲಿ ಮಹಿಳೆ ಪುರುಷನೊಂದಿಗೆ ಸಮಾನ ಹಕ್ಕುಗಳನ್ನು ಪಡೆಯಲು ಆ ದೇಶದ ಸಾಮಾಜಿಕ ವ್ಯವಸ್ಥೆ ಕಾರಣವಾಗಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸರ್ಕಾರವೇ ಆರ್ಥಿಕ ನೆರವು ನೀಡುತ್ತದೆ. ವೈದ್ಯಕೀಯ ಚಿಕಿತ್ಸೆ ಉಚಿತ. ಮನರಂಜನಾ ಸೌಲಭ್ಯವೂ ಉಂಟು. ವಿದ್ಯಾಭ್ಯಾಸ ಮುಗಿದ ಅನಂತರ ಆಕೆ ತನಗೆ ಸೂಕ್ತವೆನಿಸಿದ ಉದ್ಯೋಗವನ್ನು ಆರಿಸಿಕೊಳ್ಳಬಹುದು. ಈ ಸ್ವಾತಂತ್ರ್ಯ ಆ ರಾಷ್ಟ್ರದಲ್ಲಿ ಎಲ್ಲ ಹೆಣ್ಣುಮಕ್ಕಳಿಗೂ ಇದೆ. ೨) ಬಾಲ್ಯದಲ್ಲಿ ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮ. ಈ ಮನಸ್ಸನ್ನು ಯಾವ ರೀತಿಯಾದರೂ ರೂಪಿಸಬಹುದು. ಸೋವಿಯತ್ ರಾಷ್ಟ್ರದಲ್ಲಿ ಅಧ್ಯಾಪಕರು ಮತ್ತು ತಂದೆತಾಯಿಗಳು ಅಲ್ಲಿನ ಮಕ್ಕಳ ವ್ಯಕ್ತಿತ್ವ ವಿಕಾಸಕ್ಕಾಗಿ ನಡೆಸುವ ಪ್ರಯತ್ನ ಸಾಧನೆಗಳು ಗಮನಾರ್ಹವಾದುವು. ೩) ಸೋವಿಯತ್ ಒಕ್ಕೂಟದಲ್ಲಿ ನಿರಕ್ಷರತೆ ಎಂಬುದಿಲ್ಲ. ನಿರಕ್ಷರತೆಯನ್ನು ಸಂಪೂರ್ಣ ತೊಡೆದುಹಾಕಲು ರಾಷ್ಟ್ರವ್ಯಾಪಿ ಚಳುವಳಿಯೊಂದನ್ನು ನಡೆಸಿ ಅಲ್ಲಿಯ ಮಂದಿ ಯಶಸ್ವಿಯಾಗಿದ್ದಾರೆ. ೪) ಸೋವಿಯತ್ ಒಕ್ಕೂಟದಲ್ಲಿ ಸಸ್ಯಶ್ಯಾಮಲವಾದ ಅರಣ್ಯಗಳ ನಡುವೆ ಅನೇಕ ಶಾಲೆಗಳಿವೆ. ಇವು ಕಾಯಿಲೆಪೀಡಿತರಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿರುವ ಮಕ್ಕಳಿಗಾಗಿ ಮೀಸಲಾದವು. ಈ ಶಾಲೆಗಳಲ್ಲಿ ಶಿಕ್ಷಣದೊಂದಿಗೆ ವೈದ್ಯಕೀಯ ಆರೈಕೆಯೂ ದೊರೆಯುತ್ತದೆ. ಇಂಥ ಶಾಲೆಗಳಲ್ಲಿ ಸುಮಾರು ೩೦೦ ಮಕ್ಕಳು ಅಧ್ಯಯನ ಮಾಡುತ್ತಾರೆ. ೫) ಮಕ್ಕಳ ಜೀವನದಲ್ಲಿ ಆಟ ಓಟ ಮುಖ್ಯವಾದುದು. ಸೋವಿಯತ್ ಒಕ್ಕೂಟದಲ್ಲಿ ವ್ಯಾಯಾಮ ಎನ್ನುವುದು ಯುವಕರಲ್ಲೂ ವೃದ್ಧರಲ್ಲೂ ಆಸಕ್ತಿಯ ವಿಷಯವಾಗಿದೆ. ಈ ಬಗ್ಗೆ ಬೆಳಗ್ಗೆ ೬ ಗಂಟೆಗೆ ರೇಡಿಯೋದಲ್ಲಿ ಪ್ರತಿದಿನ ಕಾರ್ಯಕ್ರಮವಿರುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಲೆಗಳ ಪಾಠಪ್ರವಚನಗಳ ವೇಳಾಪಟ್ಟಿಯಲ್ಲಿ ಕ್ರೀಡೆಯನ್ನು ಕಡ್ಡಾಯ ವಿಷಯವನ್ನಾಗಿ ಸೇರಿಸಲಾಗಿದೆ. ಅಧ್ಯಾಪಕರು ವಿದ್ಯಾರ್ಥಿಗೆ ಪಠ್ಯವಿಷಯಗಳಲ್ಲಿ ಅಂಕಗಳನ್ನು ನೀಡುವಂತೆಯೇ ಕ್ರೀಡೆಗಳಿಗೂ ಅಂಕ ನೀಡುತ್ತಾರೆ. ವಿದ್ಯಾರ್ಥಿಗಳು ಕ್ರೀಡೆಗಳಲ್ಲೂ ತೇರ್ಗಡೆಯಾಗುವುದು ಅವಶ್ಯಕ. ಕನಿಷ್ಠ ೩೦ ಬಗೆಯ ಕ್ರೀಡೆಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಾರೆ. ಸೋವಿಯತ್ ಒಕ್ಕೂಟದಲ್ಲಿ ೪೦೦೦ ಕ್ರೀಡಾಶಾಲೆಗಳು, ಕ್ರೀಡಾಕಾಲೇಜುಗಳೂ ಇವೆ. ಸುಮಾರು

೨೫೦೦೦ ಮಂದಿ ಕ್ರೀಡಾಬೋಧಕರಿದ್ದಾರೆ! ಕ್ರೀಡಾಪಟುಗಳಿಗೆ ತರಬೇತಿ ನೀಡಲು ತಗಲುವ ವೆಚ್ಚ ಮುಂತಾದವನ್ನು ಸರ್ಕಾರವೇ ವಹಿಸಿಕೊಳ್ಳುತ್ತದೆ. ೬) ಸೋವಿಯತ್ ಒಕ್ಕೂಟದಾದ್ಯಂತ ಸುಮಾರು ೭೦೦ ಯುವ ವಿಜ್ಞಾನ ಕ್ಲಬ್‌ಗಳಿವೆ. ವಿಜ್ಞಾನ ವಿಷಯದಲ್ಲಿ ಹೆಚ್ಚು ಆಸಕ್ತಿಯಿರುವ ಶಾಲಾವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಈ ಕ್ಲಬ್‌ಗಳಿಗೆ ಬಂದು ಅಲ್ಲಿಯ ಪ್ರಯೋಗಾಲಯಗಳಲ್ಲಿ ಅವರೇ ಸ್ವತಃ ಪ್ರಯೋಗಗಳನ್ನು ಮಾಡಬಹುದು. ಈ ಕಾರ್ಯಕ್ಕಾಗಿ ಸರ್ಕಾರ ವಿದ್ಯಾರ್ಥಿಗಳಿಗೆ ಹೊಲಗಳನ್ನು, ಬೀಜಗಳನ್ನು, ಕೃಷಿ ಸಾಧನಗಳನ್ನು ಒದಗಿಸುವುದು. ಸಮರ್ಥ ಅಧ್ಯಾಪಕರೊಬ್ಬರು ಈ ವಿದ್ಯಾರ್ಥಿಗಳಿಗೆ ಯುಕ್ತ ಮಾರ್ಗದರ್ಶನ ಮಾಡುತ್ತಾರೆ. ೭) ಸೋವಿಯತ್ ಒಕ್ಕೂಟದಲ್ಲಿ ಸ್ಕೌಟ್ಸ್‌ಗಳನ್ನು 'ಬಾಲಚಮೂ ಚಳುವಳಿ' ಎನ್ನುತ್ತಾರೆ. ಈ ಬಾಲಚಮೂಗಳ ಕರ್ತವ್ಯಗಳೂ ಬೇರೆಬೇರೆಯಾಗಿವೆ. ರಜಾದಿನಗಳಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಹೋಗುವುದು, ರಾಷ್ಟ್ರೀಯ ದಿನಾಚರಣೆ ಸಂದರ್ಭದಲ್ಲಿ ಧ್ವಜ ಹಾರಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು—ಮುಂತಾದ ಕಾರ್ಯಗಳನ್ನು ಬಾಲಚಮೂಗಳು ನಿರ್ವಹಿಸುತ್ತಾರೆ. ಲೆನಿನ್ ಹೆಸರಿನ ಅಖಿಲ ಒಕ್ಕೂಟಗಳ ಬಾಲಚಮೂ ಸಂಸ್ಥೆ ೧೯೨೨ರಲ್ಲಿ ಸ್ಥಾಪನೆಯಾಯಿತು. ಇಂದು ೨೫ ಮಿಲಿಯಕ್ಕಿಂತಲೂ ಹೆಚ್ಚು ಶಾಲಾ ಬಾಲಕ ಬಾಲಕಿಯರು ಈ ಸಂಸ್ಥೆಯ ಸದಸ್ಯರಾಗಿದ್ದಾರೆ. ಅವರೆಲ್ಲ ೧೦ ರಿಂದ ೧೪ ವರ್ಷದ ಎಳೆಯರು. ಯುವ ಚಮೂಸಂಸ್ಥೆ ಸೋವಿಯತ್ ಶಿಕ್ಷಣ ವ್ಯವಸ್ಥೆಯ ಒಂದು ಭಾಗವೇ ಆಗಿದೆ. ಮಕ್ಕಳಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಬೆಳೆಸುವುದು, ಅವರ ಸುಪ್ತ ಪ್ರತಿಭೆಯನ್ನು ಉದ್ದೀಪನಗೊಳಿಸುವುದು, ಸಾಮಾಜಿಕ ಜಾಗೃತಿಯನ್ನು ಮೂಡಿಸುವುದು, ಗೆಳೆತನ ಬೆಳೆಸುವುದು ಇವು ಯುವ ಚಮೂ ಸಂಸ್ಥೆಗಳ ಗುರಿ. ಬಾಲ ಚಮೂ ಸಂಸ್ಥೆಯ ಪ್ರಣಾಳಿಕೆಯಲ್ಲಿ ಉಲ್ಲೇಖಿತವಾಗಿರುವ ಸಂಸ್ಥೆಯ ಪ್ರತಿಜ್ಞಾವಿಧಿಯ ವಾಕ್ಯಗಳು ಹೀಗಿವೆ: "ಸಾಧ್ಯವಾದಲ್ಲೆಲ್ಲಾ ಪ್ರತಿಯೊಂದು ಕಡೆಯಲ್ಲೂ ನಾನು ನನ್ನ ಜ್ಞಾನವನ್ನು ದುಡಿಯುವ ಶ್ರಮಜೀವಿಗಳ ಸೇವೆಗಾಗಿ ಬಳಸಲಾಗಿಡಲು ಯಾವತ್ತೂ ಪ್ರಯತ್ನಿಸುತ್ತೇನೆ." (ಪು. ೧೨೪).

ಪುಸ್ತಕದಲ್ಲಿ ಅನೇಕ ವಾಕ್ಯಗಳು ಪುನರಾವರ್ತನೆಗೊಂಡಿವೆ: ಮುದ್ರಣದೋಷಗಳೂ ಕಾಣಿಸಿಕೊಂಡಿವೆ. ಉದಾಹರಣೆಗೆ ಸಂ-ದೇಹಗಳನ್ನು (ಪು. ೧೫) ಆಟದ ಮೈದಾನು (ಪು. ೨೮) ಭೋದನೆ (ಪು. ೩೫), ಗುಣಿತ ಭಾಗಹಾರಗಳ

(ಪು. ೩೬), ಕ-ಟ್ಟೆದ (ಪು. ೩೯), ಪ್ಯವಸ್ಥೆ (ಪು. ೫೨), ತೆರುಳುತ್ತಾರೆ (ಪು. ೬೦), ಸಾಹಿತಿಕ (ಪು. ೬೫ ಮತ್ತು ೯೩), ಅಧ್ಯಾಪಕಿ (ಪು. ೯೪), ಧಾಳಿ (ಪು. ೯೫ ಮತ್ತು ೧೨೮), ಉದ್ಯಾನವನ (ಪು. ೧೨೦), ಕಟ್ಟಿಗೆ ಕಡಿಯುುವುದು (ಪು. ೧೨೫), ಜನ್ಮಧಾತರೀ (ಪು. ೧೨೮), ಸಮಾಜಸಾಸ್ತ್ರಜ್ಞರು (ಪು. ೧೩೦), ಬಹಮಟ್ಟಿಗೆ (ಪು. ೧೩೨) ಇತ್ಯಾದಿ.

ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟ ಸ್ಥಾಪನೆಯಾಗುವುದಕ್ಕೆ ಮುಂಚೆ ರಷ್ಯಾದಲ್ಲಿ ಮಕ್ಕಳ ಸ್ಥಿತಿಗತಿ ಅಷ್ಟೇನೂ ಚೆನ್ನಾಗಿರಲಿಲ್ಲ. ಆದರೆ ಇಂದಿನ ದಿನಗಳಲ್ಲಿ ಅಲ್ಲಿನ ಮಕ್ಕಳ ಬದುಕಿನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಕಂಡುಬಂದಿದೆ. ವಿಶ್ವಸಂಸ್ಥೆಯು ವ್ಯಕ್ತಪಡಿಸಿರುವ ಮಕ್ಕಳ ಮೂಲಭೂತ ಹಕ್ಕುಗಳಿಗಿಂತಲೂ ಹೆಚ್ಚಿನ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಷ್ಯಾ ಸರಕಾರ ಅಲ್ಲಿನ ಮಕ್ಕಳಿಗೆ ದೊರಕುವಂತೆ ಮಾಡಿದೆ. ಇದು ಶ್ಲಾಘನೀಯ ವಿಚಾರ.

ಸೋವಿಯತ್ ಒಕ್ಕೂಟದಲ್ಲಿ, ಮಕ್ಕಳ ಪಾಲನೆ ಪೋಷಣೆಯ ಬಗ್ಗೆ ಅಲ್ಲಿನ ಮಕ್ಕಳು ಅನುಭವಿಸುತ್ತಿರುವ ಹಕ್ಕುಗಳು ಮತ್ತು ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸಿಕೊಡುವ ಈ ಪುಸ್ತಕ ಬಹು ಉಪಯುಕ್ತವಾದುದು.

ಆರ್. ರಾಮಕೃಷ್ಣ

* * *

ಅರಿವು ಮೈತಳೆದಾಗ: (ಸಾಮಾಜಿಕ ಕಾದಂಬರಿ), ಲೇಖಕರು: ಶ್ರೀ ಕೆಂಪಾಚಾರ್; ಪ್ರಕಾಶಕರು: ಸುಧಾಯೋಗಣ್ಣ, ಮೈಸೂರು; ಪುಟಗಳು: ೧೬೦+೧೦, ೧೯೮೩; ಬೆಲೆ; ರೂ. ೧೦.

ಗ್ರಾಮದ ಸರ್ವತೋಮುಖ ಏಳಿಗೆಗಾಗಿ ದುಡಿದ ಯುವಕ ಪ್ರಸನ್ನನ ಕಥೆಯೇ ಈ ಕಾದಂಬರಿಯ ವಸ್ತು. ಬಡತನವಿದ್ದರೂ ಕಷ್ಟಪಟ್ಟು ಓದಿ ಪದವೀಧರನಾಗಿ ಸರ್ಕಾರಿ ಕೆಲಸಕ್ಕೆ ಆಸೆ ಪಡದೆ ಗ್ರಾಮದ ಅಭಿವೃದ್ಧಿಯತ್ತ ಮನಸ್ಸುಮಾಡಿ ಅವರ ಜೊತೆಯಲ್ಲೇ ತನ್ನ ಜೀವನವನ್ನೂ ಬೆಸದುಕೊಳ್ಳುವ ಪ್ರಸನ್ನನಿಗೆ ಸಹಾಯಕರಾಗಿ ಶ್ರೀಮಂತ ಪರಮೇಶ್ವರಪ್ಪನವರು ಬೆಂಬಲಿಗರಾಗುತ್ತಾರೆ. ಅವರ ಹೆಂಡತಿ ಕಮಲಮ್ಮ ಮಗಳು ಪ್ರೇಮ, ಆ ಮನೆಯ ಸಾಕು ಹುಡುಗಿ ನಂಜು ಗ್ರಾಮದ ಸಾಹುಕಾರ ದರ್ಪದ ಪ್ರತಿರೂಪ— ರಾಜೇಗೌಡ, ಚಂದ್ರೇಗೌಡ, ಸಮಯ ಸಾಧಕ ನರಸಪ್ಪ ಈ ಬಗೆಯ ಅನೇಕ ಪಾತ್ರಗಳು ಕಾದಂಬರಿಯ ತುಂಬ ಇವೆಯಾದರೂ ಯಾವುವೂ ದೃಢವಾಗಿ ನಿಲ್ಲುವಂಥವಲ್ಲ. ಎಲ್ಲವೂ ಅತ್ತ ಬಂದು ಇತ್ತಹೋಗಿ ಬಿಡುತ್ತವೆ. ಲೇಖಕರ

ಪ್ರಥಮ ಕಾದಂಬರಿಯಾಗಿದ್ದು ಪ್ರಥಮ ಬರಹದಲ್ಲಿ ಕಾಣಬರುವ ಅನೇಕ ಲೋಪದೋಷಗಳೂ ಇವೆ. ಲೇಖಕರು ತಾವು ಬರೆದದ್ದನ್ನು ಮತ್ತೆ ಮತ್ತೆ ಓದಿ, ತಿದ್ದಿ ಪರಿಷ್ಕರಿಸಿದಂತೆ ಕಾಣುವುದಿಲ್ಲ. ಅವರಿವರ ಹೊಗಳಿಕೆಯಿಂದ ನಮ್ಮ ಬರಹ ಸುಧಾರಿಸದು. ಬರೆದದ್ದನ್ನು ಓದಿ, ತಿದ್ದಿ, ಪರಿಷ್ಕರಿಸಿದ್ದರೆ ಒಳ್ಳೆಯದಿತ್ತೇನೋ ಅನ್ನಿಸುತ್ತದೆ. ಇದು ಪ್ರಥಮ ಕಾದಂಬರಿಯಾಗಿರುವುದರಿಂದ ಲೇಖಕರು ಮುಂದೆ ಸುಧಾರಿಸಬಹುದು. ನಡೆವವನು ಎಡುವುದು ಸಹಜ— ಎನ್ನುವ ತತ್ತ್ವದ ಮೇಲೆ ಈ ಕಾದಂಬರಿಯನ್ನೂ ಸ್ವಾಗತಿಸಬಹುದು.

ಬಿ. ಶಾಮಸುಂದರ

ಉತ್ತಮರ ಸಂಪತ್ತು ದಲಿತರ ದುಃಖ ನಿವಾರಣೆಯಿಂದ ಸಾರ್ಥಕವಾಗುತ್ತದೆ.

—ಕಾಳಿದಾಸ

ದೇಶದಲ್ಲಿ ಸುಭಿಕ್ಷವಿರುವಾಗ ಬಡವನಾಗಿರುವುದೂ ಕ್ಷಾಮವಿರುವಾಗ ಶ್ರೀಮಂತನಾಗಿರುವುದೂ ನಾಚಿಕೆಯ ವಿಷಯ.

—ಕನ್‌ಫ್ಯೂಷಿಯಸ್

ವಿದ್ವಾಂಸರು ನೋಡಿ ಸಂತೋಷಪಡುವವರೆಗೂ ತನ್ನ ಕಾರ್ಯ ಕೌಶಲವು ಚೆನ್ನಾಗಿದೆಯೆಂದು ಯಾರೂ ತಿಳಿಯಬಾರದು.

—ಕಾಳಿದಾಸ

ಕಣ್ಣಿಲ್ಲದವನಿಗೆ ಕನ್ನಡಿಯಿಂದ ಹೇಗೆ ಪ್ರಯೋಜನವಿಲ್ಲವೋ ಹಾಗೆಯೇ ಸ್ವಬುದ್ಧಿ ಇಲ್ಲದವನಿಗೆ ಶಾಸ್ತ್ರಜ್ಞಾನದಿಂದ ಪ್ರಯೋಜನವಿಲ್ಲ.

—ಚಾಣಕ್ಯ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ :: ಮೈಸೂರು-೪

Reg. No. KRNN. 29 / WPP 6 | LICENSE No. 21 LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಾಂಟ್ಸಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyenga
Manager Karnataka State Adult Education Council Pres
and Published by Karnataka State Adult Education Counc
Mysore city (India)